ಸೋಮವಾರ, ಅಕ್ಟೋಬರ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 280 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ





### ಬೋಧನಾ ಮಾಧ್ಯಮ: ಅಮಿತ್ ಶಾ ನೇತೃತ್ವದ ಸಂಸದೀಯ ಸಮಿತಿ ಶಿಫಾರಸು

# ಐಐಟಿ: ಹಿಂದಿ ಅಥವಾ ಸ್ಥಳೀಯ ಭಾಷೆ

ನವದೆಹಲಿ (ಪಿಟಿಐ): ಐಐಟಿಯಂತಹ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮತ್ತು ತಾಂತ್ರಿಕೇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದಿ ಅಥವಾ ಪ್ರಾದೇಶಿಕ ಭಾಷೆಗಳನ್ನು ಬೋಧನಾ ಮಾಧ್ಯಮವಾಗಿ ಬಳಸಬೇಕು. ಹಿಂದಿ ಭಾಷಿಕ ಪ್ರದೇಶದಲ್ಲಿ ಹಿಂದಿಯನ್ನೂ, ಇತರ ಪ್ರದೇಶಗಳಲ್ಲಿ ಅಲ್ಲಿನ ಸ್ಥಳೀಯ ಭಾಷೆಯನ್ನೂ ಬಳಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸಮಿತಿಯು ಶಿಫಾರಸು ಮಾಡಿದೆ.

ವಿಶ್ವ ಸಂಸ್ಥೆಯ ಅಧಿಕೃತ ಭಾಷೆಗಳಲ್ಲಿ ಹಿಂದಿಯನ್ನೂ ಸೇರಿಸಬೇಕು ಎಂದು ವರದಿಯಲ್ಲಿ ಒತ್ತಾಯ ಮಾಡಲಾಗಿದೆ.

ಸಂಸದೀಯ ಸಮಿತಿಯ 11ನೇ ವರದಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಲಾಗಿದೆ. ಎಲ್ಲ ರಾಜ್ಯಗಳಲ್ಲಿಯೂ ಇಂಗ್ಲಿಷ್‌ಗಿಂತ ಸ್ಥಳೀಯ ಭಾಷೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದೂ ವರದಿಯಲ್ಲಿ ಹೇಳಲಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇಂಗ್ಲಿಷ್ ಬಳಕೆಯನ್ನು ಐಚ್ಛಿಕಗೊಳಿಸಬೇಕು ಎಂದು ವರದಿ ಸಲಹೆ ನೀಡಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಸಮಿತಿಯು ಶಿಫಾರಸುಗಳನ್ನು ಮಾಡಿದೆ. ಅದರ ಅನ್ವಯವೇ ಅಧಿಕೃತ ಭಾಷೆ ಅಥವಾ ಪ್ರಾದೇಶಿಕ ಭಾಷೆಗಳು ಬೋಧನಾ ಮಾಧ್ಯಮವಾಗಬೇಕು ಎಂದು ಸಲಹೆ ಕೊಟ್ಟಿದೆ ಎಂದು ಸಮಿತಿಯ ಉಪ ಮುಖ್ಯಸ್ಥ ಭರ್ತೃಹರಿ ಮಹತಾಬ್ ಹೇಳಿದ್ದಾರೆ.

‘ಎ’ ವರ್ಗದ ರಾಜ್ಯಗಳಲ್ಲಿ (ಹಿಂದಿ ಭಾಷಿಕ ರಾಜ್ಯಗಳು) ಹಿಂದಿಗೆ ಗೌರವಾರ್ಹ ಸ್ಥಾನ ಕೊಡಬೇಕು, ಈ ರಾಜ್ಯಗಳಲ್ಲಿ ಹಿಂದಿ ಬಳಕೆ ಶೇಕಡ ನೂರರಷ್ಟು ಇರಬೇಕು. ಹಿಂದಿ ಭಾಷಿಕ ರಾಜ್ಯಗಳಲ್ಲಿರುವ ಐಐಟಿಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳು ಮತ್ತು ಕೇಂದ್ರೀಯ ವಿದ್ಯಾಲಯಗಳಲ್ಲಿ ಹಿಂದಿಯು ಬೋಧನಾ ಮಾಧ್ಯಮವಾಗಬೇಕು. ಇತರ ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಯು ಬೋಧನಾ ಮಾಧ್ಯಮವಾಗಬೇಕು. ಬನಾರಸ್ ಹಿಂದೂ ವಿಶ್ವವಿದ್ಯಾಲಯ, ದೆಹಲಿ ವಿಶ್ವವಿದ್ಯಾಲಯ, ಜಾಮಿಯಾ ಮಿಲಿಯಾ ಇಸ್ಲಾಮಿಯಾ, ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯ ಮುಂತಾದ ಸಂಸ್ಥೆಗಳಲ್ಲಿ ಈಗ ಶೇ 20ರಿಂದ ಶೇ 30ರಷ್ಟು ಮಾತ್ರ ಹಿಂದಿ ಬಳಕೆ ಆಗುತ್ತಿದೆ. ಇನ್ನು ಮುಂದೆ ಅದು ಶೇ 100ಕ್ಕೆ ಏರಬೇಕು ಎಂದು ಮಹತಾಬ್ ಹೇಳಿದ್ದಾರೆ.

ಇಂಗ್ಲಿಷ್ ವಿದೇಶಿ ಭಾಷೆ. ಹಾಗಾಗಿ ಆ ವಸಾಹತುಶಾಹಿ ಮನಃಸ್ಥಿತಿಯನ್ನು ಕೈಬಿಡಬೇಕು ಎಂದು ಅವರು ಹೇಳಿದ್ದಾರೆ.

ಇಂಗ್ಲಿಷ್ ‘ಅನ್ಯ ಭಾಷೆ’ ಮತ್ತು ‘ಅದನ್ನು ನಿರ್ಮೂಲನ ಮಾಡಲು ನಾವು ಬಯಸಿದ್ದೇವೆ’. ಅದರ ಸ್ಥಾನದಲ್ಲಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳನ್ನು ಸ್ಥಾಪಿಸಬೇಕು ಎಂದು ಎರಡನೇ ಉಪ ಸಮಿತಿಯ ಸಂಚಾಲಕಿಯಾಗಿದ್ದ ಬಿಜೆಪಿ ಸಂಸದೆ ರೀಟಾ ಬಹುಗುಣ ಜೋಶಿ ಹೇಳಿದ್ದಾರೆ.

ಹಿಂದಿ ಭಾಷಿಕ ರಾಜ್ಯಗಳಲ್ಲಿ ಕೆಲಸ ಮಾಡಲು ಉದ್ದೇಶಪೂರ್ವಕವಾಗಿ ಹಿಂದೇಟು ಹಾಕುವ ಅಧಿಕಾರಿಗಳಿಗೆ ಎಚ್ಚರಿಕೆ ನೀಡಬೇಕು. ಎಚ್ಚರಿಕೆಯ ಬಳಿಕವೂ ಅವರು ಹಿಂದಿ ಭಾಷಿಕ ರಾಜ್ಯಗಳಲ್ಲಿ ಕೆಲಸ ಮಾಡದಿದ್ದರೆ ಅದನ್ನು ವಾರ್ಷಿಕ ಕಾರ್ಯಕ್ಷಮತೆ ಮೌಲ್ಯಮಾಪನ ವರದಿಯಲ್ಲಿ ದಾಖಲಿಸಬೇಕು ಎಂದೂ ಶಿಫಾರಸು ಮಾಡಲಾಗಿದೆ.

ಅಧಿಕೃತ ಭಾಷೆ ಕಾಯ್ದೆ 1963ರ ಅಡಿಯಲ್ಲಿ 1976ರಲ್ಲಿ ಈ ಸಮಿತಿಯನ್ನು ಆರಂಭಿಸಲಾಗಿದೆ. ಇದರಲ್ಲಿ 30 ಸದಸ್ಯರಿರುತ್ತಾರೆ (ಲೋಕಸಭೆ–20 ಮತ್ತು ರಾಜ್ಯಸಭೆ–10). ಅಧಿಕೃತ ಉದ್ದೇಶಗಳಿಗಾಗಿ ಹಿಂದಿಯ ಬಳಕೆಯ ಪ್ರಗತಿ ಹೇಗಿದೆ ಎಂಬುದನ್ನು ವಿಶ್ಲೇಷಿಸಿ ಸಮಿತಿಯು ರಾಷ್ಟ್ರಪತಿಯವರಿಗೆ ವರದಿ ಸಲ್ಲಿಸುತ್ತದೆ.

#### ಮೂರು ವರ್ಗೀಕರಣ

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಹಿಂದಿ ಭಾಷಾ ಬಳಕೆಯ ಆಧಾರದಲ್ಲಿ ಮೂರು ವರ್ಗಗಳಾಗಿ ವರ್ಗೀಕರಿಸಲಾಗಿದೆ. ಈ ವರ್ಗಗಳನ್ನು ‘ಎ’, ‘ಬಿ’ ಮತ್ತು ‘ಸಿ’ ಎಂದು ಗುರುತಿಸಲಾಗಿದೆ.

**‘ಎ’ ವರ್ಗದ ರಾಜ್ಯಗಳು:** ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ಛತ್ತೀಸಗಢ, ಉತ್ತರಾಖಂಡ, ಜಾರ್ಖಂಡ್, ಹರಿಯಾಣ, ಹಿಮಾಚಲ ಪ್ರದೇಶ, ರಾಜಸ್ಥಾನ, ದೆಹಲಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು

**‘ಬಿ’ ವರ್ಗದ ರಾಜ್ಯಗಳು:** ಗುಜರಾತ್, ಮಹಾರಾಷ್ಟ್ರ, ಪಂಜಾಬ್ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಚಂಡೀಗಢ, ಡಾಮನ್ ಮತ್ತು ಡಿಯು, ದಾದ್ರಾ ಮತ್ತು ನಗರ ಹವೇಲಿ

**‘ಸಿ’ ವರ್ಗದ ರಾಜ್ಯಗಳು:** ದೇಶದ ಇತರ ಎಲ್ಲ ರಾಜ್ಯಗಳು ಈ ವರ್ಗದಲ್ಲಿ ಬರುತ್ತವೆ

#### ಇತರ ಶಿಫಾರಸುಗಳು

- ನೇಮಕಾತಿ ಪರೀಕ್ಷೆಗಳಲ್ಲಿ ಇಂಗ್ಲಿಷ್ ಭಾಷಾ ಪತ್ರಿಕೆ ಕಡ್ಡಾಯಗೊಳಿಸಿದ್ದನ್ನು ಕೊನೆಗೊಳಿಸಬೇಕು
- ಹಿಂದಿ ಭಾಷಿಕ ರಾಜ್ಯಗಳ ಹೈಕೋರ್ಟ್ ಆದೇಶಗಳನ್ನು ಹಿಂದಿಗೆ ಅನುವಾದಿಸಲು ವ್ಯವಸ್ಥೆ ಮಾಡಬೇಕು
- ಕೇಂದ್ರ ಸರ್ಕಾರದ ಕಚೇರಿಗಳು, ಸಚಿವಾಲಯಗಳು ಅಥವಾ ಇಲಾಖೆಗಳ ಪತ್ರಗಳು, ಫ್ಯಾಕ್ಸ್‌ಗಳು, ಇ-ಮೇಲ್‌ಗಳು ಹಿಂದಿ ಅಥವಾ ಸ್ಥಳೀಯ ಭಾಷೆಗಳಲ್ಲಿ ಇರಬೇಕು
- ಅಧಿಕೃತ ಪತ್ರಗಳು, ಆಹ್ವಾನ ಪತ್ರಿಕೆಗಳು, ಭಾಷಣಗಳು ಹಿಂದಿ ಅಥವಾ ಪ್ರಾದೇಶಿಕ ಭಾಷೆಗಳಲ್ಲಿ ಇರಬೇಕು
- ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ನಿರ್ವಹಣೆಯು ಹಿಂದಿ ಅಥವಾ ಸ್ಥಳೀಯ ಭಾಷೆಯಲ್ಲಿ ಇರಬೇಕು

## 3ಎ ಮೀಸಲಾತಿ ಶೇ 10ಕ್ಕೆ ಹೆಚ್ಚಿಸಿ: ಒಕ್ಕಲಿಗರ ಸಂಘ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌.ಟಿ) ಮೀಸಲಾತಿ ಹೆಚ್ಚಿಸಿದ ಮಾದರಿಯಲ್ಲೇ ಹಿಂದುಳಿದ ವರ್ಗಗಳ ಪ್ರವರ್ಗ 3ಎ ಮೀಸಲಾತಿಯನ್ನೂ ಈಗಿರುವ ಶೇಕಡ 4ರಿಂದ ಶೇ 10ಕ್ಕೆ ಹೆಚ್ಚಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘವು ಸರ್ಕಾರವನ್ನು ಒತ್ತಾಯಿಸಿದೆ.

ಸಂಘದ ಅಧ್ಯಕ್ಷರೂ ಆಗಿರುವ ಶಾಸಕ ಸಿ.ಎನ್‌. ಬಾಲಕೃಷ್ಣ ಹಾಗೂ ಪದಾಧಿಕಾರಿಗಳು ಮತ್ತು ನಿರ್ದೇಶಕರು ಈ ಕುರಿತು ಭಾನುವಾರ ಪತ್ರಿಕಾ ಹೇಳಿಕೆ ನೀಡಿದ್ದಾರೆ.

‘ಒಕ್ಕಲಿಗರ ಉಪ ಪಂಗಡಗಳು ಮತ್ತು ಇತರ ಜಾತಿಗಳು ಸೇರಿದಂತೆ ರಾಜ್ಯದ ಶೇ 16ರಷ್ಟು ಜನರು ಪ್ರವರ್ಗ 3ಎ ವ್ಯಾಪ್ತಿಯಲ್ಲಿದ್ದಾರೆ. ಈ ಸಮುದಾಯಗಳಿಗೆ ಶೇ 4ರಷ್ಟು ಮೀಸಲಾತಿ ಸಾಕಾಗುವುದಿಲ್ಲ. ಆದ್ದರಿಂದ ಈ ಸಮುದಾಯಗಳಿಗೆ ನೀಡುತ್ತಿರುವ ಮೀಸಲಾತಿಯನ್ನು ಶೇ 10ಕ್ಕೆ ಏರಿಕೆ ಮಾಡುವ ಮೂಲಕ ನ್ಯಾಯ ಒದಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

11ನೇ ಪುಟ ನೋಡಿ

## ಗಾಂಧೀಜಿ ಒಬ್ಬರಿಂದಲೇ ಸ್ವಾತಂತ್ರ್ಯ ಬಂದಿಲ್ಲ: ಸಂತೋಷ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಗಾಂಧೀಜಿ ಒಬ್ಬರ ಕಾರಣದಿಂದ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ ಎಂದು ಬಿಂಬಿಸಲಾಗುತ್ತಿದೆ. ಇದು ಇತರ ಹೋರಾಟಗಾರರಿಗೆ ಮಾಡುವ ಅವಮಾನ. ಇತರ ಹೋರಾಟಗಾರರನ್ನು ಸ್ಮರಿಸಿದರೆ ಗಾಂಧೀಜಿಗೆ ಅವಮಾನಿಸಿದಂತೆ ಅಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್‌. ಸಂತೋಷ್ ಹೇಳಿದರು.

ಪ್ರಜ್ಞಾ ಪ್ರವಾಹ ಕರ್ನಾಟಕ ಉತ್ತರ ಪ್ರಾಂತದ ವತಿಯಿಂದ ನಗರದ ಸವಾಯಿ ಗಂಧರ್ವ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಡಾ. ಸಂತೋಷಕುಮಾರ ಪಿ.ಕೆ ಅನುವಾದಿಸಿರುವ ‘ಸ್ವರಾಜ್ –75’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಸಾವರ್ಕರ್ ಅವರಿಗೆ ಅವಮಾನಿಸಿದರೆ ರೌರವ ನರಕಕ್ಕೆ ಹೋಗಬೇಕಾಗುತ್ತದೆ. ಸಾವರ್ಕರ್ ಕ್ಷಮಾಪಣೆ ಕೇಳಿದರು, ಅವರಿಗೆ ಪಿಂಚಣಿ ಸಿಗುತ್ತಿತ್ತು ಎಂಬ ಹಸಿ ಸುಳ್ಳುಗಳನ್ನು ರಾಜಕೀಯ ಕಾರಣಕ್ಕೆ ಹೇಳಲಾಗುತ್ತಿದೆ. ಇಂತಹ ಅಪಮಾನಗಳು ನಿಲ್ಲದಿದ್ದರೆ ನಾವು ನಿಲ್ಲಿಸುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

#### ‘ಆರ್‌ಎಸ್‌ಎಸ್ ಮೀಸಲಾತಿ ವಿರುದ್ಧವಿಲ್ಲ’

ದಮನಿತರ ಚಿಂತನ ಸಭೆಯಲ್ಲಿ ಮಾತನಾಡಿದ ಸಂತೋಷ್ ಅವರು, ‘ಬಿಜೆಪಿ ಮತ್ತು ಆರ್‌ಎಸ್‌ಎಸ್ ಮೀಸಲಾತಿ ವಿರುದ್ಧವಿಲ್ಲ, ಈ ವಿಷಯದಲ್ಲಿ ಅಪಪ್ರಚಾರ ಮಾಡಲಾಗುತ್ತಿದೆ. ನಾವು ಮೀಸಲಾತಿ ವಿರುದ್ಧ ಇದ್ದಿದ್ದರೆ, ಕರ್ನಾಟಕದಲ್ಲಿ ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಮುಂದಾಗುತ್ತಿರಲಿಲ್ಲ. ಕಟ್ಟಕಡೆಯ ವ್ಯಕ್ತಿಗೂ ಮೀಸಲಾತಿ ಸಿಗುವಂತೆ ಮಾಡುತ್ತೇವೆ’ ಎಂದು ಹೇಳಿದರು.

‘ಮುಂದಿನ ವಿಧಾನಸಭಾ ಚುನಾವಣೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಸಮುದಾಯವಾರು ಪ್ರಾತಿನಿಧ್ಯ ನೀಡಲಾಗುವುದು. ಸಾಮಾನ್ಯ ಕ್ಷೇತ್ರದಲ್ಲಿ ಗೆಲ್ಲುವಂತಿದ್ದರೆ ಅವಕಾಶ ಮಾಡಿಕೊಡಲಾಗುವುದು’ ಎಂದು ಭರವಸೆ ನೀಡಿದರು.

**ತುರ್ತು ಪರಿಸ್ಥಿತಿ ಕಾರಣಕ್ಕೆ ಇಂದಿರಾಗಾಂಧಿ ಅವರಿಗೆ ಮಣ್ಣು ಮುಕ್ಕಿಸಿದ ದೇಶ ನಮ್ಮದು. ದೇಶ ಸ್ವಾತಂತ್ರ್ಯವನ್ನು ಆರಾಧಿಸುತ್ತದೆ. ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಾಗ ಜನ ತಕ್ಕಪಾಠ ಕಲಿಸುತ್ತಾರೆ**

**ಬಿ.ಎಲ್‌.ಸಂತೋಷ್**

## ಚೆಕ್ ಬೌನ್ಸ್ ನಿಗ್ರಹಕ್ಕೆ ಅಸ್ತ್ರ?

ನವದೆಹಲಿ (ಪಿಟಿಐ): ಚೆಕ್ ಬೌನ್ಸ್ ಆದಾಗ, ಚೆಕ್ ನೀಡಿದ ವ್ಯಕ್ತಿಯ ಬೇರೆ ಖಾತೆಗಳಿಂದ ಹಣ ಕಡಿತ ಮಾಡುವ ಹಾಗೂ ಮುಂದೆ ಆ ವ್ಯಕ್ತಿ ಹೊಸ ಖಾತೆ ತೆರೆಯುವುದನ್ನು ನಿರ್ಬಂಧಿಸುವ ಸಾಧ್ಯತೆಗಳ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸಿದೆ. 11

## ಎಎಪಿ ಸಚಿವ ರಾಜೀನಾಮೆ

ನವದೆಹಲಿ: ದೆಹಲಿ ಸರ್ಕಾರದ ಸಮಾಜ ಕಲ್ಯಾಣ ಸಚಿವ ರಾಜೇಂದ್ರ ಪಾಲ್ ಗೌತಮ್ ಅವರು ತಮ್ಮ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ. ಶುಕ್ರವಾರ ನಡೆದಿದ್ದ ಬೌದ್ಧ ಧರ್ಮಕ್ಕೆ ಮತಾಂತರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸಿತ್ತು. 10



#### ಚಿನಕುರಳಿ

ಪ್ರಕಾಶ್ ಶೆಟ್ಟಿ



## ಚಂದ್ರನ ಅಂಗಳದಲ್ಲಿ ಸೋಡಿಯಂ ಪತ್ತೆ: ಇಸ್ರೋ ಮಾಹಿತಿ

ಬೆಂಗಳೂರು: ಚಂದ್ರನ ಅಂಗಳದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸೋಡಿಯಂ ಇರುವುದನ್ನು ಚಂದ್ರಯಾನ–2 ಸ್ಪೆಕ್ಟ್ರೊ ಮೀಟರ್ 'ಕ್ಲಾಸ್' ಪತ್ತೆ ಮಾಡಿದೆ.

ಇದೇ ಪ್ರಥಮ ಬಾರಿಗೆ ಸೋಡಿಯಂ ಪತ್ತೆಯಾಗಿದೆ ಎಂದುಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ತಿಳಿಸಿದೆ.

ಬೆಂಗಳೂರಿನ ಇಸ್ರೊ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ ಈ ಸ್ಪೆಕ್ಟ್ರೊ ಮೀಟರ್ ಅನ್ನು ನಿರ್ಮಿಸಲಾಗಿತ್ತು. ಮಂಗಳನ ಅಂಗಳದಲ್ಲಿನ ಸೂಕ್ಷ್ಮವಾದ ಅಂಶಗಳ ಬಗ್ಗೆಯೂ ಈ ಉಪಕರಣ ಮಾಹಿತಿ ಸಂಗ್ರಹಿಸಿದೆ.

ಸ್ಪೆಕ್ಟ್ರೊ ಮೀಟರ್ ಪತ್ತೆ ಮಾಡಿರುವ ಅಂಶಗಳ ಬಗ್ಗೆ 'ದಿ ಅಸ್ಟ್ರೊಫಿಜಿಕಲ್ ಜರ್ನಲ್ ಲೆಟರ್ಸ್' ನಿಯತಕಾಲಿಕೆಯಲ್ಲಿ ಸಂಶೋಧನಾ ಲೇಖನ ಪ್ರಕಟವಾಗಿದೆ.

ಹೊಸ ಅಂಶಗಳು ಪತ್ತೆಯಾಗಿರುವುದು ಮಂಗಳನ ಅಂಗಳದ ಬಾಹ್ಯ ವಾತಾವರಣದ ಬಗ್ಗೆ ಸಮಗ್ರ ಅಧ್ಯಯನಕ್ಕೆ ಸಹಕಾರಿ. ಜತೆಗೆ, ಸೌರಮಂಡಲದಲ್ಲಿನ ಇತರ ಗ್ರಹಗಳ ಅಧ್ಯಯನದ ಸಂದರ್ಭದಲ್ಲೂ ಅನುಕೂಲವಾಗಲಿದೆ ಎಂದು ಇಸ್ರೊ ತಿಳಿಸಿದೆ.



### ಸರ್ಕಾರದ ಧೋರಣೆಗೆ ಸಂಗೀತ ವಿದ್ವಾಂಸ ಡಿ. ಬಾಲಕೃಷ್ಣ ಬೇಸರ

# 'ಕಲೆಗೆ ವ್ಯಾವಹಾರಿಕ ದೃಷ್ಟಿ ಸಲ್ಲದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸ್ತ್ರೀಯ ಸಂಗೀತ ಮತ್ತು ಇನ್ನಿತರ ಕಲಾ ಪ್ರಕಾರಗಳು ನಮ್ಮ ರಾಷ್ಟ್ರದ ಆಸ್ತಿ. ಇವುಗಳನ್ನು ಉಳಿಸಿ ಬೆಳೆಸಬೇಕಾದ ಸರ್ಕಾರ, ಕಲೆಯನ್ನು ವ್ಯಾವಹಾರಿಕ ದೃಷ್ಟಿಯಿಂದ ನೋಡಲಾರಂಭಿಸಿದೆ' ಎಂದು ಸಂಗೀತ ವಿದ್ವಾಂಸ ಡಿ. ಬಾಲಕೃಷ್ಣ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಗಾಯನ ಸಮಾಜ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 52ನೇ ಸಂಗೀತ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷತೆ ವಹಿಸಿ, ಮಾತನಾಡಿದರು.

'ಕೇಂದ್ರ ಸರ್ಕಾರದ ಅಂಗಸಂಸ್ಥೆಯಾದ ಆಕಾಶವಾಣಿ ಪ್ರಸಾರ ಮಾಡುತ್ತಿದ್ದ ಶಾಸ್ತ್ರೀಯ ಸಂಗೀತವನ್ನು ಕೇಳಿ, ಲಾಭ ಪಡೆದ ಕಲಾವಿದರಲ್ಲಿ ನಾನೂ ಒಬ್ಬನಾಗಿದ್ದೇನೆ. ಕಳೆದ ವರ್ಷ ಬೆಂಗಳೂರು ಆಕಾಶವಾಣಿಯ 'ಅಮೃತವರ್ಷಿಣಿ' ವಾಹಿನಿಯನ್ನು 'ರಾಗಂ' ರಾಷ್ಟ್ರೀಯ ವಾಹಿನಿಯಲ್ಲಿ ವಿಲೀನ ಮಾಡಲಾಯಿತು. ಇದಲ್ಲದೆ, ಆಕಾಶವಾಣಿಯು ಆಯೋಜಿಸುತ್ತಿದ್ದ ವಾರ್ಷಿಕ ಸಂಗೀತ ಸಮ್ಮೇಳನ, ರಾಷ್ಟ್ರಮಟ್ಟದ ಸಂಗೀತ ಸ್ಪರ್ಧೆಗಳು ಹಾಗೂ ಧ್ವನಿ ಪರೀಕ್ಷೆಯೂ ಸ್ಥಗಿತಗೊಂಡಿವೆ. ಇದರಿಂದಾಗಿ ಸ್ಥಳೀಯ ಕಲಾವಿದರಿಗೆ ಅವಕಾಶಗಳು ಕಡಿಮೆಯಾಗಿವೆ. ಸರ್ಕಾರವು ಸ್ಥಗಿತಗೊಳಿಸಿದ ವಾಹಿನಿ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಪುನರಾರಂಭಿಸಬೇಕು' ಎಂದು ಆಗ್ರಹಿಸಿದರು.

'ಯುವ ಕಲಾವಿದರು ಪ್ರದರ್ಶಿಸುತ್ತಿರುವ ಪ್ರತಿಭೆ ಮತ್ತು ಸಂಗೀತ ಜ್ಞಾನ ಆಶ್ಚರ್ಯ ಹಾಗೂ ಸಂತೋಷವನ್ನುಂಟು ಮಾಡುತ್ತಿದೆ. ಸಂಗೀತವನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ. ಯುವಜನರು ಸಾಮಾಜಿಕ ಜಾಲತಾಣಗಳನ್ನು ತಮ್ಮ ಪ್ರತಿಭೆಯ ಪ್ರದರ್ಶನಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಆದರೆ, ಸಾಮಾಜಿಕ ಮಾಧ್ಯಮಗಳ ಗೀಳು ಸಂಗೀತ ಅಭ್ಯಾಸ ಹಾಗೂ ಜ್ಞಾನಾರ್ಜನೆಗೆ ಅಡ್ಡಿಯಾಗಬಾರದು' ಎಂದು ಕಿವಿಮಾತನ್ನು ಹೇಳಿದರು.

**ಹೃದಯ ಶುದ್ಧಿ:** ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಶಿಕ್ಷಣ ತಜ್ಞ ಗುರುರಾಜ ಕರಜಗಿ, 'ಸಂಗೀತದ ಆಳಕ್ಕೆ ಇಳಿದು, ಅದನ್ನು ಅರ್ಥ ಮಾಡಿಕೊಂಡಲ್ಲಿ ನಮಗೆ ಅರಿವಿಲ್ಲದೆಯೇ ಹೃದಯ ಶುದ್ಧಿಯಾಗುತ್ತದೆ. ಮನಸ್ಸು, ಚರ್ಯೆ ಹಾಗೂ ಮಾತನ್ನು ಬದಲಾಯಿಸುವ ಶಕ್ತಿ ಸಂಗೀತಕ್ಕೆ ಇದೆ. ಸಂಗೀತದ ಗುರು ಆದವರು ಮಕ್ಕಳನ್ನು ಅನನ್ಯವಾಗಿ ಪ್ರೀತಿ ಮಾಡದಿದ್ದರೆ ಜ್ಞಾನವನ್ನು ಮತ್ತೊಬ್ಬರಿಗೆ ಧಾರೆ ಎರೆಯಲು ಸಾಧ್ಯವಾಗುವುದಿಲ್ಲ. ಸಂಗೀತದಲ್ಲಿ ಮಾತ್ರ ಮನುಷ್ಯನ ಉತ್ತಮವಾದ ಗುಣಗಳು ಮೇಲೆ ಬರುತ್ತವೆ. ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಲು ಸಂಗೀತ ಸಮ್ಮೇಳನಗಳು ಹೆಚ್ಚಿನ ಸಂಖ್ಯೆಯಲ್ಲಿ ನಡೆಯಬೇಕು' ಎಂದು ತಿಳಿಸಿದರು.

'ಸಂಗೀತ ಸಮ್ಮೇಳನವು ಇದೇ 16ರವರೆಗೆ ನಡೆಯಲಿದೆ. ಪ್ರತಿನಿತ್ಯ ಸಂಜೆ 6ರಿಂದ ಪ್ರಸಿದ್ಧ ಸಂಗೀತ ಕಲಾವಿದರಿಂದ ಸಂಗೀತ ಕಛೇರಿ ಆಯೋಜಿಸಲಾಗಿದೆ' ಎಂದು ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷ ಎಂ.ಆರ್.ವಿ. ಪ್ರಸಾದ್ ಹೇಳಿದರು.



52ನೇ ಸಂಗೀತ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಡಿ. ಬಾಲಕೃಷ್ಣ ಅವರನ್ನು ಸನ್ಮಾನಿಸಲಾಯಿತು. ಗುರುರಾಜ ಕರಜಗಿ, ಕೆ.ಜೈರಾಜ್ ಮತ್ತು ಎಂ.ಆರ್.ವಿ ಪ್ರಸಾದ್ ಇದ್ದಾರೆ. ಪ್ರಜಾವಾಣಿ ಚಿತ್ರ

**ಮುಖ್ಯಾಂಶಗಳು**

- 52ನೇ ಸಂಗೀತ ಸಮ್ಮೇಳನಕ್ಕೆ ಚಾಲನೆ
- ಇದೇ 16ರವರೆಗೆ ಕಾರ್ಯಕ್ರಮ ಆಯೋಜನೆ



ಎಚ್‌ಎಸ್‌ಆರ್ ಬಡಾವಣೆಯ ಬಿಡಿಎ ಕಾಂಪ್ಲೆಕ್ಸ್ ಎದುರು ಸಮಾವೇಶಗೊಂಡ ಕಾಂಗ್ರೆಸ್ ಕಾರ್ಯಕರ್ತರು ಭಾರತ್ ಜೋಡೊ ಯಾತ್ರೆ ಯಶಸ್ವಿಯಾಗಲಿ ಎಂದು ಘೋಷಣೆ ಕೂಗಿದರು

## ಭಾರತ್ ಜೋಡೊ ಯಾತ್ರೆಯತ್ತ ಹೆಜ್ಜೆ ಹಾಕಿದ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಳ್ಳಲು ಬೊಮ್ಮನಹಳ್ಳಿ ಭಾಗದಿಂದ ಸಾವಿರಾರು ಕಾರ್ಯಕರ್ತರು ಬಿಎಂಟಿಸಿ ಬಸ್‌ಗಳಲ್ಲಿ ಭಾನುವಾರ ತೆರಳಿದರು. ಮಹಿಳೆಯರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ತೆರಳಿದರು.

'ಭಾರತ್ ಜೋಡೊ ಯಾತ್ರೆಗೆ ಕೇವಲ ಕಾಂಗ್ರೆಸ್ಸಿಗರು ಮಾತ್ರವಲ್ಲದೇ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರು ಯಾತ್ರೆಯನ್ನು ಬೆಂಬಲಿಸಿ ಹೆಜ್ಜೆ ಹಾಕುತ್ತಿರುವುದು, ಕಾಲ್ನಡಿಗೆ ಯಾತ್ರೆಯ ಉದ್ದೇಶವನ್ನು ಸಾರ್ಥಕಗೊಳಿಸಿದೆ. ರಾಜ್ಯದಲ್ಲಿ ಯಾತ್ರೆಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದ್ದು, ಇದರಿಂದ ಬಿಜೆಪಿಯವರು ವಿಚಲಿತರಾಗಿದ್ದಾರೆ' ಎಂದು ಎಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ ಅವರು ಹೇಳಿದರು.

ಕೆಪಿಸಿಸಿ ಸದಸ್ಯ ಬಾಲಕೃಷ್ಣ ರೆಡ್ಡಿ, ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವೀಂದ್ರ ಮಾತನಾಡಿದರು. ಕಾಂಗ್ರೆಸ್ ಮುಖಂಡ ಪಟೇಲ್ ರಾಜು, ಯುವ ಕಾಂಗ್ರೆಸ್ ಮುಖಂಡ ಅನಿಲ್ ರೆಡ್ಡಿ, ಬಿಳೇಕಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥನಾರಾಯಣ, ಚಿನ್ಮಯ ವಿದ್ಯಾಸಂಸ್ಥೆ ಮುಖ್ಯಸ್ಥ ವಾಸುದೇವರೆಡ್ಡಿ, ಸೈಯದ್ ಸರ್ದಾರ್ ನೇತೃತ್ವ ವಹಿಸಿದ್ದರು.



**ಸಂಕ್ಷಿಪ್ತ ಸುದ್ದಿ**

### ಪುಸ್ತಕ ಬಹುಮಾನಕ್ಕೆ ಕೃತಿಗಳ ಆಹ್ವಾನ

ಬೆಂಗಳೂರು: ಕನ್ನಡ ಗೆಳೆಯರ ಬಳಗವು 2021-22ನೇ ಸಾಲಿನ 'ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ'ಕ್ಕೆ ಕೃತಿಗಳನ್ನು ಆಹ್ವಾನಿಸಿದೆ.

ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಕುರಿತ ಪುಸ್ತಕಗಳನ್ನು ಸಲ್ಲಿಸಬಹುದಾಗಿದೆ. ಈ ಬಹುಮಾನ ₹ 4 ಸಾವಿರ ನಗದು ಒಳಗೊಂಡಿದೆ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ನವೆಂಬರ್ ಕೊನೆಯ ವಾರ ಸಮಾರಂಭ ನಡೆಸಿ, ಬಹುಮಾನ ಪ್ರದಾನ ಮಾಡಲಾಗುವುದು. ಕನ್ನಡ ಗೆಳೆಯರ ಬಳಗ, #1, ಶ್ರೀ ನಿಲಯ ಮಾರಮ್ಮ ದೇವಸ್ಥಾನದ ರಸ್ತೆ, ಕತ್ರಿಗುಪ್ಪೆ, ಬೆಂಗಳೂರು -560085 ಈ ವಿಳಾಸಕ್ಕೆ ಕೃತಿಯ ಎರಡು ಪ್ರತಿಗಳನ್ನು ನವೆಂಬರ್ 1ರೊಳಗೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

### ಓಲಾ–ಉಬರ್: ಗಡುವು ಬಳಿಕ ಕ್ರಮ

ಬೆಂಗಳೂರು: ಓಲಾ ಮತ್ತು ಉಬರ್ ಕಂಪನಿಗಳ ಆ್ಯಪ್‌ಗಳಲ್ಲಿ ಆಟೋರಿಕ್ಷಾ ಸೇವೆ ಮುಂದುವರಿದಿದ್ದು, ಮೂರು ದಿನಗಳ ಗಡುವು ಮುಗಿದ ಬಳಿಕ ಕ್ರಮ ಕೈಗೊಳ್ಳಲು ಸಾರಿಗೆ ಇಲಾಖೆ ಅಧಿಕಾರಿಗಳು ನಿರ್ಧರಿಸಿದ್ದಾರೆ.

ಗುರುವಾರ ನೋಟಿಸ್ ನೀಡಿದ್ದು, ಶನಿವಾರ ಮತ್ತು ಭಾನುವಾರ ರಜೆ ದಿನ ಆಗಿರುವುದರಿಂದ ಸೋಮವಾರದ ನಂತರ ನೋಟಿಸ್‌ಗೆ ಉತ್ತರ ಬರುವ ಸಾಧ್ಯತೆ ಇದೆ. ಉತ್ತರ ನೋಡಿಕೊಂಡು ಮುಂದಿನ ಕ್ರಮ ಜರುಗಿಸಲಾಗುವುದು. ಅನಧಿಕೃತವಾಗಿ ಆ್ಯಪ್ ಬಳಕೆ ಮಾಡಿದರೆ ಅಂತಹ ವಾಹನಗಳನ್ನು ಜಪ್ತಿ ಮಾಡಲಾಗುವುದು ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಆಟೋರಿಕ್ಷಾ ಚಾಲಕರಿಗೆ ತೊಂದರೆ ನೀಡುವುದು ಸಾರಿಗೆ ಇಲಾಖೆ ಉದ್ದೇಶವಲ್ಲ. ಚಾಲಕರು ಮತ್ತು ಗ್ರಾಹಕರಿಬ್ಬರಿಗೂ ಇದರಿಂದ ಮೋಸವಾಗುತ್ತಿದ್ದು, ಸರಿಪಡಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

**ಪ್ರತ್ಯೇಕ ಆ್ಯಪ್:** ಈ ನಡುವೆ ಪ್ರತ್ಯೇಕ ಆ್ಯಪ್ ಅಭಿವೃದ್ಧಿಪಡಿಸಿಕೊಳ್ಳಲು ಬೆಂಗಳೂರು ಆಟೋರಿಕ್ಷಾ ಚಾಲಕರ ಒಕ್ಕೂಟ ಸಜ್ಜಾಗಿದೆ. 'ನಮ್ಮ ಯಾತ್ರಿ' ಎಂಬ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ನ.1ರಿಂದ ಅಧಿಕೃತವಾಗಿ ಸೇವೆ ಆರಂಭಿಸಲಾಗುವುದು ಎಂದು ಸಂಘ ತಿಳಿಸಿದೆ.

### ಗುಂಡು ತಗುಲಿ ವ್ಯಕ್ತಿಗೆ ಗಾಯ

ಚಿಕ್ಕಮಗಳೂರು: ಜಾಗದ ವಿಚಾರದಲ್ಲಿ ವ್ಯಾಜ್ಯ ನಡೆದು, ರೈತ ಸಂಘದ ಜಿಲ್ಲಾಧ್ಯಕ್ಷ ಡಿ.ಆರ್. ದುಗ್ಗಪ್ಪಗೌಡ ಅವರು ಹಾರಿಸಿದ ಗುಂಡು ನಾರಾಯಣ ರಾಜ್ (ಅಣ್ಣು) ಎಂಬುವರ ಕಾಲಿಗೆ ತಗುಲಿ ಗಾಯಗೊಂಡಿರುವ ಘಟನೆ ಮೂಡಿಗೆರೆಯಲ್ಲಿ ಭಾನುವಾರ ನಡೆದಿದೆ. ದುಗ್ಗಪ್ಪಗೌಡ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಗಾಯಾಳುವನ್ನು ಆಸ್ಪತ್ರೆಗೆ ಒಯ್ಯಲಾಗಿದೆ. ನಾರಾಯಣ ಅವರು ಮೂಡಿಗೆರೆ ಠಾಣೆಗೆ ದೂರು ನೀಡಿದ್ದಾರೆ. ದುಗ್ಗಪ್ಪಗೌಡ ಅವರ ಪತ್ನಿ ಶ್ರೀದೇವಿ ಅವರು ಕೆ.ಮಂಚೇಗೌಡ, ಎಚ್.ಕೆ.ಮನೋಜ್ ಎಂಬುವವರ ವಿರುದ್ಧ ಪ್ರತಿ ದೂರು ನೀಡಿದ್ದಾರೆ.

ಆನ್‌ಲೈನ್ ನಕ್ಷೆ: ಬಿಬಿಎಂಪಿ ನಗರ ಯೋಜನೆ ಅಧಿಕಾರಿಗಳ ಬೇಜವಾಬ್ದಾರಿ – ಪರಿಶೀಲನೆ ಸಭೆಯಲ್ಲಿ ಬಹಿರಂಗ

# ಸಾಫ್ಟ್‌ವೇರ್ ಅಪ್‌ಡೇಟ್‌ಗೆ ನಿರ್ಲಕ್ಷ್ಯ

● ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಕಟ್ಟಡ ನಕ್ಷೆಯನ್ನು ಮಾನವ ಹಸ್ತಕ್ಷೇಪವಿಲ್ಲದೆ ಮಂಜೂರು ಮಾಡುವ ಪ್ರಕ್ರಿಯೆಗೆ ಹಿನ್ನಡೆಯಾಗಿದ್ದು, ಎರಡು ತಿಂಗಳಾದರೂ ನಕ್ಷೆಗೆ ಅನುಮೋದನೆ ನೀಡುತ್ತಿಲ್ಲ. ಎಲ್ಲ ಇಲಾಖೆಗಳನ್ನು ಒಳಗೊಳ್ಳಬೇಕಾದ ಸಾಫ್ಟ್‌ವೇರ್ ಅಪ್‌ಡೇಟ್ ಬಗ್ಗೆ ನಗರ ಯೋಜನೆ ಅಧಿಕಾರಿಗಳು ಎರಡು ವರ್ಷಗಳಿಂದ ಕ್ರಮ ಕೈಗೊಳ್ಳದಿರುವುದರಿಂದ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ.

ಆನ್‌ಲೈನ್‌ನಲ್ಲಿ ಕಟ್ಟಡಕ್ಕೆ ನಕ್ಷೆ, ಪ್ರಾರಂಭಿಕ ಪ್ರಮಾಣ ಪತ್ರ ಹಾಗೂ ಸ್ವಾಧೀನಾನುಭವ ಪ್ರಮಾಣಪತ್ರಕ್ಕೆ ಅನುಮೋದನೆ ನೀಡುವ ಪ್ರಕ್ರಿಯೆಯನ್ನು 2017ರ ಅಕ್ಟೋಬರ್‌ನಲ್ಲಿ ಆರಂಭಿಸಲಾಯಿತು. ಸಾಫ್ಟ್‌ಟೆಕ್ ಎಂಜಿನಿಯರ್ಸ್ ಸಂಸ್ಥೆ ಅಭಿವೃದ್ಧಿಪಡಿಸಿದ್ದ ಬಿಲ್ಡಿಂಗ್ ಪ್ಲಾನ್ ಅಪ್ರೂವಲ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಬಿಪಿಎಎಂಎಸ್) ಅನ್ನು ಅನುಷ್ಠಾನಗೊಳಿಸಲಾಯಿತು. ಆದರೆ, ಎಲ್ಲ ಇಲಾಖೆಗಳನ್ನೂ ಇದರಲ್ಲಿ ಅಳವಡಿಸಲಾಗಿಲ್ಲ. ಪ್ರಮಾಣಪತ್ರ, ನಿರಾಕ್ಷೇಪಣಾ ಪತ್ರಗಳನ್ನು ನೀಡುವ ಇಲಾಖೆಗಳು ಆನ್‌ಲೈನ್‌ನಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಎರಡನೇ ಹಾಗೂ ಮೂರನೇ ಹಂತದಲ್ಲಿ ಸಾಫ್ಟ್‌ವೇರ್ ಅನ್ನು ಉನ್ನತೀಕರಿಸುವ ಕೆಲಸವನ್ನು ಮಾಡದಿರುವುದೇ ಇದಕ್ಕೆ ಕಾರಣ.

ಸಾಫ್ಟ್‌ವೇರ್‌ನ ಎರಡನೇ ಹಾಗೂ ಮೂರನೇ ಹಂತದ ಅಭಿವೃದ್ಧಿಗೆ 87ರಲ್ಲಿ 35 ಸಂಸ್ಥೆಗಳಿಗೆ ಸರ್ಕಾರ ಅನುಮೋದನೆ ನೀಡಿದೆ. ಇದಕ್ಕೆ ₹35 ಲಕ್ಷ ವೆಚ್ಚ ಮಾಡಲು ಸೂಚಿಸಿದೆ. ಆ ಸಂಸ್ಥೆಯವರು 4ಜಿ ವಿನಾಯಿತಿ ಕೇಳಿದ್ದಾರೆ. ಆದರೆ ಎಲ್ಲ ವಿವರಗಳು ಬಿಬಿಎಂಪಿ ದಾಖಲೆಯಲ್ಲಿ ಸಿಗುತ್ತಿಲ್ಲ. ಇದೀಗ ಮತ್ತೆ ಎಲ್ಲವನ್ನೂ ಮೊದಲಿನಿಂದ ಪರಿಶೀಲನೆ ನಡೆಸಿ ಯಾವ ಸಂಸ್ಥೆಗೆ ಯಾವ ಕೆಲಸಕ್ಕೆ ಆದೇಶ ನೀಡಬೇಕು ಎಂಬುದನ್ನು ಅಂತಿಮಗೊಳಿಸಬೇಕು. ಈ ಎಲ್ಲ ವಿಷಯಗಳು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನಡೆಸಿದ ಪರಿಶೀಲನಾ ಸಭೆಯಲ್ಲಿ ತಿಳಿದುಬಂದಿವೆ.

ಆನ್‌ಲೈನ್‌ನಲ್ಲಿ ನಕ್ಷೆ ಅನುಮೋದನೆಗೆ ಬಿಬಿಎಂಪಿ ಆಂತರಿಕ ವಿಭಾಗಗಳನ್ನೇ ಸೇರಿಸಲಾಗಿಲ್ಲ. ಉದಾಹರಣೆಗೆ ಬೃಹತ್ ನೀರುಗಾಲುವೆ ವಿಭಾಗದಿಂದ ನಿರಾಕ್ಷೇಪಣಾ ಪತ್ರ ಸಿಗಬೇಕಾದರೆ ಮ್ಯಾನ್ಯುಯಲ್ ಆಗಿಯೇ ಕೆಲಸ ಆಗಬೇಕಿದೆ. ಹೀಗಾಗಿ ದೊಡ್ಡ ಕಟ್ಟಡಗಳಿಗೆ ಅನುಮೋದನೆ ವಿಳಂಬವಾಗುತ್ತಿದೆ.

‘ಸಾಫ್ಟ್‌ಟೆಕ್ ಸಂಸ್ಥೆ ಆನ್‌ಲೈನ್ ನಕ್ಷೆ ಅನುಮೋದನೆಗೆ ಸಾಫ್ಟ್‌ವೇರ್ ಒದಗಿಸಿದ್ದು, ಅವರು ಆಟೊಕ್ಯಾಡ್ ಅನ್ನೇ ಬಳಸಲು ಸೂಚಿಸಿದ್ದಾರೆ. ಇದು ಅತ್ಯಂತ ವೆಚ್ಚದ ಸಾಫ್ಟ್‌ವೇರ್. ಅದರ ಬದಲು ಎಲ್ಲರಿಗೂ ಕೈಗೆಟುಕುವ ದರ ಸಾಫ್ಟ್‌ವೇರ್ ಅಳವಡಿಸಿಕೊಳ್ಳಬೇಕು. ಇನ್ನು ಡಿಸಿಆರ್–ಸಾಫ್ಟ್‌ವೇರ್‌ನಲ್ಲಿ ನಕ್ಷೆ ಸಲ್ಲಿಸುವಾಗ ‘ಕೀ’ ಬಳಸಬೇಕು. ಆದರೆ ಈ ‘ಕೀ’ ದಾಸ್ತಾನು ಇಲ್ಲ ಎಂದು ಆರು ತಿಂಗಳಿಂದ ಸಾಫ್ಟ್‌ಟೆಕ್ ಸಂಸ್ಥೆ ಸತಾಯಿಸುತ್ತಿದೆ. ಬಿಬಿಎಂಪಿ ನಗರ ಯೋಜನೆಗಳು ‘ನಮಗೆ ಗೊತ್ತಿಲ್ಲ. ಅವರನ್ನೇ ಕೇಳಿ’ ಎನ್ನುತ್ತಾರೆ’ ಎಂದು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಬೆಂಗಳೂರು ಕೇಂದ್ರದ ಸದಸ್ಯರು ದೂರಿದರು.

## ‘ಸಾಫ್ಟ್‌ವೇರ್ ಅಭಿವೃದ್ಧಿಗೆ ಆದೇಶ ನೀಡಿಲ್ಲ’

‘ಆನ್‌ಲೈನ್ ಸಾಫ್ಟ್‌ವೇರ್ ಮೂರು ಹಂತದಲ್ಲಿ ಅಭಿವೃದ್ಧಿಯಾಗಬೇಕಿದೆ. ನಾನು ಇದೀಗ ಪರಿಶೀಲನೆ ಮಾಡಿದಾಗ ಎರಡನೇ ಹಂತದ ಅಭಿವೃದ್ಧಿಗೆ ಆದೇಶವನ್ನೇ ನೀಡಿಲ್ಲ. ಮೊದಲನೇ ಹಂತ ಮಾತ್ರ ಮುಗಿದಿದೆ. ಯಾವ ರೀತಿ ಟೆಂಡರ್ ಕರೆದು ಎರಡನೇ ಹಂತದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತದೆ. ಮೂರನೇ ಹಂತದಲ್ಲಿ ಈ ಸಾಫ್ಟ್‌ವೇರ್‌ಗೆ ಎಲ್ಲ ಇಲಾಖೆಗಳ ಸಂಪರ್ಕವನ್ನೂ ಜೋಡಿಸಬೇಕು. ಇದೆಲ್ಲ ಮುಗಿಯಲು ಇನ್ನೂ ಐದಾರು ತಿಂಗಳು ಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘2020ರಲ್ಲಿ ಸಾಫ್ಟ್‌ವೇರ್‌ಗೆ ಮೊದಲನೇ ಹಂತಕ್ಕೆ ಅನುಮೋದನೆ ನೀಡಲಾಗಿದೆ. ಎರಡನೇ ಹಂತಕ್ಕೆ ಈವರೆಗೆ ಸಮ್ಮತಿ ಸಿಕ್ಕಿಲ್ಲ. ಮೊದಲನೇ ಹಂತ ಅಭಿವೃದ್ಧಿ ಮಾಡಿದ ಸಂಸ್ಥೆಯವರೇ ಎರಡನೇ ಹಂತಕ್ಕೂ ಕೆಲವು ಕೆಲಸಗಳನ್ನು ಮಾಡಿದ್ದಾರೆ. ಹೀಗಾಗಿ ಎಲ್ಲವನ್ನೂ ಪರಿಶೀಲಿಸಿಕೊಂಡು ಎರಡು ಹಾಗೂ ಮೂರನೇ ಹಂತದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಬೇಕು. ಮೂರನೇ ಹಂತ ಅನುಷ್ಠಾನವಾದರೆ, ಎಲ್ಲ ಇಲಾಖೆಗಳ ಜೊತೆ ಸಮನ್ವಯ ಸಾಧಿಸಲಾಗುತ್ತದೆ. ನಿರಾಕ್ಷೇಪಣಾ ಪತ್ರ ಸೇರಿದಂತೆ ಎಲ್ಲ ರೀತಿಯ ಪ್ರಕ್ರಿಯೆಯನ್ನು ಎಲ್ಲ ಇಲಾಖೆಯವರೂ ಆನ್‌ಲೈನ್‌ನಲ್ಲೇ ಮಾಡುತ್ತಾರೆ. ಸದ್ಯಕ್ಕೆ ಇದು ಮ್ಯಾನ್ಯುಯಲ್ ಆಗಿ ಆಗುತ್ತಿದೆ. ಇದರಿಂದ ತಡ ಆಗುತ್ತಿದೆ. ಆರ್ಕಿಟೆಕ್ಟ್‌ಗಳ ಪ್ರಕ್ರಿಯೆಯಲ್ಲೂ ಕೆಲವು ಎರರ್ ಬರುತ್ತಿದೆ. ಅದನ್ನು ಸರಿಪಡಿಸಬೇಕು’ ಎಂದು ವಿವರ ನೀಡಿದರು.

‘ಜಿ + 2 ಅಂತಸ್ತಿಗೆ ‘ಸಕಾಲ’ ಅಡಿ 30 ದಿನದೊಳಗೆ ನಕ್ಷೆಗೆ ಅನುಮೋದನೆ ನೀಡಲಾಗುತ್ತಿದೆ. ಇದಕ್ಕಿಂತ ಬೃಹತ್ ಕಟ್ಟಡಗಳ ನಕ್ಷೆಗೆ ಅನುಮೋದನೆ ನೀಡಲು ಮುಖ್ಯ ಎಂಜಿನಿಯರ್‌ಗಳಿಗಿದ್ದ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಗಿದೆ. ಕೆರೆ–ಕಟ್ಟೆ, ರಾಜಕಾಲುವೆ, ಖರಾಬು ಪ್ರದೇಶವನ್ನು ಕಂದಾಯ ಇಲಾಖೆ ದಾಖಲೆಯಲ್ಲಿರುವಂತೆ ನಮೂದಿಸಿ, ನಕ್ಷೆ ಅನುಮೋದನೆಗೆ ಹೊಸದಾಗಿ ಆದೇಶ ಹೊರಡಿಸಲಾಗಿದೆ. ಬೃಹತ್ ನೀರುಗಾಲುವೆ ಮುಖ್ಯ ಎಂಜಿನಿಯರ್ ಇದಕ್ಕೆ ಹೊಣೆಗಾರರು. ಹೀಗಾಗಿ ಸ್ವಲ್ಪ ತಡವಾಗುತ್ತದೆ. ಆನ್‌ಲೈನ್‌ನಲ್ಲೇ ಎಲ್ಲ ಪ್ರಕ್ರಿಯೆಗಳು ನಡೆಯುವ ಸಾಫ್ಟ್‌ವೇರ್ ಬಂದ ಮೇಲೆ ಯಾವ ಸಮಸ್ಯೆ ಆಗುವುದಿಲ್ಲ’ ಎಂದರು.



## ‘ತಿದ್ದುಪಡಿಯಿಂದ ಸಮಸ್ಯೆ’

‘ಬಿಬಿಎಂಪಿಯಲ್ಲಿ ಕಟ್ಟಡ ನಕ್ಷೆಗೆ ಆನ್‌ಲೈನ್‌ನಲ್ಲಿ ನಿಗದಿತ ಸಮಯದಲ್ಲಿ ಮಂಜೂರು ದೊರೆಯುತ್ತಿಲ್ಲ. ಇದರ ಜೊತೆಗೆ ಮೂರು ತಿಂಗಳಲ್ಲಿ ಎರಡು ಬಾರಿ ಅನುಮೋದನೆ ಪ್ರಕ್ರಿಯೆಗೆ ತಿದ್ದುಪಡಿ ತಂದಿರುವುದರಿಂದ ನಕ್ಷೆ ಮಂಜೂರಿಗೆ ಎರಡು–ಮೂರು ಬಾರಿ ಅರ್ಜಿ ಸಲ್ಲಿಸಬೇಕಾಗಿದೆ ಎಂದು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ (ಇಂಡಿಯಾ) ಬೆಂಗಳೂರು ಕೇಂದ್ರದ ಅಧ್ಯಕ್ಷ ಶ್ರೀಕಾಂತ್ ಎಸ್. ಚನ್ನಾಲ್ ದೂರಿದರು.

‘ಮಾನವ ಹಸ್ತಕ್ಷೇಪವಿಲ್ಲದೆ ಎಲ್ಲ ರೀತಿಯ ಪ್ರಕ್ರಿಯೆಗಳನ್ನು ಆನ್‌ಲೈನ್‌ನಲ್ಲೇ ನಡೆಸಿ ಕಟ್ಟಡ ನಕ್ಷೆಗೆ ಮಂಜೂರು ನೀಡಲಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ, ನಿಗದಿಯಾಗಿರುವ ದಿನಗಳೊಳಗೆ ನಕ್ಷೆಗೆ ಮಂಜೂರಾತಿ ಸಿಗುತ್ತಿಲ್ಲ. ನಕ್ಷೆ ಅನುಮೋದನೆಗೆ ತಾಂತ್ರಿಕ ಅನುಭವ ಇಲ್ಲದವರಿಗೆ ಜವಾಬ್ದಾರಿ ವಹಿಸಲಾಗಿದೆ. ಸಿಂಗಲ್ ಯೂನಿಟ್ ಎಂದು ಹೇಳಲಾಗುವ 30x40 ಅಡಿಯ ಮನೆಗಳಿಗೆ 7 ದಿನಗಳಲ್ಲಿ ‘ಸುವರ್ಣ ಪರವಾನಗಿ’ ನೀಡಬೇಕು. 375 ಚದರ ಮೀಟರ್ ನಿಂದ 15 ಮೀಟರ್‌ಗಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ವಲಯ ನಗರ ಯೋಜನೆ ಸಹಾಯಕ ನಿರ್ದೇಶಕರು ಹಾಗೂ 4 ಸಾವಿರ ಚದರ ಮೀಟರ್ ನಿವೇಶನ ಹಾಗೂ 15 ಮೀಟರ್‌ಗಿಂತ ಎತ್ತರದ ಕಟ್ಟಡಗಳಿಗೆ ಜಂಟಿ ಆಯುಕ್ತರು 15 ದಿನಗಳಲ್ಲಿ ನಕ್ಷೆಗೆ ಅನುಮತಿ ನೀಡಬೇಕು. ಬೃಹತ್ ಕಟ್ಟಡಗಳಿಗೆ ವಲಯ ಆಯುಕ್ತರು ಹಾಗೂ ಮುಖ್ಯ ಆಯುಕ್ತರು 30 ದಿನಗಳಲ್ಲಿ ಅನುಮೋದನೆ ನೀಡಬೇಕು. ಆದರೆ ಇದ್ಯಾವುದೂ ಅನುಮೋದನೆ ಆಗುತ್ತಿಲ್ಲ’ ಎಂದು ಆರೋಪಿಸಿದರು.

# ಬೆಂಗಳೂರಿನ ಇಬ್ಬರ ಮೃತದೇಹ ಪತ್ತೆ

### ಉತ್ತರಕಾಶಿಯಲ್ಲಿ ಸಂಭವಿಸಿದ್ದ ಹಿಮಪಾತ

ಪ್ರಜಾವಾಣಿ ವಾರ್ತೆ



ಡಾ.ಕೆ.ರಕ್ಷಿತ್

**ಬೆಂಗಳೂರು:** ‘ಡೆಹ್ರಾಡೂನ್‌ನ ಉತ್ತರಕಾಶಿ ಬಳಿ ಹೋದ ವಾರ ಉಂಟಾಗಿದ್ದ ಹಿಮಪಾತದಿಂದಾಗಿ ಮೃತಪಟ್ಟಿದ್ದ ತರಬೇತಿ ನಿರತ ಪರ್ವತಾರೋಹಿಗಳಲ್ಲಿ ಕರ್ನಾಟಕದ ಡಾ.ಕೆ. ರಕ್ಷಿತ್ ಹಾಗೂ ಎಂ.ವಿಕ್ರಂ ಎಂಬುವರು ಸೇರಿದ್ದಾರೆ’ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

‘ಉತ್ತರಕಾಶಿಯ ದ್ರೌಪದಿ ಕಾ ದಂಡ–2 ಶಿಖರ ಏರಿದ್ದ 29 ಮಂದಿಯನ್ನೊಳಗೊಂಡ ಪರ್ವತಾರೋಹಿಗಳ ತಂಡದಲ್ಲಿ ರಕ್ಷಿತ್ ಹಾಗೂ ವಿಕ್ರಂ ಅವರೂ ಇದ್ದರು. ಇವರಿಬ್ಬರು ಶಿಬಿರಾರ್ಥಿಗಳಾಗಿದ್ದರು’ ಎಂದು ಹೇಳಿದ್ದಾರೆ.

‘ರಕ್ಷಿತ್ ಹಾಗೂ ವಿಕ್ರಂ ಅವರ ಮೃತದೇಹಗಳನ್ನು ಭಾನುವಾರ ಪತ್ತೆ ಮಾಡಲಾಗಿದೆ’ ಎಂದು ನೆಹರೂ ಪರ್ವತಾರೋಹಣ ಸಂಸ್ಥೆ (ಎನ್‌ಐಎಂ) ತಿಳಿಸಿದೆ. ಇಬ್ಬರೂ ಎನ್‌ಐಎಂನಿಂದ ಆಯೋಜಿಸಲಾಗುವ 28 ದಿನಗಳ ಪ್ರಾಥಮಿಕ ಪರ್ವತಾರೋಹಣ ಕೋರ್ಸ್ ಪೂರ್ಣಗೊಳಿಸಿದ್ದರು. ಬಳಿಕ ಅಲ್ಲೇ 28 ದಿನಗಳ ಅಡ್ವಾನ್ಸ್ಡ್ ಮೌಂಟನೀರಿಂಗ್ ಕೋರ್ಸ್‌ಗೆ (ಎಎಂಸಿ) ದಾಖಲಾಗಿದ್ದರು.

ಬೆಂಗಳೂರಿನ ಶ್ರೀನಗರ ನಿವಾಸಿಯಾಗಿರುವ ರಕ್ಷಿತ್, ಮುಂದಿನ ವರ್ಷದ ಮೇ ತಿಂಗಳಿನಲ್ಲಿ ಮೌಂಟ್ ಎವರೆಸ್ಟ್ ಶಿಖರ ಏರುವ ಕನಸು ಹೊಂದಿದ್ದರು.

‘ರಕ್ಷಿತ್, ದಿಟ್ಟ ಸಾಹಸಿಯಾಗಿದ್ದ. ಎಲ್ಲಾ ಬಗೆಯ ಕೌಶಲಗಳನ್ನೂ ಕರಗತ ಮಾಡಿಕೊಂಡಿದ್ದ. ಮೌಂಟ್ ಎವರೆಸ್ಟ್ ಶಿಖರ ಏರಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದ. ಆದರೆ ವಿಧಿಯಾಟವೇ ಬೇರೆಯಾಗಿತ್ತು. ಈ ದುರ್ಘಟನೆಯಲ್ಲಿ ಆತ ಪ್ರಾಣವನ್ನೇ ಕಳೆದುಕೊಂಡ. ಅದರೊಂದಿಗೆ ಆತನ ಕನಸೂ ಕಮರಿ ಹೋಯಿತು’ ಎಂದು ಸ್ನೇಹಿತ ಹಾಗೂ ಸಹ ಪರ್ವತಾರೋಹಿ ಪುರುಷೋತ್ತಮ ಎಂಬುವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ವೈಟ್‌ಫೀಲ್ಡ್ ನಿವಾಸಿಯಾಗಿರುವ ವಿಕ್ರಂ ಕೂಡ ದೊಡ್ಡ ಕನಸೊಂದನ್ನು ಇಟ್ಟುಕೊಂಡು ಸ್ವಯಂ ಪ್ರೇರಿತವಾಗಿ ಎಎಂಸಿಗೆ ದಾಖಲಾಗಿದ್ದರು’ ಎಂದು ಕರ್ನಾಟಕ ಪರ್ವತಾರೋಹಣ ಸಂಸ್ಥೆಯ (ಕೆಎಂಎ) ಮೂಲಗಳು ಹೇಳಿವೆ.

ಎನ್‌ಐಎಂನಲ್ಲಿ ತರಬೇತಿ ಪಡೆಯುತ್ತಿದ್ದ ತಂಡವು ಅಕ್ಟೋಬರ್ 4ರ ಮಂಗಳವಾರ ಬೆಳಿಗ್ಗೆ 8.45ರ ಸುಮಾರಿಗೆ ಪರ್ವತಾರೋಹಣ ಅಭ್ಯಾಸ ನಡೆಸಿ ಹಿಂತಿರುಗುತ್ತಿದ್ದಾಗ ಹಠಾತ್ತನೆ ಹಿಮಪಾತ ಉಂಟಾಗಿತ್ತು. ಹಿಮದಡಿ ಸಿಲುಕಿದ್ದ ನಾಲ್ವರ ಶವಗಳನ್ನು ಘಟನೆ ನಡೆದ ದಿನವೇ ಹೊರತೆಗೆಯಲಾಗಿತ್ತು. ರಾಜ್ಯ ತುರ್ತು ಕಾರ್ಯಾಚರಣೆ ಕೇಂದ್ರ (ಎಸ್‌ಇಒಸಿ), ಜಮ್ಮು ಮತ್ತು ಕಾಶ್ಮೀರದ ಹೈ ಆಲ್ಟಿಟ್ಯೂಡ್ ವಾರ್‌ಫೇರ್ ಸ್ಕೂಲ್‌ನ 14 ಮಂದಿಯನ್ನೊಳಗೊಂಡ ತಂಡ, ಎಸ್‌ಡಿಆರ್‌ಎಫ್ ಮತ್ತು ಇಂಡೊ ಟಿಬೇಟನ್ ಬಾರ್ಡರ್ ಪೊಲೀಸ್ (ಐಟಿಬಿಪಿ) ತಂಡಗಳು ಘಟನಾ ಸ್ಥಳದಲ್ಲಿ ನಿರಂತರವಾಗಿ ಶೋಧ ಕಾರ್ಯ ಕೈಗೊಂಡಿವೆ.



ಮಹಾಲಕ್ಷ್ಮಿ ಲೇಔಟ್ ವಿಧಾನಸಭೆ ಕ್ಷೇತ್ರದ ಬಿಜೆಪಿ ಎಸ್‌ಟಿ. ಮೋರ್ಚಾ ಅಧ್ಯಕ್ಷ ಎಸ್. ವಿನೋದ್ ಅವರ ನೇತೃತ್ವದಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಅಬಕಾರಿ ಸಚಿವ ಕೆ. ಗೋಪಾಲಯ್ಯ ಅವರು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಕ್ಷೇತ್ರ ಬಿಜೆಪಿ ಮಂಡಲದ ಅಧ್ಯಕ್ಷ ರಾಘವೇಂದ್ರ ಶೆಟ್ಟಿ, ಬಿಬಿಎಂಪಿ ಮಾಜಿ ಸದಸ್ಯ ಕೆ.ವಿ. ರಾಜೇಂದ್ರ ಕುಮಾರ್ ಇದ್ದರು

## ಪುನೀತ್ ಅಭಿನಯದ ‘ಗಂಧದ ಗುಡಿ’ಗೆ ಪ್ರಧಾನಿ ಮೋದಿ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಟ, ದಿವಂಗತ ಪುನೀತ್ ರಾಜ್‌ಕುಮಾರ್ ಅಭಿನಯದ ಕೊನೆಯ ಹಾಗೂ ಕನಸಿನ ಸಾಕ್ಷ್ಯ ಚಿತ್ರ ‘ಗಂಧದ ಗುಡಿ’ ಅ.28ಕ್ಕೆ ತೆರೆಗೆ ಬರಲಿದೆ. ಶನಿವಾರ ಈ ಸಾಕ್ಷ್ಯಚಿತ್ರದ ಟ್ರೇಲರ್ ಪಿಆರ್‌ಕೆ ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಗೊಂಡಿದ್ದು, ಅಭಿಮಾನಿಗಳಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಅಚ್ಚರಿ ಎಂಬಂತೆ, ಪ್ರಧಾನಿ ನರೇಂದ್ರ ಮೋದಿ ಕೂಡ ಟ್ರೇಲರ್‌ನ ಲಿಂಕ್ ಅನ್ನು ತಮ್ಮ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡು ಪುನೀತ್ ಅವರನ್ನು ಸ್ಮರಿಸಿದ್ದಾರೆ.

‘ಅಪ್ಪು ವಿಶ್ವದ ಲಕ್ಷಾಂತರ ಜನರ ಹೃದಯದಲ್ಲಿದ್ದಾರೆ. ಅವರು ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದರು, ಉತ್ಸಾಹಿಯಾಗಿದ್ದರು ಮತ್ತು ಅಪ್ರತಿಮ ಪ್ರತಿಭಾವಂತ. ಈ ಸಾಕ್ಷ್ಯಚಿತ್ರವು ಕರ್ನಾಟಕದ ಪ್ರಾಕೃತಿಕ ಸೌಂದರ್ಯಕ್ಕೆ, ಪರಿಸರ ಸಂರಕ್ಷಣೆಗೊಂದು ಕೊಡುಗೆ. ಅವರ ಈ ಸಾಹಸಕ್ಕೆ ಶುಭ ಹಾರೈಕೆಗಳು ’ ಎಂದು ಮೋದಿ ಬರೆದುಕೊಂಡಿದ್ದಾರೆ.





–ಟ್ವಿಟರ್ ಚಿತ್ರ

‘ಕರ್ನಾಟಕದ ಕಾಡು ಉಳಿಸಿ’ ಎಂಬುದನ್ನು ಚಿತ್ರದ ಟ್ರೇಲರ್ ಹೇಳುತ್ತಿದೆ. ಚಿತ್ರದ ನಿರ್ದೇಶಕ ಅಮೋಘವರ್ಷ ಅವರೊಂದಿಗೆ ಕಾಡಿನಲ್ಲಿ ಸಂಚರಿಸುವ ಪುನೀತ್, ಕಾಡಿನ ಸೊಬಗನ್ನು ನೋಡಿ ಅಚ್ಚರಿಗೊಳ್ಳುತ್ತ ಹೋಗುತ್ತಾರೆ. ನಮ್ಮ ಹತ್ತಿರದಲ್ಲಿಯೇ ಎಷ್ಟು ಅದ್ಭುತವಾದ ಪ್ರಾಕೃತಿಕ ಸಂಪತ್ತಿದೆ ಎಂಬುದನ್ನು ಹೇಳುತ್ತಾರೆ.

ಈ ಸಾಕ್ಷ್ಯ ಚಿತ್ರವನ್ನು ವೈಲ್ಡ್ ಕರ್ನಾಟಕ ಖ್ಯಾತಿಯ ನಿರ್ದೇಶಕ ಅಮೋಘವರ್ಷ ನಿರ್ದೇಶಿಸಿದ್ದಾರೆ. ಪುನೀತ್ ರಾಜ್‌ಕುಮಾರ್ ಕನಸಿನ ‘ಪಿಆರ್‌ಕೆ’ ನಿರ್ಮಾಣ ಸಂಸ್ಥೆಯೇ ಚಿತ್ರವನ್ನು ನಿರ್ಮಿಸಿದೆ.

2021ರ ಅಕ್ಟೋಬರ್ 29ರಂದು ಅಪ್ಪು ನಿಧನ ಹೊಂದಿದ್ದರು. ಹೀಗಾಗಿ ಈ ವರ್ಷ ಅಕ್ಟೋಬರ್ 28ರಂದು ‘ಗಂಧದ ಗುಡಿ’ಯನ್ನು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಲು ಚಿತ್ರತಂಡ ಮುಂದಾಗಿದೆ.

## ಹಿರಿಯ ನಟ ಲೋಹಿತಾಶ್ವಗೆ ಹೃದಯಾಘಾತ: ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಹಿರಿಯ ನಟ ಲೋಹಿತಾಶ್ವ ಅವರಿಗೆ ಹೃದಯಾಘಾತವಾಗಿದೆ.

ಅವರನ್ನು ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಅಪೋಲೊ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಚಿಕಿತ್ಸೆ ಮುಂದುವರಿದಿದೆ.

ಟಿ.ಎಸ್. ಲೋಹಿತಾಶ್ವ ಅವರು ಚಿತ್ರ ನಟ, ನಾಟಕಕಾರ ಮತ್ತು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಅವರು ಐನೂರಕ್ಕೂ ಹೆಚ್ಚು ಕನ್ನಡ ಚಲನ ಚಿತ್ರಗಳು, ನಾಟಕಗಳು ಮತ್ತು ದೂರ ದರ್ಶನ ಧಾರಾವಾಹಿಗಳಲ್ಲಿ ನಟಿಸಿದ್ದಾರೆ.


ಅವರು ಚಿತ್ರರಂಗದಲ್ಲಿ ತಮ್ಮ ಗಂಭೀರ ಧ್ವನಿಗೆ ಹೆಸರಾದವರು. ಅವರ ಪುತ್ರ ನಟ ಶರತ್ ಲೋಹಿತಾಶ್ವ ಕನ್ನಡ ಚಿತ್ರರಂಗದಲ್ಲಿ ಜನಪ್ರಿಯ ಖಳನಟರಾಗಿದ್ದಾರೆ.

## ನಗರದಲ್ಲಿ ಇಂದು

**ಸಂವಿಧಾನ ಮತ್ತು ಕಾನೂನು ವ್ಯವಸ್ಥೆಗಳ ಬಗ್ಗೆ ಅರಿವು ಮತ್ತು ಜಾಗೃತಿ ಅಭಿಯಾನ:** ಉದ್ಘಾಟನೆ: ಜಗದೀಶ ಶೆಟ್ಟರ್, ಅಧ್ಯಕ್ಷತೆ: ವಿಶ್ವೇಶ್ವರ ಹೆಗಡೆ ಕಾಗೇರಿ, ಆಯೋಜನೆ: ವಿಂಡ್ಸೈಸ್ ಪ್ರೈ.ಲಿ. ಕಾನ್ಷಿ ಫೌಂಡೇಷನ್, ಸಾಕ್ಯ ಫೌಂಡೇಷನ್, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಈಸ್ಟ್, ಬೆಳಿಗ್ಗೆ 10.30

**ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಘಟಿಕೋತ್ಸವ:** ರಾಜ್ಯಪಾಲ ಥಾವರಚಂದ್ ಗೆಹಲೋತ್, ಮನ್‌ಸುಖ್ ಮಾಂಡವಿಯಾ, ಡಾ.ಕೆ. ಸುಧಾಕರ್, ಡಾ. ಪ್ರತಿಮಾ ಮೂರ್ತಿ, ಸ್ಥಳ: ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್, ಹೊಸೂರು ಮುಖ್ಯರಸ್ತೆ, ಮಧ್ಯಾಹ್ನ 2

**ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ:** ಮುಖ್ಯ ಅತಿಥಿ: ಎಂ.ಎಸ್. ಧೋನಿ, ಆಯೋಜನೆ ಮತ್ತು ಸ್ಥಳ: ಎಂ.ಎಸ್. ಧೋನಿ ಗ್ಲೋಬಲ್ ಸ್ಕೂಲ್, ಕೂಡ್ಲು ಗೇಟ್, ಬೆಳಿಗ್ಗೆ 10.30



ಎಂ.ಎಸ್. ಧೋನಿ

## ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

## ಬಿಬಿಎಂಪಿ ಕಚೇರಿ ಎದುರು ಹಳೆ ವಾಹನಗಳು

ಬಿಬಿಎಂಪಿಯ ರಾಜರಾಜೇಶ್ವರಿನಗರ ವಲಯ ಕಚೇರಿ ಎದುರು ಹಳೆ ವಾಹನಗಳ ಸಂಗ್ರಹದ ತಾಣವಿದೆ. ವರ್ಷಗಳಿಂದ ಹಲವಾರು ಕಾರು, ಟ್ರ್ಯಾಕ್ಟರ್, ಲಾರಿಗಳು ಇಲ್ಲಿವೆ. ಇವುಗಳ ಮೇಲೆ, ಒಳಗೆ ಗಿಡಗಳು ಬೆಳೆದಿವೆ. ಹಾವುಗಳ ವಾಸಸ್ಥಾನವಾಗಿದೆ. ಇಲ್ಲಿ ಉದ್ಯಾನವಿದ್ದು, ವೃದ್ಧರು ಸೇರಿದಂತೆ ಎಲ್ಲ ವಯೋಮಾನದವರೂ ವಾಯುವಿಹಾರಕ್ಕೆ ಬರುತ್ತಾರೆ. ಒಂದು ವಾಹನ ಹಳೆಯದಾದರೆ ಅದನ್ನು ಮಾರುವ ಪ್ರಕ್ರಿಯೆ ಇದೆ. ಅದಕ್ಕೆ ಒಂದಿಷ್ಟು ಹಣವಾದರೂ ಬರುತ್ತದೆ. ಆದರೆ, ಇಲ್ಲಿ ಹತ್ತಾರು ವಾಹನಗಳನ್ನು ವರ್ಷಗಳಿಂದ ಸ್ಕ್ರ್ಯಾಪ್ ಮಾಡಲಾಗಿದೆ. ಇವುಗಳನ್ನು 'ಹಳೆ ಪಾತ್ರೆ' ತೆಗೆದುಕೊಳ್ಳುವವರಿಗೇ ಹಾಕಬೇಕು. ಕೆ.ಜಿ. ಲೆಕ್ಕದಲ್ಲಿ ಅವರು ತೆಗೆದುಕೊಳ್ಳುತ್ತಾರೆ. ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿಯಿಂದ ಆರ್ಥಿಕ ನಷ್ಟವಾಗಿದೆ. ಅಲ್ಲದೆ, ಇಲ್ಲಿ ವಾಹನಗಳನ್ನು ನಿಲ್ಲಿಸಿರುವುದರಿಂದ ನಾಗರಿಕರಿಗೆ ಹುಳ-ಹಾವುಗಳ ಆತಂಕವಿದೆ.

**ಟಿ.ಇ. ಶ್ರೀನಿವಾಸ್, ಜಯಣ್ಣ ಬಡಾವಣೆ, ಆರ್.ಆರ್. ನಗರ**



ರಾಜರಾಜೇಶ್ವರಿ ನಗರ ವಲಯ ಕಚೇರಿ ಎದುರು ನಿಲುಗಡೆ ಮಾಡಲಾಗಿರುವ ಹಳೆ ವಾಹನಗಳು

## ದುರಸ್ತಿಯಾಗದ ರಸ್ತೆ: ಸಂಚಾರ ಪ್ರಯಾಸ



ಪೀಣ್ಯ ಕೈಗಾರಿಕಾ ಪ್ರದೇಶ 3ನೇ ಹಂತದಲ್ಲಿ ಹಾಳಾಗಿರುವ ರಸ್ತೆ

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ರಸ್ತೆಗಳು ಹಲವೆಡೆ ಹಾಳಾಗಿವೆ. ಅದರಲ್ಲೂ ಮೂರನೇ ಹಂತದ 1ನೇ ಅಡ್ಡರಸ್ತೆ ಸಂಪೂರ್ಣವಾಗಿ ಹದಗೆಟ್ಟಿದೆ. ಈ ರಸ್ತೆಯಲ್ಲಿ ಹಲವು ಕೈಗಾರಿಕೆಗಳಿದ್ದು, ವಾಹನ ಮತ್ತು ಜನ ಸಂಚಾರಕ್ಕೆ ತೊಂದರೆಯಾಗಿದೆ. ಕೈಗಾರಿಕೆಗಳಿಗೆ ಸರಕು ಸಾಗಣೆ ಮಾಡುವ ವಾಹನಗಳ ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುವ ಈ ರಸ್ತೆ ಹಾಳಾಗಿ ವರ್ಷಗಳೇ ಕಳೆದರೂ ದುರಸ್ತಿಪಡಿಸಲು ಯಾರೊಬ್ಬರು ಗಮನಹರಿಸಿಲ್ಲ. ಪೀಣ್ಯ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ₹100 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಸರ್ಕಾರ ಘೋಷಣೆ ಮಾಡಿ ಎರಡು ವರ್ಷಗಳೇ ಕಳೆದಿವೆ. ಆದರೆ, ಯಾವುದೇ ರಸ್ತೆಯೂ ದುರಸ್ತಿಯಾಗಿಲ್ಲ. 1ನೇ ಅಡ್ಡರಸ್ತೆಯನ್ನು ಕೂಡಲೇ ದುರಸ್ತಿಪಡಿಸಬೇಕು.

**ಸುರೇಶ್,** ಉದ್ಯಮಿ



ರಾಜರಾಜೇಶ್ವರಿ ದೇವಸ್ಥಾನದ ಮುಂದಿರುವ ಫ್ಲೆಕ್ಸ್

## ಆರ್‌.ಆರ್‌. ನಗರದಲ್ಲಿ ಫ್ಲೆಕ್ಸ್ ಹಾವಳಿ

ರಾಜರಾಜೇಶ್ವರಿ ನಗರದಲ್ಲಿ ಫ್ಲೆಕ್ಸ್ ಹಾವಳಿಗೆ ಕಡಿವಾಣವೇ ಇಲ್ಲ. ಎಲ್ಲ ಪಕ್ಷದ ನಾಯಕರು ಹಾಗೂ ಸಂಘ- ಸಂಸ್ಥೆಗಳ ಮುಖಂಡರ ಫ್ಲೆಕ್ಸ್‌ಗಳು ನಿತ್ಯವೂ ರಾರಾಜಿಸುತ್ತಲೇ ಇರುತ್ತವೆ. ಆದರೂ, ಬಿಬಿಎಂಪಿ ಅಧಿಕಾರಿಗಳು ಮೌನವಹಿಸಿದ್ದಾರೆ. ಫ್ಲೆಕ್ಸ್ ತೆರವುಗೊಳಿಸಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಅಧಿಕಾರಿಗಳು ಯಾವುದೇ ಕ್ರಮಕೈಗೊಳ್ಳುತ್ತಿಲ್ಲ. ಶಾಸಕರ ಕಚೇರಿ ಎದುರು ಹಾಗೂ ರಾಜರಾಜೇಶ್ವರಿ ದೇವಸ್ಥಾನದ ಸುತ್ತಮುತ್ತ ರಸ್ತೆಗಳಲ್ಲಿ ಯಾವಾಗಲೂ ಫ್ಲೆಕ್ಸ್‌ಗಳು ಇರುತ್ತವೆ. ಹೈಕೋರ್ಟ್ ಆದೇಶವನ್ನೂ ಆರ್‌.ಆರ್‌.ನಗರ ವಲಯ ಅಧಿಕಾರಿಗಳು ಪಾಲಿಸುತ್ತಿಲ್ಲ.

**ವರಲಕ್ಷ್ಮಿ ಶ್ರೀನಿವಾಸ್,** ಆರ್‌.ಆರ್‌. ನಗರ

## ಸಂಪೂರ್ಣ ಹಾಳಾಗಿರುವ ಪಾದಚಾರಿ ಮಾರ್ಗ

ಸಜ್ಜನರಾವ್ ವೃತ್ತದಿಂದ ಮಿನರ್ವ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಪಾದಚಾರಿ ಮಾರ್ಗ ಸಂಪೂರ್ಣ ಹಾಳಾಗಿದೆ. ಇತ್ತೀಚೆಗೆ ಅಭಿವೃದ್ಧಿಪಡಿಸಿದ್ದ ಮಾರ್ಗ ಕೆಲವೇ ದಿನಗಳಲ್ಲಿ ಹಾಳಾಗಿದ್ದು, ಕಳಪೆ ಕಾಮಗಾರಿಗೆ ಸಾಕ್ಷಿಯಾಗಿದೆ. ಪ್ರಮುಖ ಸಂಪರ್ಕ ರಸ್ತೆ ಆಗಿರುವುದರಿಂದ ಸದಾ ವಾಹನಗಳ ದಟ್ಟಣೆ ಇರುತ್ತದೆ. ಪಾದಚಾರಿಗಳು ರಸ್ತೆಗೆ ಇಳಿದರೆ ವಾಹನಗಳು ಡಿಕ್ಕಿ ಹೊಡೆಯುವ ಸಾಧ್ಯತೆ ಇದೆ. ಹಾಳಾಗಿರುವ ಪಾದಚಾರಿ ಮಾರ್ಗದಲ್ಲಿ ಬೀಳುವ ಆತಂಕ ಇದೆ. ಸಮಸ್ಯೆ ಕಾಣಿಸುತ್ತಿದ್ದರೂ ಸರಿಪಡಿಸುವ ಕಾಳಜಿಯನ್ನೂ ಬಿಬಿಎಂಪಿ ತೋರಿಸುತ್ತಿಲ್ಲ. ಕೂಡಲೇ ಪಾದಚಾರಿ ಮಾರ್ಗ ಸರಿಪಡಿಸಬೇಕು.

**ಮಂಜುನಾಥ್,** ವಿ.ವಿ.ಪುರ



ಮಿನರ್ವ ವೃತ್ತದ ಬಳಿ ಎ.ಎನ್‌.ಕೆ ರಸ್ತೆಯಲ್ಲಿ ಪಾದಚಾರಿ ಮಾರ್ಗ ಹಾಳಾಗಿರುವುದು

### ಕುಂದಲಹಳ್ಳಿ: ಎರಡು ತಿಂಗಳ ಹಿಂದೆಯಷ್ಟೇ ಸಂಚಾರಕ್ಕೆ ಮುಕ್ತವಾಗಿತ್ತು

# ಕಾಮಗಾರಿ ಕಳಪೆ: ಆರೋಪ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ನೂತನವಾಗಿ ನಿರ್ಮಾಣಗೊಂಡು ಎರಡು ತಿಂಗಳ ಹಿಂದೆ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಲಾಗಿದ್ದ ಕುಂದಲಹಳ್ಳಿ ಕೆಳಸೇತುವೆಯ ಬಳಿಯೇ ಕಾವೇರಿ ನೀರಿನ ಪೈಪ್‌ಗೆ ಹಾನಿಯಾಗಿರುವುದರಿಂದ 100 ಅಡಿಗೂ ಹೆಚ್ಚು ರಸ್ತೆ ಕುಸಿದು, ಹಾನಿಯಾಗಿದೆ.

ಮಾರತ್‌ಹಳ್ಳಿಯಿಂದ ವೈಟ್‌ಫೀಲ್ಡ್ ಹಾಗೂ ವರ್ತೂರಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಇದಾಗಿದ್ದು, ಪ್ರತಿ ದಿನ ಲಕ್ಷಾಂತರ ವಾಹನಗಳು ಈ ಭಾಗದಲ್ಲಿ ಸಂಚರಿಸುತ್ತವೆ. ಎರಡು ತಿಂಗಳ ಹಿಂದೆ ಸಂಚಾರಕ್ಕೆ ಮುಕ್ತಗೊಳಿಸಿರುವ ಮುಖ್ಯರಸ್ತೆಯಲ್ಲಿ ಪೈಪ್ ಒಡೆದಿರುವುದರಿಂದ ದಿಢೀರ್ ಸಮಸ್ಯೆಯಾಗಿ ವಾಹನ ಸವಾರರು ತೊಂದರೆ ಅನುಭವಿಸುವಂತಾಗಿದೆ.

ಕುಂದಲಹಳ್ಳಿ ಕೆಳಸೇತುವೆ ನಿರ್ಮಿಸುವ ವೇಳೆ ಎಇಸಿಎಸ್ ಹಾಗೂ ಬೆಮೆಲ್ ಬಡಾವಣೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಬಿಡಬ್ಲ್ಯುಎಸ್‌ಎಸ್‌ಬಿ ಕಾವೇರಿ ನೀರಿನ ಪೈಪ್‌ಗಳನ್ನು ಅಳವಡಿಸಲಾಗಿತ್ತು. ಈಗ ಇದ್ದಕ್ಕಿದ್ದಂತೆ ಪೈಪ್‌ಲೈನ್ ಒಡೆಯಲು ಕಳಪೆ ಕಾಮಗಾರಿಯೇ ಕಾರಣ ಎಂದು ಸ್ಥಳೀಯ ನಿವಾಸಿಗಳು ದೂರಿದರು.



ಕುಂದಲಹಳ್ಳಿ ಕೆಳಸೇತುವೆಯ ರಸ್ತೆ ಕುಸಿದಿರುವುದು

**ಮುಖ್ಯಾಂಶಗಳು**

- 100 ಅಡಿಗಿಂತ ಹೆಚ್ಚು ರಸ್ತೆ ಕುಸಿದಿದೆ
- ಅವೈಜ್ಞಾನಿಕವಾಗಿ ಪೈಪ್ ಅಳವಡಿಕೆ: ದೂರು
- ನೀರಿಗಾಗಿ ಎಇಸಿಎಸ್, ಬೆಮೆಲ್ ಬಡಾವಣೆ ನಿವಾಸಿಗಳ ಪರದಾಟ

ಕಾವೇರಿ ಪೈಪ್ ಒಡೆದಿದ್ದರಿಂದ ಎಇಸಿಎಸ್ ಹಾಗೂ ಬೆಮೆಲ್ ಬಡಾವಣೆ ಜನರು ಸುಮಾರು ಎಂಟು ಗಂಟೆಗಳ ಕಾಲ ದಿನಬಳಕೆಗೆ ಹಾಗೂ ಕುಡಿಯಲು ನೀರಿಲ್ಲದೆ ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಅವಘಡ ಸಂಭವಿಸಿದೆ. ವೈಜ್ಞಾನಿಕವಾಗಿ ಪೈಪ್‌ಗಳನ್ನು ಅಳವಡಿಸಿದರೆ ಸಾರ್ವಜನಿಕರ ಲಕ್ಷಾಂತರ ರೂಪಾಯಿ ತೆರಿಗೆ ಹಣ ಪೋಲಾಗುವುದನ್ನು ತಡೆಯಬಹುದಿತ್ತು ಎಂದು ಸ್ಥಳೀಯರು ಹೇಳಿದರು.


'ಶನಿವಾರ ಬೆಳಿಗ್ಗೆ ಕಾವೇರಿ ಪೈಪ್ ಒಡೆದು ರಸ್ತೆಗೆ ಹಾನಿಯಾಗಿರುವ ಸುದ್ದಿ ತಿಳಿದ ತಕ್ಷಣ ನೀರು ಪೋಲಾಗದಂತೆ ಕ್ರಮ ಕೈಗೊಂಡು ವಾಹನ ಸಂಚಾರ ಮಾರ್ಗ ಬದಲಾಯಿಸಲಾಗಿತ್ತು. ಭಾನುವಾರ ಸಂಜೆ ವೇಳೆಗೆ ಎಲ್ಲವನ್ನೂ ಸರಿಪಡಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಯಿತು' ಎಂದು ಮಹದೇವಪುರ ವಲಯದ ಬಿಡಬ್ಲ್ಯುಎಸ್‌ಎಸ್‌ಬಿ ಕಾರ್ಯನಿರ್ವಾಹಕ ಎಂಜಿನಿಯರ್ ಮಿರ್ಜಾ ತಿಳಿಸಿದರು.

## 'ಮಿನಿ ಪಾಕಿಸ್ತಾನ' ಪೋಸ್ಟ್ ಹಾಕಿದ ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

**ಚನ್ನರಾಯಪಟ್ಟಣ (ಹಾಸನ ಜಿಲ್ಲೆ):** ಇಲ್ಲಿನ ಬಾಗೂರು ರಸ್ತೆಯನ್ನು ಮಿನಿ ಪಾಕಿಸ್ತಾನ ಎಂದು ಬರೆದು ಫೇಸ್‌ಬುಕ್ ಸ್ಟೇಟಸ್ ಹಾಕಿದ್ದ ನೆಮ್ಮಾನ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ಈದ್ ಮಿಲಾದ್' ಹಿನ್ನೆಲೆಯಲ್ಲಿ ಬಾಗೂರು ರಸ್ತೆಯನ್ನು ಮುಸ್ಲಿಮರು ಬ್ಯಾನರ್ ಮತ್ತು ಬಂಟಿಂಗ್ಸ್ ಹಾಕಿ ಸಿಂಗರಿಸಿದ್ದರು. ನೆಮ್ಮಾನ್ ಇದನ್ನು ವಿಡಿಯೊ ಮಾಡಿದ್ದು, ಅದಕ್ಕೊಂದು ಹಾಡು ಜೋಡಿಸಿ ಸ್ಟೇಟಸ್ ಹಾಕಿದ್ದ. ಆತ ವಿಡಿಯೊ ಅಪ್‌ಲೋಡ್ ಮಾಡುವ ವೇಳೆ ಮಿನಿ ಪಾಕಿಸ್ತಾನ, ಬಾಗೂರು ರೋಡ್, ಈದ್ ಮಿಲಾದ್ ಎಂದು ಬರೆದುಕೊಂಡಿದ್ದ. ಕರ್ನಾಟಕದ ನೆಲವನ್ನು 'ಮಿನಿ ಪಾಕಿಸ್ತಾನ' ಎಂದು ಅಪಪ್ರಚಾರ ಮಾಡಿದ್ದಕ್ಕೆ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿದ್ದವು.



ಯಲಹಂಕ ಸಮೀಪದ ಜಾಲ ಹೋಬಳಿ ಬಿಲ್ಲಮಾರನಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ ಜಯಂತಿ ಅಂಗವಾಗಿ ಮೆರವಣಿಗೆ ನಡೆಯಿತು

# ವಾಲ್ಮೀಕಿ ಜಯಂತಿ ಸಂಭ್ರಮ

ಪ್ರಜಾವಾಣಿ ವಾರ್ತೆ

**ಯಲಹಂಕ:** ಜಾಲ ಹೋಬಳಿ ಬಿಲ್ಲಮಾರನಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಗ್ರಾಮದ ಆಂಜನೇಯ ಸ್ವಾಮಿಗೆ ಪೂಜೆ ನೆರವೇರಿಸಲಾಯಿತು. ನಂತರ ವಾಲ್ಮೀಕಿ ಮತ್ತು ದಿವಂಗತ ನಟ ಪುನೀತ್ ರಾಜಕುಮಾರ್ ಭಾವಚಿತ್ರ ಹಾಗೂ ಆಂಜನೇಯ ಸ್ವಾಮಿಯ ವಿಗ್ರಹವನ್ನು ಬೆಳ್ಳಿರಥದಲ್ಲಿ ಕೂರಿಸಿ, ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಕೀಲುಕುದುರೆ, ಬ್ಯಾಂಡ್ ಮತ್ತು ವಾದ್ಯತಂಡಗಳು ಮೆರವಣಿಗೆಗೆ ಮೆರುಗು ನೀಡಿದವು.

ಈ ವೇಳೆ ಮಾತನಾಡಿದ ಕಾಂಗ್ರೆಸ್ ಮುಖಂಡ ಎನ್.ಕೆ. ಮಹೇಶ್ ಕುಮಾರ್, 'ಸರ್ಕಾರ ಮೂರು ವರ್ಷಗಳ ಹಿಂದೆಯೇ ಪರಿಶಿಷ್ಟ ಜಾತಿ-ವರ್ಗಗಳಿಗೆ ಮೀಸಲಾತಿ ಹೆಚ್ಚಿಸುವುದಾಗಿ ಮಾತು ನೀಡಿದ್ದರೂ ಇದುವರೆಗೂ ಈಡೇರಿರಲಿಲ್ಲ. ಈ ವಿಚಾರವಾಗಿ ವಾಲ್ಮೀಕಿ ಪೀಠದ ಪ್ರಸನ್ನಾನಂದ ಶ್ರೀಗಳು 241 ದಿನಗಳ ಕಾಲ ಸತ್ಯಾಗ್ರಹ ನಡೆಸಿ, ಸರ್ಕಾರದ ಗಮನ ಸೆಳೆದಿದ್ದರು. ಸರ್ಕಾರ ಈಗ ಮೀಸಲಾತಿ ಹೆಚ್ಚಿಸಿದ್ದು, ಇದಕ್ಕಾಗಿ ಸ್ವಾಮೀಜಿ ಮತ್ತು ಸರ್ಕಾರಕ್ಕೆ ಸಮುದಾಯದ ಪರವಾಗಿ ಧನ್ಯವಾದಗಳನ್ನು ಅರ್ಪಿಸಲಾಗುತ್ತಿದೆ' ಎಂದು ತಿಳಿಸಿದರು.

ಜಯಂತಿ ಅಂಗವಾಗಿ ವಾಲಿಬಾಲ್, ರಂಗೋಲಿ, ಹಗ್ಗ-ಜಗ್ಗಾಟ ಮತ್ತಿತರ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

## 'ವಿರೋಧ ಭಕ್ತಿಯಿಂದ ದೇಶಕ್ಕೆ ಅನುಕೂಲ'

**ಗದಗ:** 'ಏಕವಚನದ ಬ್ರಹ್ಮ, ಭಂಡತನದ ಸರದಾರ, ದೇಶಭಕ್ತರ ಬಗ್ಗೆ ನಯಾಪೈಸೆ ಗೊತ್ತಿಲ್ಲದ ವ್ಯಕ್ತಿ ರಾಜ್ಯದಲ್ಲಿ ಇಂದು ಸಾವರ್ಕರ್ ಬಗ್ಗೆ ಮಾತನಾಡುತ್ತಾರೆ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಪರೋಕ್ಷವಾಗಿ ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು.

ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ನಡೆದ 'ಜಯೋಸ್ತುತೇ- ಸಾವಿರದ ಸಾವರ್ಕರ್' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಸಾವರ್ಕರ್ ಅನೇಕರನ್ನು ಪ್ರಭಾವಿಸಿದರು. ಇಂತಹ ಧೀಮಂತ ನಮ್ಮಲ್ಲಿದ್ದರೆಂದು ಹೇಳಿಕೊಳ್ಳಲು ಅವರಿಗೆ ಸಾಧ್ಯವಿಲ್ಲವಾದ್ದರಿಂದ ವಿರೋಧಿಸುತ್ತಾರೆ. ಹೀಗೆ ಹೆಸರಿನ ಕಾರಣಕ್ಕೆ ಅನೇಕರ ಮನದಲ್ಲಿ ವಿರೋಧ ಭಕ್ತಿ ಮೂಡಿದ್ದು, ಅದರಿಂದ ದೇಶಕ್ಕೆ ಅನುಕೂಲವೇ ಆಗಿದೆ' ಎಂದು ಪ್ರತಿಪಾದಿಸಿದರು.

'ದೇಶ ಕಟ್ಟಬೇಕಾದರೆ ಮುಂದಾಲೋಚನೆ ಇರಬೇಕು, ಅದು ಸಾವರ್ಕರ್ ಅವರಲ್ಲಿತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಸೈನ್ಯದ ನಾಯಕತ್ವ ಮತ್ತು ಸೈನಿಕರು ಎರಡೂ ಭಾರತದ ಕೈಯಲ್ಲಿರಬೇಕು. ಹಿಂದೂಗಳ ಕೈಯಲ್ಲೇ ಇರಬೇಕು ಎಂದು ಯೋಚಿಸಿದ್ದರು. ಸೇನೆಯಲ್ಲಿ ಬಹುಸಂಖ್ಯಾತರು ಹಿಂದೂಗಳೇ ಇರಬೇಕು ಎಂದು ಪ್ರಮುಖರ ಆಶಯವೂ ಆಗಿತ್ತು' ಎಂದು ಹೇಳಿದರು.

### ಚಿತ್ರಾವಳಿ




ಆರ್‌ಎಸ್‌ಎಸ್ ಬೆಂಗಳೂರು ಉತ್ತರ ವಿಭಾಗದ ವತಿಯಿಂದ ಬಸವೇಶ್ವರ ನಗರದ ಕುವೆಂಪು ಆಟದ ಮೈದಾನದಲ್ಲಿ ಭಾನುವಾರ ನಡೆದ ಪ್ರಾಥಮಿಕ ಶಿಕ್ಷಾ ವರ್ಗದ ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಸಹ ವ್ಯವಸ್ಥಾ ಪ್ರಮುಖ್ ಕಾ.ಶಂ.ಶ್ರೀಧರ್, ಎಂ.ಎಸ್‌.ರಾಮಯ್ಯ ವೈದ್ಯಕೀಯ ಕಾಲೇಜು ಮುಖ್ಯಸ್ಥ ಡಾ.ಎ.ಆರ್‌.ಸೋಮಶೇಖರ್ ಹಾಗೂ ವರ್ಗ ಕಾರ್ಯವಾಹ ಮುನಿರಾಜು ಪಾಲ್ಗೊಂಡಿದ್ದರು



ದೊಡ್ಡಬಳ್ಳಾಪುರದಲ್ಲಿ ಈದ್ ಮಿಲಾದ್ ಅಂಗವಾಗಿ ವಿವಿಧ ಸ್ತಬ್ಧ ಚಿತ್ರಗಳ ಮೆರವಣಿಗೆ ನಡೆಯಿತು

# ಸಂಭ್ರಮದ ಈದ್ ಮಿಲಾದ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಸಮುದಾಯವರು ಭಾನುವಾರ ನಗರದಲ್ಲಿ ಸಡಗರ ಹಾಗೂ ಸಂಭ್ರಮದಿಂದ ಆಚರಿಸಿದರು.

ಮುಸ್ಲಿಮರ ಮನೆಯಲ್ಲಿ ಬೆಳಿಗ್ಗೆಯಿಂದಲೇ ಸಂಭ್ರಮವಿತ್ತು. ಸಂಬಂಧಿಕರು ಹಾಗೂ ಸ್ನೇಹಿತರನ್ನು ಮನೆಗೆ ಆಹ್ವಾನಿಸಿ ಪರಸ್ಪರ ಹಬ್ಬದ ಶುಭಾಶಯ ಕೋರಿದರು. ಹಲವರು ದವಸ-ಧಾನ್ಯ ಹಾಗೂ ನಗದು ದಾನ ಮಾಡಿದರು. ಶಿವಾಜಿನಗರ, ರಸೆಲ್ ಮಾರುಕಟ್ಟೆ, ಕೆ.ಆರ್.ಮಾರುಕಟ್ಟೆ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಖರೀದಿಯೂ ಜೋರಾಗಿತ್ತು.

ನಗರದ ಮಸೀದಿ, ದರ್ಗಾ ಹಾಗೂ ಮದರಸಾಗಳಿಗೆ ವಿಶೇಷ ವಿದ್ಯುತ್ ಹಾಗೂ ಬಣ್ಣದ ಕಾಗದಗಳ ಅಲಂಕಾರ ಮಾಡಲಾಗಿತ್ತು. ವಿದ್ಯುತ್ ಬೆಳಕಿನಲ್ಲಿ ಮಸೀದಿಗಳು ಕಂಗೊಳಿಸುತ್ತಿದ್ದವು.

ಟ್ಯಾನರಿ ರಸ್ತೆಯಿಂದ ಶಿವಾಜಿನಗರಕ್ಕೆ ಈದ್ ಮಿಲಾದ್ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರು ಕೈಯಲ್ಲಿ ಬಲೂನ್‌ಗಳನ್ನು ಹಿಡಿದು ರಸ್ತೆಯುದ್ದಕ್ಕೂ ನೆರೆದಿದ್ದವರಿಗೆ ಶುಭಾಶಯ ಕೋರಿದರು. ಮಹಮ್ಮದ್ ಪೈಗಂಬರ್ ಅವರ ಸಂದೇಶಗಳ ಫಲಕಗಳನ್ನು ಹೊಂದಿದ್ದ ವಾಹನಗಳು ಗಮನಸೆಳೆದವು. ಟಿಪ್ಪು ಸುಲ್ತಾನ್‌ರಂತೆ ವೇಷ ಧರಿಸಿದ್ದ ಮಕ್ಕಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಕೆ.ಆರ್. ಮಾರುಕಟ್ಟೆಯಿಂದ ಪುರಭವನ ಮಾರ್ಗವಾಗಿ ನೃಪತುಂಗ ರಸ್ತೆಯ ವೈಎಂಸಿಎ ಮೈದಾನದವರೆಗೆ ಪ್ರತಿವರ್ಷ ಮೆರವಣಿಗೆ ನಡೆಯುತ್ತಿತ್ತು. ಆದರೆ, ಭಾನುವಾರ ಇಲ್ಲಿ ಮೆರವಣಿಗೆ ನಡೆಯಲಿಲ್ಲ.



ಟ್ಯಾನರಿ ರಸ್ತೆಯಲ್ಲಿ ಈದ್ ಮಿಲಾದ್ ಮೆರವಣಿಗೆ ನಡೆಯಿತು –ಪ್ರಜಾವಾಣಿ ಚಿತ್ರ

# ತಾಯಿಗೆ ಬೈದಿದ್ದಕ್ಕೆ ರೌಡಿ ಕೊಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ರೌಡಿ ರಾಹುಲ್ (29) ಎಂಬಾತನನ್ನು ಮಚ್ಚಿನಿಂದ ಹೊಡೆದು ಶನಿವಾರ ರಾತ್ರಿ ಕೊಲೆ ಮಾಡಲಾಗಿದೆ.

'ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ರಾಹುಲ್ ಹೆಸರು ಬೈಯ-ಪ್ಪನಹಳ್ಳಿ ಠಾಣೆಯ ರೌಡಿ ಪಟ್ಟಿಯಲ್ಲಿತ್ತು. ವರ್ಷದ ಹಿಂದೆಯಷ್ಟೇ ಜೈಲಿಗೆ ಹೋಗಿ ಬಂದಿದ್ದ. ಸದ್ಯ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ನಿವಾಸಿಗಳಾದ ಅರುಣ್ ಹಾಗೂ ಸತ್ಯವೇಲು ಎಂಬುವವರು ರಾಹುಲ್‌ನನ್ನು ಕೊಲೆ ಮಾಡಿರುವ ಮಾಹಿತಿ ಇದೆ. ಸದ್ಯ ಅವರಿಬ್ಬರು ತಲೆಮರೆಸಿಕೊಂಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

**ಆಟೊ ಚಾಲಕರ ನಡುವೆ ಗಲಾಟೆ:** 'ಆರೋಪಿಗಳಾದ ಅರುಣ್ ಹಾಗೂ ಸತ್ಯವೇಲು, ಆಟೊ ಚಾಲಕರು. ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ವಿಚಾರವಾಗಿ ಅವರಿಬ್ಬರ ಜೊತೆ ರವಿ ಹಾಗೂ ಮುರುಗನ್ ಎಂಬುವವರು ಗಲಾಟೆ ಮಾಡಿದ್ದರು. ಪರಸ್ಪರ ಹೊಡೆದಾಟವೂ ನಡೆದಿತ್ತು. ಸ್ಥಳೀಯರೇ ಜಗಳ ಬಿಡಿಸಿ ಕಳುಹಿಸಿದ್ದರು' ಎಂದು ಪೊಲೀಸರು ಹೇಳಿದರು.

'ರವಿ ಹಾಗೂ ಮುರುಗನ್, ಗಲಾಟೆ ವಿಷಯವನ್ನು ಸ್ನೇಹಿತನಾದ ರಾಹುಲ್‌ಗೆ ಹೇಳಿದ್ದರು. ಅರುಣ್‌ಗೆ ಕರೆ ಮಾಡಿದ್ದ ರಾಹುಲ್, 'ನಿಮ್ಮದು ಬಹಳ ಆಯಿತು. ಜೀವಂತ ಬಿಡುವುದಿಲ್ಲ. ಮನೆಗೆ ಬಂದು ಹೊಡೆಯುತ್ತೇನೆ' ಎಂದು ಬೆದರಿಸಿದ್ದ. ಜೊತೆಗೆ, ತಾಯಿ ಬಗ್ಗೆಯೂ ಕೆಟ್ಟದಾಗಿ ಮಾತನಾಡಿದ್ದ. ಇದರಿಂದ ಸಿಟ್ಟಾದ ಅರುಣ್ ಹಾಗೂ ಸತ್ಯವೇಲು, 'ನಿನ್ನ ಜಾಗಕ್ಕೆ ಬಂದು ಹೊಡೆಯುತ್ತೇವೆ' ಎಂದಿದ್ದರು.'

'ಆಟೊದಲ್ಲಿ ಮಚ್ಚು ಇಟ್ಟುಕೊಂಡು ಕೃಷ್ಣಯ್ಯನಪಾಳ್ಯ ಬಳಿ ಬಂದಿದ್ದ ಆರೋಪಿಗಳು, ರಾಹುಲ್ ಮೇಲೆ ಹಲ್ಲೆ ಮಾಡಿ ಕೊಂದು ಪರಾರಿಯಾಗಿದ್ದಾರೆ' ಎಂದೂ ತಿಳಿಸಿದರು.

## ಮೊಬೈಲ್ ಕಳವು: ಮೂವರ ಬಂಧನ

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸಿ ಪ್ರಯಾಣಿಕರ ಮೊಬೈಲ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟ ರಸ್ತೆಯ ನ್ಯೂ ಗುರಪ್ಪನ ಪಾಳ್ಯ ನಿವಾಸಿ ರಿಜ್ವಾನ್ ಖಾನ್ (33), ಜಯನಗರ ಎಸ್.ಆರ್. ಕೃಷ್ಣಪ್ಪ ಗಾರ್ಡನ್‌ನ ನಾಸೀರ್ (44) ಹಾಗೂ ಮೈಸೂರಿನ ನೆಹರುನಗರದ ಎ.ಇಮ್ರಾನ್ ಖಾನ್ (35) ಬಂಧಿತರು. ಇವರಿಂದ ₹ 2 ಲಕ್ಷ ಮೌಲ್ಯದ 15 ಮೊಬೈಲ್, ಆಟೊ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

'ಹೊಸೂರು ಮುಖ್ಯರಸ್ತೆ, ಬಿಟಿಎಂ ಲೇಔಟ್, ಜಯದೇವ ಆಸ್ಪತ್ರೆ ರಸ್ತೆ ಹಾಗೂ ಪಶ್ಚಿಮ ಕಾರ್ಡ್ ರಸ್ತೆಗಳಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಆರೋಪಿಗಳು ಸಂಚರಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಪ್ರಯಾಣಿಕರ ಮೊಬೈಲ್‌ಗಳನ್ನು ಕದ್ದು ಪರಾರಿಯಾಗುತ್ತಿದ್ದರು' ಎಂದು ಪೊಲೀಸರು ಹೇಳಿದರು.




ಬೆಂಗಳೂರಿನ ಹೊರವರ್ತುಲ ರಸ್ತೆಯ ಸುಮನಹಳ್ಳಿ ಜಂಕ್ಷನ್ ಬಳಿ ಭಾನುವಾರ ಗೂಡ್ಸ್ ಲಾರಿಯೊಂದಕ್ಕೆ ಬೆಂಕಿ ಹೊತ್ತಿಕೊಂಡಿತ್ತು. ಅವಘಡದಿಂದ ಲಾರಿ ಭಾಗಶಃ ಸುಟ್ಟಿದ್ದು, ಚಾಲಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ – ಪ್ರಜಾವಾಣಿ ಚಿತ್ರ

### ಸಂಕ್ಷಿಪ್ತ ಸುದ್ದಿ

## ಎಲ್‌ಟಿಟಿಇ ಬೆಂಬಲಿಗರಿಂದ ದಾಳಿಗೆ ಸಂಚು

ನವದೆಹಲಿ (ಪಿಟಿಐ): ವಾಣಿಜ್ಯ ಸಂಸ್ಥೆಗಳು ಮತ್ತು ಪ್ರಮುಖ ನಾಯಕರ ಮೇಲೆ ದಾಳಿ ನಡೆಸಲು ಇಬ್ಬರು ಎಲ್‌ಟಿಟಿಇ ಬೆಂಬಲಿಗರು ಸಂಚು ರೂಪಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್ಐಎ) ತಮಿಳುನಾಡಿನ ಎರಡು ಕಡೆ ಶೋಧ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇಲಂ ಮತ್ತು ಶಿವಗಂಗೈ ಜಿಲ್ಲೆಯ ಎರಡು ಕಡೆ ಶೋಧ ಕಾರ್ಯ ನಡೆಸಿದ ಎನ್ಐಎ ಅಧಿಕಾರಿಗಳು ಶ್ರೀಲಂಕಾ ಮೂಲದ ನಿಷೇಧಿತ ಎಲ್‌ಟಿಟಿಇ ಸಂಘಟನೆಗೆ ಸಂಬಂಧಿಸಿದ ಪುಸ್ತಕಗಳು, ಫೊಟೊಗಳು, ಸಿ.ಡಿಗಳು ಮತ್ತು ಡಿಜಿಟಲ್ ಸಾಧನಗಳನ್ನು ವಶಕ್ಕೆ ಪಡೆದಿದ್ದಾರೆ ಎಂದೂ ಹೇಳಿದ್ದಾರೆ.

ಈ ಇಬ್ಬರು ಎಲ್‌ಟಿಟಿಇ ಬೆಂಬಲಿಗರ ವಿರುದ್ಧ ಮೇ 19ರಂದು ಒಮಲೂರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜುಲೈ 25ರಂದು ಎನ್ಐಎ ಪ್ರಕರಣ ದಾಖಲಿಸಿಕೊಂಡಿತ್ತು.

## ಸಿಕ್ಕಿಂನಲ್ಲಿ ಮಳೆ: ಹಲವೆಡೆ ಭೂಕುಸಿತ

ಗ್ಯಾಂಗ್ಟಕ್ (ಪಿಟಿಐ): ಭಾನುವಾರ ಸುರಿದ ಭಾರಿ ಮಳೆ ಯಿಂದಾಗಿ ಸಿಕ್ಕಿಂನ ಹಲವೆಡೆ ಭೂಕುಸಿತ ಸಂಭವಿಸಿದ್ದು, ಗ್ಯಾಂಗ್ಟಕ್ ಮತ್ತು ಮತ್ತು ಪಶ್ಚಿಮ ಬಂಗಾಳ ನಡುವಿನ ರಸ್ತೆ ಸಂಪರ್ಕ ಕಡಿತವಾಗಿದೆ.

ಪೂರ್ವ ಸಿಕ್ಕಿಂನ ಸಿಂಗ್ತಮ್ ಮತ್ತು ರಂಗ್ಪೊ ನಡುವೆ ರಾಷ್ಟ್ರೀಯ ಹೆದ್ದಾರಿ–10ರಲ್ಲಿ ಎರಡು ಕಡೆಗಳಲ್ಲಿ ಬೃಹತ್ ಗಾತ್ರದ ಬಂಡೆಗಳು ರಸ್ತೆಗೆ ಬಿದ್ದಿವೆ. ಇದರಿಂದ ಸಿಂಗ್ತಮ್‌ನಿಂದ ಗ್ಯಾಂಗ್ಟಕ್‌ಗೆ ತೆರಳುವ ಮಾರ್ಗವೂ ಬಂದ್ ಆಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಸ್ತೆಗಳ ಮೇಲೆ ಬಿದ್ದಿರುವ ಬಂಡೆ, ಮಣ್ಣನ್ನು ತೆರವುಗೊಳಿಸಿ ರಸ್ತೆಗಳನ್ನು ಸಂಚಾರಕ್ಕೆ ಮುಕ್ತಗೊಳಿಸಲು ಇಡೀ ದಿನ ಬೇಕಾಗುತ್ತದೆ. ಪಶ್ಚಿಮ ಬಂಗಾಳದ ಸಿಲಿಗುರಿಗೆ ಪ್ರಯಾಣಿಸುತ್ತಿರುವವ-ರಿಗೆ ಸೆಂಟ್ರಲ್ ಪೆಂಡಮ್ ಅಥವಾ ಪಕ್ಯಾಂಗ್ ಮಾರ್ಗಗಳಲ್ಲಿ ತೆರಳಲು ಸೂಚಿಸಲಾಗಿದೆ ಎಂದು ಹೇಳಿದರು.

# ಇಬ್ಬರ ಮೇಲೆ ಹಲ್ಲೆ, ಚಾಕು ಇರಿತ

ಪ್ರಜಾವಾಣಿ ವಾರ್ತೆ

**ರಾಮದುರ್ಗ (ಬೆಳಗಾವಿ ಜಿಲ್ಲೆ):** ಬೈಕ್ ಪಕ್ಕಕ್ಕೆ ಸರಿಸಲಿಲ್ಲ ಎಂಬ ಕಾರಣಕ್ಕೆ ಎರಡು ಗುಂಪುಗಳ ಮಧ್ಯೆ ಪಟ್ಟಣದಲ್ಲಿ ಘರ್ಷಣೆ ಸಂಭವಿಸಿದ್ದು, ಯುವಕರಿಬ್ಬರ ಮೇಲೆ ಚಾಕು ಹಾಗೂ ಕಬ್ಬಿಣದ ಸಲಾಕೆಯಿಂದ ಹಲ್ಲೆ ನಡೆಸಲಾಗಿದೆ.

ರಾಮದುರ್ಗದ ಗೋಪಾಲ ಬಂಡಿವಡ್ಡರ ಅವರಿಗೆ ಚಾಕು ಇರಿಯಲಾಗಿದ್ದು, ರವಿ ಬಂಡಿವಡ್ಡರ ತಲೆಗೆ ಕಬ್ಬಿಣದ ಸಲಾಕೆಯಿಂದ ಹೊಡೆಯಲಾಗಿದೆ. ಇಬ್ಬರನ್ನೂ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಜಗಳ ಬಿಡಿಸಲು ಬಂದ ನಂಜುಂಡಿ ಸಾಬಣ್ಣ ಬಂಡಿವಡ್ಡರ ಎಂಬುವವರ ಮರ್ಮಾಂಗಕ್ಕೆ ಪೆಟ್ಟು ಬಿದ್ದಿದೆ.

'ರಾಮದುರ್ಗದ ಭಾಗ್ಯ ನಗರ ನಿವಾಸಿ ಅಮೀನ್ ರಾಜಾಸಾಬ್ ಜಂಗಲಶೇಖ್ ಮತ್ತು ಸಹಚರರಿಂದ ಹಲ್ಲೆ ನಡೆದಿದೆ. ಹುಡುಗರ ಮಧ್ಯೆ ನಡೆದ ಗಲಾಟೆಯಲ್ಲಿ ಜಾತಿ ನಿಂದನೆ ಮಾಡಿ, ಹಲ್ಲೆ ಮಾಡಿದ್ದಾರೆ' ಎಂದು ಗಾಯಗೊಂಡ ಗೋಪಾಲ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಅಮೀನ್ ತಲೆಗೆ ಪೆಟ್ಟಾಗಿದ್ದು ಬಾಗಲಕೋಟೆ ನಗರದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಘಟನೆಯಿಂದಾಗಿ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣ-ವಾಗಿತ್ತು. ಗೋಪಾಲ ಶ್ರೀರಾಮ ಸೇನಾ ಸಂಘಟನೆಯಲ್ಲಿ ಗುರುತಿಸಿಕೊಂಡಿ-ದ್ದರಿಂದ ಸ್ಥಳದಲ್ಲಿ ಯುವಕರ ಗುಂಪು ಸೇರಿತು. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಎಲ್ಲರನ್ನೂ ಮನೆಗೆ ಕಳುಹಿಸಿದರು. ಸಿಪಿಐ ಐ.ಆರ್. ಪಟ್ಟಣಶೆಟ್ಟಿ ನೇತೃತ್ವದಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಯಿತು.

## ಜೂಜಾಟ: ಐವರ ಬಂಧನ

ಬೆಂಗಳೂರು: ಜೆ.ಸಿ. ನಗರದ ಮುನಿಮಾರಪ್ಪ ಬಡಾವಣೆಯಲ್ಲಿ ಜೂಜು ಆಡುತ್ತಿದ್ದ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ₹ 51,450 ಜಪ್ತಿ ಮಾಡಿದ್ದಾರೆ.

'ಬಡಾವಣೆಯ ನಂದಿದುರ್ಗ ಮುಖ್ಯರಸ್ತೆಯಲ್ಲಿರುವ ಖಾಲಿ ನಿವೇಶನದ ಶೆಡ್‌ನಲ್ಲಿ ಆರೋಪಿಗಳು ಜೂಜು ಆಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಶನಿವಾರ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

# ಅಪಘಾತ: ಬೆಸ್ಕಾಂ ಮೀಟರ್ ರೀಡರ್ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕ್ಯಾಂಟರ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಮಂಜುಳಾ (41) ಎಂಬುವರು ಮೃತಪಟ್ಟಿದ್ದಾರೆ.

'ನಾಯಂಡಹಳ್ಳಿ ನಿವಾಸಿ ಮಂಜುಳಾ, ಬೆಸ್ಕಾಂ ಮೀಟರ್ ರೀಡರ್ ಆಗಿ ಕೆಲಸ ಮಾಡುತ್ತಿದ್ದರು. ಕೆಲಸದ ನಿಮಿತ್ತ ತಮ್ಮ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಮಂಜುಳಾ ಅವರು ಭಾನುವಾರ ಬೆಳಿಗ್ಗೆ 9.30ರ ಸುಮಾರಿಗೆ ನಾಯಂಡಹಳ್ಳಿ ಕೆಳ ಸೇತುವೆ ಮಾರ್ಗವಾಗಿ ಸುಮನಹಳ್ಳಿ ಜಂಕ್ಷನ್‌ನತ್ತ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಕೆಳ ಸೇತುವೆ ಬಳಿಯೇ ದ್ವಿಚಕ್ರ ವಾಹನಕ್ಕೆ ಕ್ಯಾಂಟರ್ ಡಿಕ್ಕಿ ಹೊಡೆದಿತ್ತು.'

'ದ್ವಿಚಕ್ರ ವಾಹನ ಸಮೇತ ರಸ್ತೆಗೆ ಬಿದ್ದಿದ್ದ ಮಂಜುಳಾ, ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

**ಚಾಲಕನ ಥಳಿಸಿದ ಜನ:** 'ಅಪಘಾತ ಸ್ಥಳದಲ್ಲಿ ಸೇರಿದ್ದ ಜನ, ಚಾಲಕನನ್ನು ಹಿಡಿದುಕೊಂಡು ಥಳಿಸಿದ್ದಾರೆ. ಗಾಯಗೊಂಡಿರುವ ಆತನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ವಶಕ್ಕೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

# 'ವೀರಭದ್ರಯ್ಯ ಅವರನ್ನೇ ಅಭ್ಯರ್ಥಿ ಮಾಡುತ್ತಾರೆ'

**ಮಧುಗಿರಿ:** ಶಾಸಕ ಎಂ.ವಿ. ವೀರಭದ್ರಯ್ಯ ಅವರನ್ನೇ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಘೋಷಿಸಬೇಕು ಎಂದು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಒತ್ತಡ ಹೇರಲು ಮಧುಗಿರಿ ಕ್ಷೇತ್ರದಿಂದ ಕಾರ್ಯಕರ್ತರು ಹಾಗೂ ವೀರಭದ್ರಯ್ಯ ಅಭಿಮಾನಿಗಳು 50ಕ್ಕೂ ಹೆಚ್ಚು ವಾಹನಗಳಲ್ಲಿ ಭಾನುವಾರ ಬೆಂಗಳೂರಿಗೆ ತೆರಳಿದರು.

ಕ್ಷೇತ್ರದ ವಿವಿಧ ಗ್ರಾಮಗಳಿಂದ ಜೆಡಿಎಸ್ ಕಾರ್ಯಕರ್ತರು ಪಟ್ಟಣದ ದಂಡಿನ ಮಾರಮ್ಮ ದೇವಾಲಯದ ಮುಂಭಾಗ ಜಮಾವಣೆಗೊಂಡು ವೀರಭದ್ರಯ್ಯ ಅವರೇ ಮುಂದಿನ ಚುನಾವಣೆಯಲ್ಲಿ ಅಭ್ಯರ್ಥಿಯಾಗಬೇಕು ಎಂದು ಆಗ್ರಹಿಸಿ ಜೈಕಾರ ಹಾಕಿದರು.

'ಶಾಸಕ ಎಂ.ವಿ.ವೀರಭದ್ರಯ್ಯ ಅವರು ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿರುವುದನ್ನು ಗಮನಿಸಿದ್ದೇನೆ. ಎಚ್.ಡಿ.ದೇವೇಗೌಡರು ಲೋಕಸಭಾ ಚುನಾವಣೆಯಲ್ಲಿ ಪರಭಾವಗೊಂಡಾಗ, ಮಧುಗಿರಿಯಲ್ಲಿ ಹೆಚ್ಚು ಮತ ಬಂದಿಲ್ಲ ಎಂದು ಎಂ.ವಿ. ವೀರಭದ್ರಯ್ಯ ಬೇಸರಗೊಂಡಿ-ದ್ದರು. ನಮ್ಮ ಕುಟುಂಬದ 5ನೇ ಪುತ್ರ ಅವರು. ಶಾಸಕರು ಏನೇ ಹೇಳಿಕೊಂಡರು ಜೆಡಿಎಸ್ ವರಿಷ್ಠ ಎಚ್. ಡಿ.ದೇವೇಗೌಡರು ಕೈ ಹಿಡಿದುಕೊಂಡು ಎಂ.ವಿ.ವೀರಭದ್ರಯ್ಯ ಅವರನ್ನು ಅಭ್ಯರ್ಥಿ ಮಾಡುತ್ತಾರೆ. ಜೆಡಿಎಸ್ ಕಾರ್ಯಕರ್ತರಿಗೆ ಯಾವುದೇ ಗೊಂದಲ ಬೇಡ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾ-ರಸ್ವಾಮಿ ಭರವಸೆ ನೀಡಿರುವುದಾಗಿ ಕಾರ್ಯಕರ್ತರು ತಿಳಿಸಿದರು.

ಪುರಸಭೆ ಅಧ್ಯಕ್ಷ ತಿಮ್ಮರಾಜು, ಸದಸ್ಯರಾದ ಎಂ.ಆರ್.ಜಗನ್ನಾಥ, ಎಂ.ಎಸ್. ಚಂದ್ರಶೇಖರ್ ಬಾಬು, ಮುಖಂಡರು ಇದ್ದರು.

# 'ರಾಜ್ಯದಲ್ಲಿ 70 ಲಕ್ಷ ಇ–ಶ್ರಮ ಕಾರ್ಡ್ ವಿತರಣೆ'

**ಸುರತ್ಕಲ್:** 'ದೇಶದಲ್ಲಿ 38 ಕೋಟಿ ಮಂದಿಗೆ ಇ-ಶ್ರಮ ಕಾರ್ಡ್ ವಿತರಿಸುವ ಗುರಿ ಇದೆ. ಇದುವರೆಗೆ 28 ಕೋಟಿ ಕಾರ್ಡ್‌ಗಳನ್ನು ವಿತರಿಸಲಾಗಿದೆ. ಕರ್ನಾ-ಟಕದಲ್ಲಿ ಇದುವರೆಗೆ 70 ಲಕ್ಷ ಇ-ಶ್ರಮ ಕಾರ್ಡ್‌ಗಳನ್ನು ವಿತರಿಸಲಾಗಿದೆ' ಎಂದು ಕೇಂದ್ರ ಉದ್ಯೋಗ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ರಾಜ್ಯ ಸಚಿವ ರಾಮೇಶ್ವರ ತೆಲೀ ತಿಳಿಸಿದರು.

ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ (ಎಂಆರ್‌ಪಿಎಲ್) ಸಂಸ್ಥೆಯಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಫಲಾನುಭವಿ-ಗಳಿಗೆ ಇ-ಶ್ರಮ ಕಾರ್ಡ್‌ಗಳನ್ನು-ಸಾಂಕೇತಿಕವಾಗಿ ಹಸ್ತಾಂತರಿಸಿದ ಬಳಿಕ ಅವರು ಮಾತನಾಡಿದರು. ಪ್ರಧಾನ ಮಂತ್ರಿ ಉಜ್ವಲ ಯೋಜನೆ (ಪಿಎಂಯುವೈ) ಅಡಿ ಹೊಸ ಅಡುಗೆ ಅನಿಲ ಸಂಪರ್ಕಗಳನ್ನು ಆಯ್ದ 20 ಫಲಾನುಭವಿಗಳಿಗೆ ಸಚಿವರು ಸಾಂಕೇತಿಕವಾಗಿ ಹಸ್ತಾಂತರಿಸಿದರು.

ಇ-ಶ್ರಮ ಕಾರ್ಡ್‌ಗಳನ್ನು ಆಯುಷ್ಮಾನ್ ಭಾರತ್, ಕಿಸಾನ್ ಸಮ್ಮಾನ್ ಯೋಜನೆ ಮತ್ತು ಪ್ರಧಾನ ಮಂತ್ರಿ ಯೋಗಿ ಮಾನ್ ಧನ್ ಯೋಜನೆಗಳ ಜೊತೆಗೆ ಬೆಸೆಯುವ ಬಗ್ಗೆ ಸಚಿವ ತೆಲೀ ಅವರು ಸುಳಿವು ನೀಡಿದರು.

'ಉಜ್ವಲ ಯೋಜನೆಯಡಿ ದೇಶದಲ್ಲಿ ಸುಮಾರು 9 ಕೋಟಿ ಅಡುಗೆ ಅನಿಲ ಸಂಪರ್ಕಗಳನ್ನು ಹಾಗೂ ಕರ್ನಾ-ಟಕದಲ್ಲಿ ಸುಮಾರು 37 ಲಕ್ಷ ಸಂಪರ್ಕ-ಗಳನ್ನುಕಲ್ಪಿಸಲಾಗಿದೆ' ಎಂದು ಸಚಿವರು ಮಾಹಿತಿ ನೀಡಿದರು.

ಎಂಆರ್‌ಪಿಎಲ್‌ನ ವಿಸ್ತರಣಾ ಯೋಜನೆಯಡಿ ಬೆಂಗಳೂರು ಬಳಿಯ ದೇವಗೊಂತಿಯಲ್ಲಿ ಎಂಆರ್‌ಪಿಎಲ್‌ನ ಹೊಸ ಮಾರುಕಟ್ಟೆ ಟರ್ಮಿನಲ್ ಅನ್ನು ₹ 3ಸಾವಿರ ಕೋಟಿ ವೆಚ್ಚದಲ್ಲಿ ಸ್ಥಾ-ಪಿಸಲಾಗುತ್ತಿದೆ. ಇದಕ್ಕೆ ವರ್ಚುವಲ್ ರೂಪದಲ್ಲಿ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

# ಲಾಲುಗೆ ನಿತೀಶ್ ಬೆಂಬಲ: ನಾಚಿಕೆಗೇಡು ಎಂದ ರವಿಶಂಕರ್ ಪ್ರಸಾದ್

ಪ್ರಜಾವಾಣಿ ವಾರ್ತೆ

**ನವದೆಹಲಿ (ಪಿಟಿಐ):** ಬಿಹಾರ ಮುಖ್ಯ ಮಂತ್ರಿ ನಿತೀಶ್ ಕುಮಾರ್ ಅವರ ವಿರುದ್ಧ ಬಿಜೆಪಿ ನಾಯಕ ರವಿಶಂಕರ್ ಪ್ರಸಾದ್ ಅವರು ಭಾನುವಾರ ಕಿಡಿಕಾರಿದ್ದಾರೆ.

ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರ ವಿರುದ್ಧ ಸಿಬಿಐ ಚಾರ್ಜ್‌ಶೀಟ್ ಸಲ್ಲಿರುವುದನ್ನು ನಿತೀಶ್ ವಿರೋಧಿಸಿರುವುದು ನಾಚಿಕೆಗೇಡು ಮತ್ತು ದುರಾದೃಷ್ಟಕರ ಎಂದು ಅವರು ಹೇಳಿದ್ದಾರೆ.

ಇಲ್ಲಿ ನಡೆದ ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿದ ರವಿಶಂಕರ್ ಪ್ರಸಾದ್, 'ಲಾಲು ಪ್ರಸಾದ್ ಮತ್ತು ಅವರ ಕುಟುಂಬ ಸದಸ್ಯರನ್ನು ಸಮರ್ಥಿಸಿಕೊಳ್ಳುವ ಮೂಲಕ ನಿತೀಶ್ ಅವರು ತಮ್ಮ ಜೀವಮಾನದಲ್ಲಿ ಉಳಿಸಿಕೊಂಡಿದ್ದ ಘನತೆ ಜೊತೆ ರಾಜಿ ಮಾಡಿಕೊಂಡರು. ಭ್ರಷ್ಟಾಚಾರದ ವಿಚಾರದಲ್ಲಿ ಅವರು ಕುರುಡಾಗಿದ್ದನ್ನು ನೋಡಲು ಬೇಸರ-ವಾಗುತ್ತದೆ' ಎಂದರು.

'ಭ್ರಷ್ಟಾಚಾರದ ಕಾರಣಕ್ಕಾಗಿಯೇ ನಿತೀಶ್ ಕುಮಾರ್ ಅವರು ಲಾಲು ಪ್ರಸಾದ್ ಅವರನ್ನು 2017ರಲ್ಲಿ ತೊರೆದಿದ್ದರು. ಈಗ ಈ ಹೇಳಿಕೆ ನೀಡಿರುವುದು ನಾಚಿಕೆಗೇಡು' ಎಂದಿದ್ದಾರೆ.

ಲಾಲು ಪ್ರಸಾದ್ ಅವರು ರೈಲ್ವೆ ಸಚಿವರಾಗಿದ್ದ ಅವಧಿಗೆ ಸಂಬಂಧಿಸಿದ ಮೊಕದ್ದಮೆಯೊಂದರಲ್ಲಿ ಲಾಲು ಮತ್ತು ಅವರು ಕುಟುಂಬ ಸದಸ್ಯರ ವಿರುದ್ಧ ಸಿಬಿಐ ಚಾರ್ಜ್‌ಶೀಟ್ ಸಲ್ಲಿಸಿದೆ. ಇದನ್ನು ವಿರೋಧಿಸಿದ್ದ ನಿತೀಶ್, 'ನಾನು ಮೈತ್ರಿಕೂಟಕ್ಕೆ ಮರಳಿರುವ ಕಾರಣ ಹೊಸ ಆಟಗಳು ಶುರುವಾಗಿವೆ' ಎಂದು ಶನಿವಾರ ಹೇಳಿದ್ದರು.

## ಚಾವಣಿ ಕುಸಿದು 9 ಮಂದಿ ಸಾವು

**ಪೇಶಾವರ (ಎಪಿ):** ಮನೆಯ ಚಾವಣಿ ಕುಸಿದು ಒಂದೇ ಕುಟುಂಬದ ಒಂಬತ್ತು ಜನರು ಮೃತಪಟ್ಟ ಘಟನೆ ಪಾಕಿಸ್ತಾನದ ಉತ್ತರ ಭಾಗದ ಚಿಲಾಸ್ ಪಟ್ಟಣದಲ್ಲಿ ನಡೆದಿದೆ.

ಮಹಿಳೆ ಮತ್ತು ಆಕೆಯ 2 ರಿಂದ 12 ವರ್ಷ ವಯಸ್ಸಿನ ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಮೃತಪಟ್ಟಿದ್ದಾರೆ. ಮಹಿಳೆಯ ಪತಿ ರೆಸ್ಟೋರೆಂಟ್‌ನಲ್ಲಿ ಮಾಣಿಯಾಗಿ ಕೆಲಸ ಮಾಡುತ್ತಿದ್ದು, ಅವಘಡ ನಡೆದಾಗ ಕೆಲಸಕ್ಕೆ ಹೋಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

### ‘ಹೆಸರಘಟ್ಟ ಉಳಿಸಿ’ ಅಭಿಯಾನ ತೀವ್ರಗೊಳಿಸಲು ಸಮಾಲೋಚನೆ

# ವೈವಿಧ್ಯತೆ ರಕ್ಷಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಹೆಸರಘಟ್ಟ ಉಳಿಸಿ’ ಅಭಿಯಾನದ ಅಂಗವಾಗಿ ಕಬ್ಬನ್ ಪಾರ್ಕ್‌ನಲ್ಲಿ ಪರಿಸರಾಸಕ್ತರು ಭಾನುವಾರ ಸಭೆ ಸೇರಿ ಮುಂದಿನ ಯೋಜನೆಗಳ ಕುರಿತು ಸಮಾಲೋಚನೆ ನಡೆಸಿದರು.

ಹೆಸರಘಟ್ಟ ಹುಲ್ಲುಗಾವಲು ಪ್ರದೇಶವನ್ನು ಮೀಸಲು ಸಂರಕ್ಷಿತ ಪ್ರದೇಶವನ್ನಾಗಿ ಸರ್ಕಾರ ಘೋಷಿಸಬೇಕು. ಈ ನಿಟ್ಟಿನಲ್ಲಿ ಕೈಗೊಂಡಿರುವ ಅಭಿಯಾನವನ್ನು ಮತ್ತಷ್ಟು ತೀವ್ರಗೊಳಿಸುವ ಕುರಿತು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.



ಕಬ್ಬನ್‌ಪಾರ್ಕ್‌ನಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದ ಪರಿಸರಾಸಕ್ತರು

‘ನಿಸರ್ಗದ ಜತೆಗೆ ಪ್ರಾಣಿಗಳು, ಪಕ್ಷಿಗಳು, ಕೀಟಗಳು ಮತ್ತು ಗಿಡ ಮರಗಳ ರಕ್ಷಣೆಗಾಗಿ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಹುಲ್ಲುಗಾವಲು ರಕ್ಷಿಸುವುದು ಅನಿವಾರ್ಯ ಮತ್ತು ಅಗತ್ಯವಾಗಿದೆ’ ಎಂದು ವೃಕ್ಷ ಫೌಂಡೇಷನ್ ಅಧ್ಯಕ್ಷ ವಿಜಯ್ ನಿಶಾಂತ್ ಪ್ರತಿಪಾದಿಸಿದರು.

ಹೆಸರಘಟ್ಟದಲ್ಲಿನ ಜೀವ ವೈವಿಧ್ಯದ ಕುರಿತು ಮಾತನಾಡಿದ ಬಿಬಿಎಂಪಿಯ ಜೀವವೈವಿಧ್ಯ ನಿರ್ವಹಣಾ ಸಮಿತಿಯ ವಿ.ಆರ್. ಭಾರ್ಗವ್ ಅವರು, ‘ಬೆಂಗಳೂರಿನ ಕೊನೆಯ ಹುಲ್ಲುಗಾವಲು ಹೆಸರಘಟ್ಟ. ಇದನ್ನು ರಕ್ಷಿಸುವುದು ನಮ್ಮ ಜವಾಬ್ದಾರಿ. ಈ ಕಾರ್ಯದಲ್ಲಿ ನಾವೆಲ್ಲರೂ ಬದ್ಧತೆಯಿಂದ ತೊಡಗಿಸಿಕೊಳ್ಳಬೇಕು’ ಎಂದು ಹೇಳಿದರು.

ಹೆಸರಘಟ್ಟದ ಚಂದನ ಮಾತನಾಡಿ, ‘ಕೆಲವರು ಈ ವಿಷಯದ ಬಗ್ಗೆ ರೈತರು ಮತ್ತು ಸ್ಥಳೀಯರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಂಜುನಾಥ್ ಲಕ್ಕವಳ್ಳಿ ಅವರು ನಿಸರ್ಗ ರಕ್ಷಣೆ ಕುರಿತು ಜಾನಪದ ಹಾಡುಗಳನ್ನು ಹಾಡುವ ಮೂಲಕ ಗಮನಸೆಳೆದರು.

ಜಗದೀಶ್ ರೆಡ್ಡಿ, ಅನಿಲ್ ಠಾಕೋರ್, ಜಿಷ್ಣು ದಾಸಗುಪ್ತ ಹಾಗೂ ಕಬ್ಬನ್ ನಡಿಗೆದಾರರ ಸಂಘ, ಸ್ವಯಂ ಜಾಗೃತಿ, ಧನಂಜಯ ಡಿಸಿ ಸಮೂಹ, ಹ್ಯಾಪಿ ವರ್ಲ್ಡ್ ಫೌಂಡೇಷನ್, ಸಿಂಹಾದ್ರಿ (ವನ್ಯಜೀವಿ ತಂಡ), ಲಾಲ್‌ಬಾಗ್ ನಡಿಗೆದಾರರ ಸಂಘಟನೆ, ಎಪಿಜೆ ಅಬ್ದುಲ್ ಕಲಾಂ ಸರ್ಕಾರೇತರ ಸಂಸ್ಥೆ ಪದಾಧಿಕಾರಿಗಳು ಸೇರಿದಂತೆ ಹಲವರು ಭಾಗವಹಿಸಿದ್ದರು.

# ‘ಉಚಿತ ವಸತಿ ನಿಲಯಕ್ಕೆ ಜಮೀನು’

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** ‘ಈಡಿಗರ ಸಮುದಾಯದ ಮಕ್ಕಳಿಗೆ ಉಚಿತ ವಸತಿ ನಿಲಯಕ್ಕಾಗಿ, ಶಾಲಾ ಕಾಲೇಜು ಪ್ರಾರಂಭಿಸಲು ಐದು ಎಕರೆ ಭೂಮಿ ಮಂಜೂರು ಮಾಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ’ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಭರವಸೆ ನೀಡಿದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಕೆಂಗೇರಿ ಹೋಬಳಿ ಆರ್ಯ ಈಡಿಗರ ಸಂಘದ ವತಿಯಿಂದ ಮರಿಯಪ್ಪನಪಾಳ್ಯದಲ್ಲಿ ಹಮ್ಮಿಕೊಂಡಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 108ನೇ ಜಯಂತ್ಯುತ್ಸವ ಹಾಗೂ ವಿದ್ಯಾರ್ಥಿ ವೇತನ ವಿತರಿಸಿ ಮಾತನಾಡಿದ ಅವರು, ‘ಉಳ್ಳವರು ಕಡು ಬಡ ಮಕ್ಕಳ ಶಿಕ್ಷಣಕ್ಕಾಗಿ ಸಹಾಯ ಹಸ್ತ ಚಾಚಬೇಕು’ ಎಂದು ಹೇಳಿದರು.

‘ಪ್ರದೇಶ ಆರ್ಯ ಈಡಿಗರ ಸಂಘದ ಜಂಟಿ ಕಾರ್ಯದರ್ಶಿ ಆರ್.ಪಿ. ಪ್ರಕಾಶ್ ಅವರು ಪ್ರತಿವರ್ಷ ಸಮಾಜದ ಕಡುಬಡವರು, ಸೇರಿದಂತೆ ಎಲ್ಲ ವರ್ಗದ ಜನರಿಗೂ ಸಹಾಯ ಮಾಡುವ ಮೂಲಕ ನೊಂದವರ ಧ್ವನಿಯಾಗಿದ್ದಾರೆ’ ಎಂದು ಪ್ರಶಂಸೆ ವ್ಯಕ್ತಪಡಿಸಿದ ಅವರು ಪ್ರತಿ ದಿವಸ ನನ್ನ ಮೇಲೆ ಸತತ ಒತ್ತಡ ತಂದು ವಿಶ್ವೇಶ್ವರಯ್ಯ ಬಡಾವಣೆಯಲ್ಲಿ 10 ಸಾವಿರ ಅಡಿ ನಿವೇಶನ ಮಂಜೂರು ಮಾಡಿಸುವಲ್ಲಿ ಆರ್.ಪಿ.ಪ್ರಕಾಶ್ ಮುಂದಾಗಿದ್ದಾರೆ. ಅವರಂತೆ ಎಲ್ಲರೂ ಸಮಾಜ ಮುಖಿಸೇವೆಗೆ ಮುಂದಾಗುವ ಅಗತ್ಯ ಇದೆ ಎಂದರು.



ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ವಿದ್ಯಾರ್ಥಿ ವೇತನ ಚೆಕ್ ವಿತರಿಸಿದರು. ಈಡಿಗರ ಸಂಘದ ಉಪಾಧ್ಯಕ್ಷ ಟಿ.ಶಿವಕುಮಾರ್, ಜಂಟಿ ಕಾರ್ಯದರ್ಶಿ ಆರ್.ಪಿ.ಪ್ರಕಾಶ್, ಟಿ.ಮುತ್ತುರಾಜ್ ಇದ್ದರು

ಪ್ರದೇಶ ಈಡಿಗರ ಸಂಘದ ಜಂಟಿ ಕಾರ್ಯದರ್ಶಿ ಆರ್.ಪಿ.ಪ್ರಕಾಶ್ ಮಾತನಾಡಿ, ‘ಯಶವಂತಪುರ ಕ್ಷೇತ್ರದಲ್ಲಿ ಸಾಕಷ್ಟು ಸರ್ಕಾರಿ ಜಮೀನಿದ್ದು ಜನಾಂಗದ ಮಕ್ಕಳಿಗಾಗಿ ವಿದ್ಯಾರ್ಥಿ ನಿಲಯ, ಐಎಎಸ್, ಐಪಿಎಸ್, ಕೆಎಎಸ್ ತರಬೇತಿಗಾಗಿ ಕಟ್ಟಡ ನಿರ್ಮಿಸಲು ಸಚಿವ ಎಸ್.ಟಿ.ಸೋಮಶೇಖರ್ ಐದು ಎಕರೆ ಜಮೀನು ಮಂಜೂರು ಮಾಡಿಸಿಕೊಡಬೇಕು’ ಎಂದು ಒತ್ತಾಯಿಸಿದರು.

ಉಪಾಧ್ಯಕ್ಷ ಟಿ.ಶಿವಕುಮಾರ್ ಮಾತನಾಡಿ, ‘ಕಾಂಗ್ರೆಸ್-ಜೆಡಿಎಸ್ ಸಮಿಶ್ರ ಸರ್ಕಾರವಿದ್ದಾಗ ಎಸ್.ಟಿ.ಸೋಮಶೇಖರ್ ಅವರು ಬಿಡಿಎ ಅಧ್ಯಕ್ಷರಾಗಿದ್ದಾಗ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಬೃಹತ್ ನಿವೇಶನ ಮಂಜೂರು ಮಾಡಿಸಿಕೊಟ್ಟಿದ್ದಾರೆ. ಕಟ್ಟಡದ ನಿರ್ಮಾಣಕ್ಕೆ ಸಮಾಜದ ಕೆಲವರು ಈಗಾಗಲೇ ₹35ಲಕ್ಷ ದೇಣಿಗೆ ನೀಡಿದ್ದಾರೆ. ಸಮಾಜದ ಬಲಿಷ್ಠರು ಸಂಘದ ಕಟ್ಟಡ, ವಿದ್ಯಾರ್ಥಿನಿಲಯಕ್ಕೆ ಸಹಾಯ ಮಾಡಬೇಕು’ ಎಂದು ಮನವಿ ಮಾಡಿದರು.

ಕೆಂಗೇರಿ ಹೋಬಳಿ ಈಡಿಗರ ಸಂಘದ ಅಧ್ಯಕ್ಷ ಟಿ.ಮುತ್ತುರಾಜು ಅಧ್ಯಕ್ಷತೆ ವಹಿಸಿದ್ದರು.


## ಖಾಸಗಿ ಕಂಪನಿಯಲ್ಲಿ ಲೀಡ್ ಡಿಸೈನರ್ ಕೆಲಸ

https://aksharatypestudio.in/fonts/bengaluru ಫಾಂಟ್ ಡೌನ್‌ಲೋಡ್‌ಗೆ ಈ ಲಿಂಕ್ ಬಳಸಬಹುದಾಗಿದೆ.

## ತಿ.ನರಸೀಪುರ ಯುವಕನಿಂದ ಹೊಸ ಫಾಂಟ್

ತಿ.ನರಸೀಪುರ (ಮೈಸೂರು ಜಿಲ್ಲೆ): ಪಟ್ಟಣದ ಯುವ ಡಿಸೈನರ್ ಆರ್. ಮಂಜುನಾಥ್ ಅವರು ‘ಎಟಿಎಸ್ ಬೆಂಗಳೂರು’ ಹೆಸರಿನಲ್ಲಿ ಐದು ಹೊಸ ಕನ್ನಡದ ಯೂನಿಕೋಡ್ ಫಾಂಟ್‌ಗಳನ್ನು ವಿನ್ಯಾಸಗೊಳಿಸಿದ್ದಾರೆ.

ಮೈಸೂರಿನ ಖಾಸಗಿ ಕಂಪನಿಯಲ್ಲಿ ಲೀಡ್ ಡಿಸೈನರ್ ಆಗಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣದ ನಿವಾಸಿ ಆರ್. ಮಂಜುನಾಥ್, ತಮ್ಮ ಅಕ್ಷರ ಟೈಪ್ ಸ್ಟುಡಿಯೊ ಮೂಲಕ ಜನವರಿಯಲ್ಲಿ ಬಂಡೀಪುರ ಎಂಬ ಹೆಸರಿನಲ್ಲಿ ಹೊಸ ಕನ್ನಡ ಫಾಂಟ್ ನೀಡಿದ್ದರು.




ಬೆಂಗಳೂರು ಫಾಂಟ್ ಲೋಗೊ

ಈಗ ಮತ್ತೊಮ್ಮೆ ಸಾರ್ವಜನಿಕರ ಬಳಕೆಗೆ ಸರಳ, ಬಿಟ್ ಮ್ಯಾಪ್ ಮಾದರಿಯಲ್ಲಿ ವೈಯಕ್ತಿಕ ಹಾಗೂ ವಾಣಿಜ್ಯ ಬಳಕೆಗೆ ಪೂರಕವಾದ ಬೆಂಗಳೂರು ಹೆಸರಿನಲ್ಲಿ ಡಾಟ್, ಸ್ಮೂತ್, ಫಿಕ್ಸೆಲ್, ಸ್ಕ್ವೇರ್ ಹಾಗೂ ಎಲ್ಐಡಿ ಎಂಬ ಹೊಸ ಅಕ್ಷರಗಳನ್ನು ವಿನ್ಯಾಸಗೊಳಿಸಿ ತಮ್ಮ ವೆಬ್‌ನಲ್ಲಿ ಅಪ್‌ಲೋಡ್ ಮಾಡಿದ್ದಾರೆ.

## ಚಿತ್ರಾವಳಿ



ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ವಿಜಯದಶಮಿ ಅಂಗವಾಗಿ ಏರ್ಪಡಿಸಿದ್ದ ಪಥಸಂಚಲನದಲ್ಲಿ ಮುಸ್ಲಿಂ ಮುಖಂಡರು ಕೇಶವ ಬಲಿರಾಮ ಹೆಡಗೇವಾರ್, ಗೋಳ್ವಾಲ್ಕರ್ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು



ನಗರದ ನ್ಯಾಷನಲ್ ಕಾಲೇಜಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕಿ ರೀಟಾ ರೀನಿ ಅನುವಾದಿಸಿರುವ ‘ಸಿಖ್ ಕ್ರಾಂತಿ’ ಹಾಗೂ ಪ್ರಾಧ್ಯಾಪಕ ಡಾ.ಸಿ.ಜಿ ಲಕ್ಷ್ಮೀಪತಿ ಅವರ ‘ಕ್ಯಾಸ್ಟ್ ಕೆಮಿಸ್ಟ್ರಿ’ ಕೃತಿಗಳನ್ನು ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್, ಪತ್ರಕರ್ತ ಡಿ. ಉಮಾಪತಿ ಬಿಡುಗಡೆಗೊಳಿಸಿದರು. ನ್ಯಾಷನಲ್ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಪ್ರೊ.ಎಸ್.ಎನ್ ನಾಗರಾಜರೆಡ್ಡಿ, ಪ್ರಾಧ್ಯಾಪಕ ಡಾ.ರವಿಕುಮಾರ್ ಬಾಗಿ ಇದ್ದರು

# ನಗರದೆಲ್ಲೆಡೆ ಸಾಧಾರಣ ಮಳೆ: ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹಲವು ಪ್ರದೇಶಗಳಲ್ಲಿ ಭಾನುವಾರ ಸಂಜೆ ಮಳೆ ಸುರಿಯಿತು. ಮಧ್ಯಾಹ್ನದಿಂದಲೇ ಹಲವೆಡೆ ಮೋಡ ಕವಿದ ವಾತಾವರಣವಿತ್ತು.

ನಗರದಲ್ಲಿ ಕೆಲದಿನಗಳಿಂದ ಆಗಾಗ ಮೋಡ ಕವಿದ ವಾತಾವರಣ ಕಾಣಿಸಿಕೊಳ್ಳುತ್ತಿದೆ. ಭಾನುವಾರ ಸಂಜೆ ಕೆಲವೆಡೆ ಜೋರು ಮಳೆಯೇ ಸುರಿಯಿತು.

ರಾಜರಾಜೇಶ್ವರಿನಗರ, ನಾಗರಬಾವಿ, ಜ್ಞಾನಭಾರತಿ, ಚಂದ್ರಾಲೇಔಟ್, ವಿಜಯನಗರ, ಬಸವೇಶ್ವರನಗರ, ರಾಜಾಜಿನಗರ, ಮಲ್ಲೇಶ್ವರ, ಯಶವಂತಪುರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಆಯಿತು.



ಮಡಿವಾಳ, ಕೋರಮಂಗಲ, ಅಶೋಕನಗರ, ಶಿವಾಜಿನಗರ, ಎಂ.ಜಿ.ರಸ್ತೆ, ಹಲಸೂರು, ದೊಮ್ಮಲೂರು, ಇಂದಿರಾನಗರ, ಬೈಯಪ್ಪನಹಳ್ಳಿ, ಸಂಪಂಗಿರಾಮನಗರ, ವಿಲ್ಸನ್ ಗಾರ್ಡನ್, ಶಾಂತಿನಗರ, ಜಯನಗರ, ಬಸವನಗುಡಿ, ಚಾಮರಾಜಪೇಟೆ, ಕಲಾಸಿಪಾಳ್ಯ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಸಿಂಚನವಾಯಿತು.

ಬಹುತೇಕ ಪ್ರದೇಶಗಳಲ್ಲಿ ತುಂತುರು ಮಳೆ ಸುರಿದಿದ್ದು, ಕೆಲವೆಡೆ ಮಾತ್ರ ಮಳೆ ಅಬ್ಬರ ಜೋರಾಗಿತ್ತು.

ಭಾನುವಾರ ರಜೆ ದಿನವಾಗಿದ್ದರಿಂದ ಸಂಜೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಮಾರುಕಟ್ಟೆ ಪ್ರದೇಶಗಳಿಗೆ ಬಂದಿದ್ದರು. ಕೆಲವರು, ಸುರಿಯುವ ಮಳೆಯಲ್ಲೇ ಕೊಡೆ ಹಿಡಿದು ಓಡಾಡಿದರು. ಮಳೆಯಿಂದಾಗಿ ವಾಹನ ದಟ್ಟಣೆಯೂ ಇತ್ತು.

‘ನಗರದ ಕೆಲ ಭಾಗದಲ್ಲಿ ಸಾಧಾರಣ ಮಳೆ ಆಗಿದೆ. ಕೆಲವೆಡೆ ರಸ್ತೆಯಲ್ಲಿ ನೀರು ಹರಿದು, ವಾಹನಗಳ ಓಡಾಟಕ್ಕೆ ತೊಂದರೆ ಉಂಟಾಗಿತ್ತು. ಉಳಿದಂತೆ ಯಾವುದೇ ಹಾನಿ ಸಂಭವಿಸಿಲ್ಲ’ ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

# ‘ಕುಂಚಿಟಿಗರಿಗೆ ಕೇಂದ್ರದ ಒಬಿಸಿ ಮೀಸಲಾತಿ: ಸಿ.ಎಂ ಬಳಿಗೆ ನಿಯೋಗ’

ಪ್ರಜಾವಾಣಿ ವಾರ್ತೆ

**ಕೊಣನೂರು (ಹಾಸನ ಜಿಲ್ಲೆ):** ‘ಕುಂಚಿಟಿಗ ಸಮುದಾಯದವರಿಗೆ ಕೇಂದ್ರದ ಒಬಿಸಿ ಮೀಸಲಾತಿಗೆ ಆಗ್ರಹಿಸಿ ಮುಖ್ಯಮಂತ್ರಿ ಬಳಿಗೆ ನಿಯೋಗ ಕರೆದೊಯ್ಯಲಾಗುವುದು’ ಎಂದು ಪಟ್ಟನಾಯಕನಹಳ್ಳಿ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ ಹೇಳಿದರು.

ಅರಕಲಗೂಡು ತಾಲ್ಲೂಕು ಕುಂಚಿಟಿಗರ ಸಂಘದಿಂದ ಸಮೀಪದ ಮುಗಳೂರಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಪ್ರತಿಭಾ ಪುರಸ್ಕಾರ ಮತ್ತು ಕೇಂದ್ರದ ಒಬಿಸಿ ಮೀಸಲು ಹಕ್ಕೊತ್ತಾಯ ಸಭೆ’ಯಲ್ಲಿ ಅವರು ಮಾತನಾಡಿದರು.

## ‘ಮೀಸಲಾತಿಗಾಗಿ ಹೋರಾಟ’

‘ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕುಂಚಿಟಿಗರು ಒಕ್ಕಲಿಗರು ಎಂದು ನಮೂದಿಸಿಕೊಂಡಿದ್ದಾರೆ. ಕುಂಚಿಟಿಗ ಒಕ್ಕಲಿಗ ಎಂದು ಕರೆಯಲಾಗುತ್ತಿದ್ದು, ಅವರಿಗೆ 3ಎ ಸೌಲಭ್ಯ ದೊರೆಯುತ್ತಿದೆ. ಹಿಂದುಳಿದಿರುವ ನಮ್ಮ ಸಮಾಜಕ್ಕೆ ಮೀಸಲಾತಿ ಬೇಕಿದೆ. ಅದು ನಮ್ಮ ಸಮಾಜದ ಹಕ್ಕಾಗಿದ್ದು, ಗೊಂದಲಗಳಿಗೆ ಒಳಗಾಗುವುದು ಬೇಡ’ ಎಂದು ನಂಜಾವಧೂತ ಸ್ವಾಮೀಜಿ ಹೇಳಿದರು.

‘ಕುಂಚಿಟಿಗರು ಬುಡಕಟ್ಟು ಸಂಸ್ಕೃತಿಯಿಂದ ಕೃಷಿ ಹಿನ್ನೆಲೆಯಲ್ಲಿ ಬಂದಿದ್ದು, ಒಕ್ಕಲಿಗ ಸಮುದಾಯದ ಬಹುದೊಡ್ಡ ಅಂಗವೆಂದು ಕುಂಚಿಟಿಗ ಕುಲಶಾಸ್ತ್ರ ಅಧ್ಯಯನದಲ್ಲಿ ಸ್ಪಷ್ಟಪಡಿಸಿದ್ದರೂ ಕೇಂದ್ರದ ಒಬಿಸಿ ಮೀಸಲಾತಿ ಸಿಕ್ಕಿಲ್ಲ. ಇದಕ್ಕಾಗಿ ನಡೆಸುವ ಹೋರಾಟಕ್ಕೆ ನನ್ನ ಬೆಂಬಲವಿದೆ’ ಎಂದರು.

‘ಜನಪ್ರತಿನಿಧಿಗಳು ಕೇವಲ ಮತಕ್ಕಾಗಿ ಒಬಿಸಿ ನೆಪ ಹೇಳಿ ಅಧಿಕಾರ ಪಡೆಯುತಿದ್ದಾರೆ. ಸಮುದಾಯವನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆ. ಕುಂಚಿಟಿಗರ ತಪ್ಪಿನಿಂದಲೇ ಮೀಸಲಾತಿ ಸೌಲಭ್ಯ ಸಿಕ್ಕಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

## ಧ್ವಜಸ್ತಂಭದಲ್ಲೂ ಶೇ 40 ಕಮಿಷನ್ ಬೇಕೇ?: ಖಾದರ್

**ಮಂಗಳೂರು:** ‘ಧ್ವಜಸ್ತಂಭ ನಿರ್ಮಿಸಲು ₹3.5 ಲಕ್ಷ ಅನುದಾನ ಮೀಸಲಿಡುವಂತೆ ಸರ್ಕಾರ ಗ್ರಾಮ ಪಂಚಾಯಿತಿಗಳಿಗೆ ಸೂಚಿಸಿದೆ. ರಾಜ್ಯದಾದ್ಯಂತ ನಿರ್ದಿಷ್ಟ ಗುತ್ತಿಗೆ ಸಂಸ್ಥೆಯ ಮೂಲಕವೇ ಈ ಕಾಮಗಾರಿ ನಡೆಸುವಂತೆ ನಿರ್ದೇಶನ ನೀಡಿದೆ. ಧ್ವಜಸ್ತಂಭದಲ್ಲೂ ಸರ್ಕಾರಕ್ಕೆ ಶೇ 40ರಷ್ಟು ಕಮಿಷನ್ ಬೇಕೇ’ ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್ ಪ್ರಶ್ನಿಸಿದರು.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಧ್ವಜಸ್ತಂಭ ನಿರ್ಮಾಣದ ಗುತ್ತಿಗೆಯನ್ನು ನಿರ್ದಿಷ್ಟ ಸಂಸ್ಥೆಗೆ ನೀಡುವ ಕುರಿತು ಹೊರಡಿಸಿರುವ ಸುತ್ತೋಲೆಯನ್ನು ತಕ್ಷಣವೇ ಹಿಂಪಡೆಯಬೇಕು’ ಎಂದರು.

### ತುಮಕೂರು ಜಿಲ್ಲೆಯಲ್ಲಿ ಎರಡನೇ ದಿನ ಯಾತ್ರೆಗೆ ಹರಿದುಬಂದ ಜನಸಾಗರ

# ಭಾರತ್ ಜೋಡೊ: ಹೆಚ್ಚಿದ ಉತ್ಸಾಹ

ಪ್ರಜಾವಾಣಿ ವಾರ್ತೆ

**ತುಮಕೂರು:** ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ 'ಭಾರತ್ ಜೋಡೊ' ಯಾತ್ರೆಗೆ ಜಿಲ್ಲೆಯಲ್ಲಿ ಎರಡನೇ ದಿನವಾದ ಭಾನುವಾರ ಜನ ಸಾಗರ ಹರಿದು ಬಂತು. ಪಕ್ಷದ ಕಾರ್ಯಕರ್ತರು, ಜನರ ಉತ್ಸಾಹ ಕಂಡ ರಾಹುಲ್ ಮತ್ತಷ್ಟು ಬಿರುಸಾಗಿ ಹೆಜ್ಜೆ ಹಾಕುವ ಮೂಲಕ ಹುರಿದುಂಬಿಸಿದರು.

ತುರುವೇಕೆರೆ ತಾಲ್ಲೂಕಿನ ಬಾಣಸಂದ್ರದಲ್ಲಿ ತಂಗಿದ್ದ ತಂಡ ತಿಪಟೂರು ತಾಲ್ಲೂಕಿನ ಕೆ.ಬಿ.ಕ್ರಾಸ್‌ಗೆ ಬೆಳಗ್ಗೆ 6.30 ಗಂಟೆಗೆ ಬರುತ್ತಿದ್ದಂತೆ ಪೂರ್ಣಕುಂಭ ಸ್ವಾಗತ ನೀಡಲಾಯಿತು. ಆ ವೇಳೆಗಾಗಲೇ ಸಾಕಷ್ಟು ಸಂಖ್ಯೆಯ ಜನರು ಸೇರಿದ್ದನ್ನು ಗಮನಿಸಿದ ರಾಹುಲ್ ಜೋರು ಹೆಜ್ಜೆ ಹಾಕಿದ್ದರು. ಕೆ.ಬಿ.ಕ್ರಾಸ್‌ನಲ್ಲಿ ಭಾಷಣಕ್ಕೆ ವೇದಿಕೆ ಸಿದ್ಧಪಡಿಸಿದ್ದರೂ ವೇದಿಕೆ ಏರದೆ ಪಾದಯಾತ್ರೆ ಮುಂದುವರಿಸಿದರು.

ಯಾತ್ರೆ ಸ್ವಲ್ಪ ದೂರ ಸಾಗುವ ವೇಳೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್, ಶಾಸಕ ಡಾ.ಜಿ.ಪರಮೇಶ್ವರ ಇತರ ನಾಯಕರು ಜೊತೆಗೂಡಿದರು.

ತಿಪಟೂರು ತಾಲ್ಲೂಕು ಗಡಿ ದಾಟಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಪ್ರವೇಶಿಸುತ್ತಿದ್ದಂತೆ ನಡಿಗೆ ಮತ್ತಷ್ಟು ವೇಗ ಪಡೆದುಕೊಂಡಿತು. ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸ್ವಗ್ರಾಮ ಜೆ.ಸಿ.ಪುರ ಪ್ರವೇಶಿಸುತ್ತಿದ್ದಂತೆ ಘೋಷಣೆಗಳು ಮೊಳಗಿದವು.

ಜೆ.ಸಿ.ಪುರದಲ್ಲಿ ಕೆಲ ಕಾಲ ವಿಶ್ರಾಂತಿ ಪಡೆದು ಸ್ವಲ್ಪ ದೂರ ಬರುತ್ತಿದ್ದಂತೆ 'ಥಿಯೇಟರ್ ಫೋರಂ' ಕಲಾವಿದರು ಪ್ರದರ್ಶಿಸಿದ ಕಿರು ನಾಟಕ ವೀಕ್ಷಿಸಿ, ಮೊಬೈಲ್‌ನಲ್ಲಿ ವಿಡಿಯೊ ಮಾಡಿಕೊಂಡರು. 'ಭಾರತ್ ಜೋಡೊ' ಯಾತ್ರೆ ಉದ್ದೇಶ, ಕೋಮು ದ್ವೇಷ, ಭ್ರಷ್ಟಾಚಾರ ಸೇರಿದಂತೆ ಪ್ರಸ್ತುತ ಸನ್ನಿವೇಶ ಪ್ರತಿಬಿಂಬಿಸುವ ನಾಟಕ ಅದಾಗಿತ್ತು.

ಮಾರ್ಗಮಧ್ಯೆ ತರಬೇನಹಳ್ಳಿ ತೆಂಗು ಬೆಳೆಗಾರ ಅಣೆಕಟ್ಟೆ ವಿಶ್ವನಾಥ್ ಜತೆಗೆ ಮಾತುಕತೆ ನಡೆಸಿದರು. ಹೆಗಲ ಮೇಲೆ ಕೈಹಾಕಿ ಸಾಕಷ್ಟು ದೂರ ನಡೆದು ಬಂದರು. ತೆಂಗು ಬೆಳೆಗಾರರ ಸಮಸ್ಯೆ, ಸೂಕ್ತ ಬೆಲೆ ಸಿಗದಿರುವುದು, ಮಾರುಕಟ್ಟೆ ವ್ಯವಸ್ಥೆ, ಕೆಲವರ ನಿಯಂತ್ರಣದಲ್ಲಿರುವ ಕೊಬ್ಬರಿ ಮಾರುಕಟ್ಟೆ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ತೆಂಗಿನ ಸಸಿ ಕೊಡಲಾಯಿತು. ಭಾರತ ಮಾತೆ ವೇಷ ಧರಿಸಿದ್ದ ಮಹಿಳೆ ಜತೆಗೂ ಹೆಜ್ಜೆ ಹಾಕಿದರು.

ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಅಜ್ಜಿಯೊಬ್ಬರು ರಾಹುಲ್ ಗಾಂಧಿ ಅವರಿಗೆ ಸೀರೆ ಸೆರಗಿನಿಂದ ನಿವಾಳಿಸಿ ಶುಭ ಹಾರೈಸಿದರು. ಯಾತ್ರೆ ಕೊನೆಗೊಂಡು ಕಾರಿನಲ್ಲಿ ತೆರಳುವ ಸಮಯದಲ್ಲಿ ಸಮೀಪಕ್ಕೆ ಓಡಿ ಬಂದ ಮಗುವೊಂದನ್ನು ಎತ್ತಿಕೊಂಡು ಫೋಟೊ ತೆಗೆಸಿಕೊಂಡರು. ಚಾಕೊಲೇಟ್ ನೀಡಿ ಮುಗುಳ್ನಗೆ ಬೀರಿದರು.

**ವಾಲ್ಮೀಕಿಗೆ ನಮನ:** ಚಿಕ್ಕನಾಯಕನಹಳ್ಳಿ ಪಟ್ಟಣದ ನೆಹರು ವೃತ್ತದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ ಭಾಗವಹಿಸಿದ್ದರು. ವೇದಿಕೆ ಏರಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.



ತಿಪಟೂರಿನ ಕೆ.ಬಿ.ಕ್ರಾಸ್‌ನಿಂದ ಚಿಕ್ಕನಾಯಕನಹಳ್ಳಿಗೆ ಬರುತ್ತಿದ್ದ 'ಭಾರತ್ ಜೋಡೊ' ಯಾತ್ರೆ ಸಮಯದಲ್ಲಿ ರಾಹುಲ್ ಗಾಂಧಿ ಅವರಿಗೆ ಭಾರತದ ಭೂಪಟ ಮಾದರಿಯನ್ನು ಅಭಿಮಾನಿಗಳು ಉಡುಗೊರೆ ನೀಡಿದರು —ಪಿಟಿಐ ಚಿತ್ರ

## ಕಾಂಗ್ರೆಸ್ ವಿರುದ್ಧ ಪೋಸ್ಟರ್

**ತುಮಕೂರು:** ಯಾತ್ರೆ ಸಾಗಿಬಂದ ಮಾರ್ಗ ಮಧ್ಯೆ ಚಿಕ್ಕನಾಯಕನಹಳ್ಳಿ ಪಟ್ಟಣದಲ್ಲಿ ಕಾಂಗ್ರೆಸ್ ವಿರುದ್ಧ ಪೋಸ್ಟರ್ ಅಂಟಿಸಿರುವುದು ಕಂಡು ಬಂತು.

ಚಿಕ್ಕನಾಯಕನಹಳ್ಳಿ ಪಟ್ಟಣದ ಪ್ರೌಢಶಾಲೆ ಸಮೀಪದ ಗೋಡೆ ಮೇಲೆ ರಾಜು ಎಂಬುವರ ಹೆಸರಿನಲ್ಲಿ ಈ ಪೋಸ್ಟರ್ ಅಂಟಿಸಲಾಗಿದೆ.

'ಸಿದ್ದರಾಮಯ್ಯನವರೇ, ನಾನು ರಾಜು. ಕಾಂಗ್ರೆಸ್‌ನಿಂದಲೇ ನನ್ನ ಕೊಲೆ ಆಗಿದ್ದು. ಪಿಎಫ್ಐ, ಎಸ್‌ಡಿಪಿಐ ಮೇಲಿನ ನಿಮ್ಮ ಪ್ರೀತಿಗೆ, ಅವರ ಮೇಲಿನ ಪ್ರಕರಣ ಕೈಬಿಟ್ಟಿದ್ದಕ್ಕೆ ನಾನು ಕೊಲೆಯಾದೆ. ಈ ಹೆಗ್ಗಳಿಕೆ ನಿಮಗೇ ಸಲ್ಲಲಿ' ಎಂದು ಪೋಸ್ಟರ್‌ನಲ್ಲಿ ಬರೆಯಲಾಗಿದೆ.

## ಚಿತ್ರದುರ್ಗ ಜಿಲ್ಲೆಗೆ ಇಂದು ಭಾರತ ಜೋಡೊ ಯಾತ್ರೆ

**ಚಿತ್ರದುರ್ಗ:** ಭಾರತ್ ಜೋಡೊ ಯಾತ್ರೆ ಸೋಮವಾರ ಜಿಲ್ಲೆ ಪ್ರವೇಶಿಸಲಿದೆ. ಯಾತ್ರೆಯಲ್ಲಿ ಪಾಲ್ಗೊಂಡವರನ್ನು ಸ್ವಾಗತಿಸಲು ಪಕ್ಷದ ಕಾರ್ಯಕರ್ತರು ಸಜ್ಜಾಗಿದ್ದಾರೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಂಚರಿಸುವ ಯಾತ್ರೆ ಸೋಮವಾರ ಸಂಜೆ 4ಕ್ಕೆ ಹಿರಿಯೂರು ಪ್ರವೇಶಿಸಲಿದೆ. ನಗರದ ವಿಜ್ಞಾನ ಕಾಲೇಜು ಮೈದಾನದಿಂದ ಆರಂಭವಾಗುವ ಪಾದಯಾತ್ರೆ ಬಾಳೇನಹಳ್ಳಿಯವರೆಗೆ ಸಾಗಲಿದೆ. ಚಳ್ಳಕೆರೆ, ಮೊಳಕಾಲ್ಮುರು ಮಾರ್ಗವಾಗಿ ಅ.14ರಂದು ಬಳ್ಳಾರಿ ಜಿಲ್ಲೆಗೆ ತೆರಳಲಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

## 'ಪಾದಯಾತ್ರೆಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ'

ಪ್ರಜಾವಾಣಿ ವಾರ್ತೆ

**ರಾಮನಗರ:** ಭಾರತ್ ಜೋಡೊ ಯಾತ್ರೆಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಯಾರು ಏನೇ ಬೊಬ್ಬೆ ಹೊಡೆದರೂ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 150ಕ್ಕೂ ಹೆಚ್ಚು ಸ್ಥಾನಗಳೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ತಾಲ್ಲೂಕಿನ ಹರಿಸಂದ್ರ ಗ್ರಾಮದಲ್ಲಿ ಭಾನುವಾರ ಮಾತನಾಡಿದ ಅವರು, 'ಮಂಗಳವಾರದಿಂದ ಬಿಜೆಪಿ ರಾಜ್ಯ ಪ್ರವಾಸ ಆರಂಭ ಆಗಲಿದೆ. ನಾನು ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 50 ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರವಾಸ ಮಾಡಲಿದ್ದೇವೆ' ಎಂದರು.

ಯಾತ್ರೆಗೆ ಹೆದರಿ ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಮೀಸಲು ಹೆಚ್ಚಳ ಮಾಡಲಾಗಿದೆ ಎಂಬ ರಾಹುಲ್ ಗಾಂಧಿ ಹೇಳಿಕೆಗೆ ಪ್ರತಿಕ್ರಿಯಿಸಿ 'ಆ ಮನುಷ್ಯನಿಗೆ ಒಂದು ಪ್ರಶ್ನೆ ಕೇಳಲು ಬಯಸುತ್ತೇನೆ. ಉತ್ತರ ಪ್ರದೇಶದಲ್ಲಿ ನಿನ್ನ ತಂಗಿಗೆ ಎರಡು ಸೀಟು ಗೆಲ್ಲಲು ಆಗಲಿಲ್ಲ. ಇಡೀ ದೇಶದಲ್ಲಿ ನಿಮ್ಮ ಅಡ್ರೆಸ್ ಇಲ್ಲ. ಕರ್ನಾಟಕ ಸೇರಿದಂತೆ ಎಲ್ಲೋ ಒಂದೆರಡು ಕಡೆ ಕಾಂಗ್ರೆಸ್ ಉಸಿರಾಡುತ್ತಿದೆ' ಎಂದರು.

2023ಕ್ಕೆ ಮತ್ತೆ ಕುಮಾರಸ್ವಾಮಿ ಸಿ.ಎಂ ಆಗಲಿದ್ದಾರೆ ಎಂಬ ದೇವೇಗೌಡರ ಹೇಳಿಕೆಗೆ ಪ್ರತಿಕ್ರಿಯಿಸಿ 'ಅವರು ಹಿರಿಯರಿದ್ದಾರೆ. ಅವರ ಹೇಳಿಕೆಗೆ ಪ್ರತಿಕ್ರಿಯಿಸಲ್ಲ. ಮಗನ ಮೇಲಿನ ಮಮತೆಯಿಂದ ಆ ಮಾತು ಹೇಳಿದ್ದಾರೆ. ಅದನ್ನು ಬೇಡ ಎನ್ನಲು ನಾವ್ಯಾರು?' ಎಂದರು.

## ‘ನಿರಂಜನ ಮಠ ಕಸಿದುಕೊಳ್ಳಲು ಬಿಡೆವು’

ಪ್ರಜಾವಾಣಿ ವಾರ್ತೆ

ಮೈಸೂರು: ನಗರದಲ್ಲಿರುವ ನಿರಂಜನ ಮಠವಿರುವ ಜಾಗವನ್ನು ‘ವಿವೇಕ ಸ್ಮಾರಕ’ ನಿರ್ಮಾಣಕ್ಕೆ ಬಿಟ್ಟು ಕೊಡುವುದಿಲ್ಲ. ಒಂದಿಂಚು ಜಾಗ ಪಡೆದರೂ ಸಮಸ್ತ ಲಿಂಗಾಯತ ಸಮಾಜದಿಂದ ತೀವ್ರ ಹೋರಾಟ ರೂಪಿಸಲಾಗುವುದು.

– ಇಲ್ಲಿ ಭಾನುವಾರ ನಡೆದ ‘ನಿರಂಜನ ಮಠ ಒಂದು ಅವಲೋಕನ’ ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು ಸರ್ಕಾರಕ್ಕೆ ನೀಡಿದ ಎಚ್ಚರಿಕೆ ಇದು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ ಮತ್ತು ನಿರಂಜನ ಮಠ ಸಂರಕ್ಷಣಾ ಸಮಿತಿಯಿಂದ ಕಾರ್ಯಕ್ರಮ ನಡೆಯಿತು.

ಹೊಸಮಠದ ಅಧ್ಯಕ್ಷ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಶಂಕರ ಬಿದರಿ, ಮಹಾಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಪಾಲ್ಗೊಂಡಿದ್ದರು.

ಪ್ರಜಾವಾಣಿ ದೀಪಾವಳಿ ಕಥೆ – ಕವನ ಸ್ಪರ್ಧೆ ಫಲಿತಾಂಶ ಪ್ರಕಟ

# ಇಂದ್ರಕುಮಾರ್‌ಗೆ ಕಥಾ, ಮಂಜುಳಾಗೆ ಕವನ ಪ್ರಶಸ್ತಿ



ಇಂದ್ರಕುಮಾರ್ ಎಚ್‌.ಬಿ.



ಮಂಜುಳಾ ಹಿರೇಮಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022ನೇ ಸಾಲಿನ ಪ್ರತಿಷ್ಠಿತ ‘ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆ’ ಮತ್ತು ‘ಪ್ರಜಾವಾಣಿ ದೀಪಾವಳಿ ಕವನ ಸ್ಪರ್ಧೆ’ಗಳ ಫಲಿತಾಂಶ ಪ್ರಕಟವಾಗಿದೆ. ಇಂದ್ರಕುಮಾರ್ ಎಚ್‌.ಬಿ. ಅವರ ‘ನೀಲಿ ಹಣೆಯ ಗಂಪತಿಗೇಕೆ ಸಿಂಪಥಿ?’ ಕಥಾ ಸ್ಪರ್ಧೆಯಲ್ಲಿ ಹಾಗೂ ಮಂಜುಳಾ ಹಿರೇಮಠ ಅವರ ‘ನಾನು ಮರಳಿ ಹೋಗುವೆ’ ಕವನ ಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ಪಡೆದುಕೊಂಡಿವೆ.

ಕಥಾಸ್ಪರ್ಧೆಯಲ್ಲಿ ಬಿ.ಎಂ.ಭಾರತಿ ಹಾದಿಗೆ ಅವರ ‘ಉಣ್ಣರ ಪುಣ್ಯ ಅಂಬಲಿ ಮಡಿಕಿಲಿ’ ಹಾಗೂ ಕಾವ್ಯಾ ಕಡಮೆ ಅವರ ‘ರಾಷ್ಟ್ರಗೀತೆ’ ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನಕ್ಕೆ ಭಾಜನವಾಗಿವೆ. ಜಯರಾಮಾಚಾರಿ ಅವರ ‘ಭವದ ಕೇಡು’, ಶ್ವೇತಾ ಹೊಸಬಾಳೆ ಅವರ ‘ವಿಧ್ಯುಕ್ತ’ ಕಥೆಗಳು ತೀರ್ಪುಗಾರರ ಮೆಚ್ಚುಗೆ ಪಡೆದಿವೆ.

ಕವನ ಸ್ಪರ್ಧೆಯಲ್ಲಿ ಪ್ರಕಾಶ ಮರಗಾಲ ಅವರ ‘ನನಗವರ ಅಂಜಿಕೆಯಿಲ್ಲ’ ಮತ್ತು ರತ್ನಾಕರ ಸಿ.ಕುನುಗೋಡು ಅವರ ‘ಅನಾದಿ ಬೇರು ಆದಿಮ ಕರುಳು’ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ. ಚೀಮನಹಳ್ಳಿ ರಮೇಶಬಾಬು ಅವರ ‘ಬೆತ್ತ’, ಎಂ.ಎಸ್.ಶೇಖರ್ ಅವರ ‘ಜೋಡೆಲೆ ಜೊನ್ನೆ’ ಮತ್ತು ಶಿವ ವಿಷ್ಣುವಲ್ಲಭ ಅವರ ‘ಶಿವಜಂಗಮನ ಘೋರ ಹಸಿವು’ ಕವಿತೆಗಳು ತೀರ್ಪುಗಾರರ ಮೆಚ್ಚುಗೆ ಗಳಿಸಿವೆ. ವಿಮರ್ಶಕ ಎಚ್‌.ಎಸ್.ರಾಘವೇಂದ್ರ ರಾವ್ ಹಾಗೂ ಕಥೆಗಾರ್ತಿ ವಿನಯಾ ಒಕ್ಕುಂದ ಅವರು ಕಥಾಸ್ಪರ್ಧೆಯ ತೀರ್ಪುಗಾರರಾಗಿದ್ದರು. ಕವಿ ಬಿ.ಆರ್. ಲಕ್ಷ್ಮಣರಾವ್ ಹಾಗೂ ಕವಯಿತ್ರಿ ಪ್ರತಿಭಾ ನಂದಕುಮಾರ್ ಅವರು ಕವನ ಸ್ಪರ್ಧೆಯ ತೀರ್ಪುಗಾರರಾಗಿದ್ದರು.



ಬಿ.ಎಂ. ಭಾರತಿ ಹಾದಿಗೆ



ಕಾವ್ಯಾ ಕಡಮೆ



ಪ್ರಕಾಶ ಮರಗಾಲ




ರತ್ನಾಕರ ಸಿ.ಕುನುಗೋಡು

### ಬಹುಮಾನದ ವಿವರ

ಕಥಾ ಸ್ಪರ್ಧೆಯಲ್ಲಿ ಮೊದಲ ಮೂರು ಸ್ಥಾನ ಪಡೆದ ಕಥೆಗಳಿಗೆ ಕ್ರಮವಾಗಿ ಪ್ರಥಮ ₹20 ಸಾವಿರ, ದ್ವಿತೀಯ ₹15 ಸಾವಿರ ಹಾಗೂ ತೃತೀಯ ₹10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಲಭಿಸಲಿದೆ. ಕವನ ಸ್ಪರ್ಧೆ ಮೊದಲ ಮೂರು ಸ್ಥಾನ ಪಡೆದ ಕವನಗಳಿಗೆ ಕ್ರಮವಾಗಿ ಪ್ರಥಮ ₹5,000, ದ್ವಿತೀಯ ₹3,000 ಹಾಗೂ ತೃತೀಯ ₹2,500 ನಗದು ಹಾಗೂ ಪ್ರಶಸ್ತಿ ಪತ್ರ ದೊರೆಯಲಿದೆ.


### ತೀರ್ಪುಗಾರರ ಟಿಪ್ಪಣಿ





**ಕಥೆಗಳು** ಕರ್ನಾಟಕದ ವಿಭಿನ್ನ ಭಾಗಗಳಿಂದ ಬಂದಿದ್ದವು. ಶ್ರೀಮಂತರಿಂದ ಮೊದಲಾಗಿ ಕಡುಬಡವರವರೆಗೆ ಎಲ್ಲರ ಸನ್ನಿಧಿಯೂ ಇಲ್ಲಿದ್ದವು. ವೈಯಕ್ತಿಕ, ಕೌಟುಂಬಿಕ ಹಾಗೂ ಸಾಮಾಜಿಕಗಳು ಹಾಸುಹೊಕ್ಕಾಗಿದ್ದವು. ಅತಿಯೆನಿಸಿದ ಆರ್ದ್ರತೆಯು ಎಲ್ಲ ಕಥೆಗಳಲ್ಲೂ ಇದ್ದವು. ಕನ್ನಡದ ನಾಳೆಗಳಾದ ಈ ಕಥೆಗಾರ್ತಿ-ಕಥೆಗಾರರು ವಿನಯ ಮತ್ತು ಆತ್ಮವಿಶ್ವಾಸಗಳನ್ನು ಕಾಪಾಡಿಕೊಂಡು, ಲೋಕದ ತಲ್ಲಣಗಳನ್ನು ಹೀರಿಕೊಂಡು, ವೈಚಾರಿಕ ಒತ್ತಡಗಳಿಗೆ ಮರುಳಾಗದೆ ತಮ್ಮದೇ ವೈಚಾರಿಕ ಅನನ್ಯತೆಯನ್ನು ರೂಪಿಸಿಕೊಳ್ಳಲೆಂಬ ಹಂಬಲ ನಮ್ಮದು

**ಎಚ್‌.ಎಸ್.ರಾಘವೇಂದ್ರ ರಾವ್ ಹಾಗೂ ವಿನಯಾ ಒಕ್ಕುಂದ**



**ನನ್ನ ಮಟ್ಟಿಗೆ,** ಕಾವ್ಯವೆಂದರೆ ಅದೊಂದು ಕಲಾಮಾಧ್ಯಮ. ಅದೊಂದು ವಿಶೇಷ ಅನುಭವ, ವಿಶಿಷ್ಟ ಅನುಭೂತಿ. ಅದಕ್ಕೆ ಆಶಯದಷ್ಟೇ ಆಕೃತಿಯೂ ಮುಖ್ಯ. ಪ್ರತಿಭೆಯಷ್ಟೇ ಪರಿಶ್ರಮವೂ ಮುಖ್ಯ. ರೂಪಕ ನಿರ್ಮಾಣ ಅದರ ಅನನ್ಯತೆ. ಈ ನಿರೀಕ್ಷೆ ಇಟ್ಟುಕೊಂಡು ಸ್ಪರ್ಧೆಗೆ ಬಂದ ಕಾವ್ಯಗಳನ್ನು ನೋಡಿದಾಗ ನನ್ನಲ್ಲಿ ಅಂತಹ ಉತ್ಸಾಹವೇನೂ ಮೂಡಲಿಲ್ಲ. ಆದರೂ ಕೆಲವು ಪರವಾಗಿಲ್ಲ ಅನ್ನಿಸಿದವು

**ಬಿ.ಆರ್.ಲಕ್ಷ್ಮಣರಾವ್**



**ಹೊಸಬರ** ಕಾವ್ಯವನ್ನು ಆಸಕ್ತಿಯಿಂದ ಹುಡುಕಿ ಓದುವುದು ಹೊಸತನದ ಚಮತ್ಕಾರ ಕಾಣಿಸುತ್ತದೆಯೇ ಅನ್ನುವ ಕುತೂಹಲದಲ್ಲಿ. ಹೊಸ ಪೀಳಿಗೆಯ ಆಸಕ್ತಿಗಳೇನು, ಅವರನ್ನು ಕಾಡುವ ಸಂಗತಿಗಳು ಯಾವುವು ಎನ್ನುವುದು ನನ್ನ ಕೌತುಕ. ವೃತ್ತಿಗಾಗಿ ಏನೇನೋ ಕಲಿತು ಪ್ರವೃತ್ತಿಗಾಗಿ ಕನ್ನಡದಲ್ಲಿ ಕವನ ಬರೆಯುವ ಅವರ ಹುಮ್ಮಸ್ಸಿಗೇ ಒಂದು ಸಲಾಮು

**ಪ್ರತಿಭಾ ನಂದಕುಮಾರ್**

ಸುದ್ದಿ 2 ನಿಮಿಷ

## ಬಿಜೆಪಿ ಹೊಸ ಈಸ್ಟ್ ಇಂಡಿಯಾ ಕಂಪನಿ: ಸುರ್ಜೇವಾಲಾ

ದಾವಣಗೆರೆ: ಬ್ರಿಟಿಷರು ಆರಂಭಿಸಿದ್ದ ಈಸ್ಟ್ ಇಂಡಿಯಾ ಕಂಪನಿಯು ದೇಶವನ್ನು ಕೊಳ್ಳೆ ಹೊಡೆಯಲು ಒಡೆದು ಆಳುವ ನೀತಿ ಅನುಸರಿಸಿತ್ತು. ಬಿಜೆಪಿಯೂ ಹೊಸ ಈಸ್ಟ್ ಇಂಡಿಯಾ ಕಂಪನಿಯಂತಾಗಿ ಬ್ರಿಟಿಷರ ಕೆಲಸವನ್ನು ಮುಂದುವರಿಸಿದೆ ಎಂದು ಕಾಂಗ್ರೆಸ್‌ನ ರಾಷ್ಟ್ರೀಯ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದರು.

ದ್ವೇಷ ಹರಡುವುದು, ಒಡೆದು ಆಳುವುದೇ ಬಿಜೆಪಿಯ ನೀತಿಯಾಗಿದೆ. ಮುಸ್ಲಿಮರು ಇರುವಲ್ಲಿ ಹಿಂದೂ– ಮುಸ್ಲಿಂ ಎಂದು ಒಡೆಯಲಾಗುತ್ತಿದೆ. ಮುಸ್ಲಿಮರು ಇಲ್ಲದಲ್ಲಿ ಜಾತಿಗಳ ನಡುವೆ ಒಡಕು ಸೃಷ್ಟಿಸಲಾಗುತ್ತಿದೆ. ಬಡವರ ದುಡ್ಡನ್ನು ದೋಚಿ ಶ್ರೀಮಂತರಿಗೆ ಹಂಚುವುದೇ ಬಿಜೆಪಿಯ ಹೊಸ ಆರ್ಥಿಕ ನೀತಿ ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಯಾತ್ರೆ ಕರ್ನಾಟಕಕ್ಕೆ ಕಾಲಿಟ್ಟು ಏಳು ದಿನಗಳಾಗಿವೆ. ಈ ಅವಧಿಯಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಅವರಿಗೆ ಮೂರು ಬಾರಿ ನೋಟಿಸ್ ನೀಡಿದೆ. ಯಾತ್ರೆಗೆ ಬಿಜೆಪಿ ಹೆದರಿರುವುದಕ್ಕೆ ಇದೇ ಸಾಕ್ಷಿ ಎಂದು ಆರೋಪಿಸಿದರು.

ಭಾರತ್ ಜೋಡೊ ಯಾತ್ರೆ ಪೂರ್ಣಗೊಂಡ ಬಳಿಕ ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಕ್ಷದಿಂದ ಯಾತ್ರೆ ಮಾಡಿ ಜನರನ್ನು ಒಗ್ಗೂಡಿಸುವ, ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಲಾಗುವುದು ಎಂದರು.

## ‘ತೆಲುಗು ವಿ.ವಿಗೆ ಕನ್ನಡ ಕವಿ ಸೋಮನಾಥನ ಹೆಸರು’



**ದಕ್ಷಿಣದ ರಾಜ್ಯಗಳ ಮೇಲೆ ಹಿಂದಿ ಹೇರುವ ಕ್ರಮ ನ್ಯಾಯಸಮ್ಮತವಲ್ಲ. ಇಂಥ ಪ್ರಯತ್ನಗಳನ್ನು ಮಾಡಬಾರದು. ದಕ್ಷಿಣದ ಭಾಷೆಗಳಿಗೆ ಅವುಗಳದ್ದೇ ಆದ ವೈಶಿಷ್ಟ್ಯವಿದೆ**

**ಪ್ರೊ.ತಂಗೇಡ ಕಿಶನ್‌ರಾವ್,** ಕುಲಪತಿ, ಹೈದರಾಬಾದ್‌ನ ತೆಲುಗು ವಿ.ವಿ

ಬಳ್ಳಾರಿ: ಹೈದರಾಬಾದ್‌ನ ತೆಲುಗು ವಿಶ್ವವಿದ್ಯಾಲಯಕ್ಕೆ ತೆಲುಗು ಮತ್ತು ಕನ್ನಡ ಭಾಷೆಗಳ ಮಹಾಕವಿ ಪಾಲಕುರ್ತಿ ಸೋಮನಾಥರ ಹೆಸರನ್ನು ನಾಮಕರಣ ಮಾಡಲು ಕುಲಪತಿ ಪ್ರೊ.ತಂಗೇಡ ಕಿಶನ್‌ರಾವ್ ಉದ್ದೇಶಿಸಿದ್ದಾರೆ.

ಇಲ್ಲಿನ ರಾಘವ ಕಲಾ ಮಂದಿರದಲ್ಲಿ ನಡೆಯುತ್ತಿರುವ ತೆಲುಗು ಸಮ್ಮೈಕ್ಯ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಲು ಬಂದಿದ್ದ ತೆಲುಗು ವಿವಿ ಕುಲಪತಿ ಕಿಶನ್‌ರಾವ್ ಪತ್ರಕರ್ತರ ಜತೆ ಮಾತನಾಡಿದರು. ತೆಲುಗು ವಿಶ್ವವಿದ್ಯಾಲಯ ವಿಭಜನೆಯಾಗುತ್ತಿದೆ. ಆಂಧ್ರದಲ್ಲಿ ಪ್ರತ್ಯೇಕ ತೆಲುಗು ವಿವಿ ಸ್ಥಾಪನೆಯಾಗುತ್ತಿದೆ. ಈಗಿರುವ ಪೊಟ್ಟಿ ಶ್ರೀರಾಮುಲು ಹೆಸರು ಆಂಧ್ರಕ್ಕೆ ಹೋಗಲಿದೆ. ಹೀಗಾಗಿ, 12–13ನೇ ಶತಮಾನದ ತ್ರಿಭಾಷಾ ಮಹಾಕವಿ ಪಾಲಕುರ್ತಿ ಸೋಮನಾಥರ ಹೆಸರಿಡಲು ಉದ್ದೇಶಿಸಲಾಗಿದೆ. ಈತ ಕನ್ನಡ, ತೆಲುಗು ಜತೆ ಸಂಸ್ಕೃತದಲ್ಲೂ ಬರೆದಿದ್ದಾರೆ ಎಂದು ಅವರು ವಿವರಿಸಿದರು.

ವಿ.ವಿಯ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಪಾಲಕುರ್ತಿ ಸೋಮನಾಥರ ಹೆಸರು ನಾಮಕರಣ ಪ್ರಸ್ತಾವ ಮಂಡಿಸಿ, ಒಪ್ಪಿಗೆ ಪಡೆದು ಸರ್ಕಾರಕ್ಕೆ ಕಳುಹಿಸುವುದಾಗಿ ಕಿಶನ್ ರಾವ್ ಹೇಳಿದರು.





ಈದ್ ಮಿಲಾದ್ ಹಬ್ಬದ ಅಂಗವಾಗಿ ಮುಸ್ಲಿಂ ಸಮಾಜದವರು ಭಾನುವಾರ ಕಲಬುರಗಿ ನಗರದಲ್ಲಿ ಮೆರವಣಿಗೆ ನಡೆಸಿದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್ (ಎಡಚಿತ್ರ) ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಯ ಮಹಾರಥೋತ್ಸವವು ಭಾನುವಾರ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.



ಸಮಾನ ಅವಕಾಶ ಕಲ್ಪಿಸುವುದೇ ರಾಮರಾಜ್ಯ: ವಾಲ್ಮೀಕಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯಮಂತ್ರಿ ಭರವಸೆ

# ‘ಆದೇಶಗಳೆಲ್ಲವೂ ಸಾಮಾಜಿಕ ನ್ಯಾಯ ಪರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಂದಿನ ದಿನಗಳಲ್ಲಿ ವಿಧಾನಸೌಧದಿಂದ ಹೊರಡುವ ಪ್ರತಿಯೊಂದು ಆಜ್ಞೆಯೂ ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳ ಪರವಾಗಿಯೇ ಇರಲಿವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿದ ಅವರು, ‘ವಾಲ್ಮೀಕಿ ಸಮುದಾಯದ ನೀವೆಲ್ಲರೂ ನನ್ನ ಅಣ್ಣ–ತಮ್ಮಂದಿರು. ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಿಂತು ಈ ಮಾತು ಹೇಳುತ್ತಿದ್ದೇನೆ. ದೇವರು ನನಗೆ ಕೊಟ್ಟಿರುವ ಶಕ್ತಿಯನ್ನು ಸಂಪೂರ್ಣವಾಗಿ ಬಳಸಿ ಶೋಷಿತರ ಪರವಾಗಿಯೇ ಆದೇಶಗಳನ್ನು ಹೊರಡಿಸುತ್ತೇನೆ’ ಎಂದು ಭರವಸೆ ನೀಡಿದರು.

‘ಈವರೆಗಿನ ಸರ್ಕಾರಗಳು ನಿಮ್ಮನ್ನು ಭ್ರಮೆಯಲ್ಲಿ ಇರಿಸಿದ್ದವು. ಬಾಯಿ ಮಾತಿನಿಂದ ಸಾಮಾಜಿಕ ನ್ಯಾಯ ಸಿಗದು. ಸಾಮಾಜಿಕ ನ್ಯಾಯದ ಪರವಾದ ಕೆಲಸಗಳನ್ನು ಮಾಡಿ ತೋರಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಮಾಜಿಕ ಕ್ರಾಂತಿ ಮಾಡಬೇಕಿದ್ದು, ಅದಕ್ಕೆ ನಿಮ್ಮ ಆಶೀರ್ವಾದ ಬೇಕಿದೆ’ ಎಂದರು.

‘ನಿಮ್ಮ ಪ್ರೀತಿ-ವಿಶ್ವಾಸಕ್ಕೆ ಸೋತು ಮೀಸಲಾತಿ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಹೆಜ್ಜೆ ಮುಂದಿಟ್ಟಿದ್ದೇವೆ. ನ್ಯಾಯಾಲಯಗಳೂ ದಮನಿತರ ಪರವಾಗಿಯೇ ಇರಲಿವೆ ಎಂಬ ವಿಶ್ವಾಸ ಇದೆ. ಸಮಾನ ಅವಕಾಶಗಳನ್ನು ಕಲ್ಪಿಸುವುದೇ ರಾಮರಾಜ್ಯ ಎಂದು ನಂಬಿದ್ದೇನೆ. ಎಂತಹ ಸಂದರ್ಭ ಬಂದರೂ ಸಾಮಾಜಿಕ ನ್ಯಾಯದ ಪರವಾಗಿಯೇ ನಿಲ್ಲುತ್ತೇನೆ’ ಎಂದು ಹೇಳಿದರು.

‘ಬಸವಣ್ಣನ ಅನುಭವ ಮಂಟಪದಲ್ಲಿ ಮಾದಿಗರ ಚನ್ನಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ ಸೇರಿ ಎಲ್ಲ ಸಮುದಾಯದವರೂ ಇದ್ದರು. ಸಮಾಜಕ್ಕೆ ಜ್ಞಾನಭಂಡಾರ ಕೊಟ್ಟರು. ಅದೇ ರೀತಿ ನನ್ನ ಸಚಿವ ಸಂಪುಟದಲ್ಲೂ ಗೋವಿಂದ ಕಾರಜೋಳ, ಶ್ರೀರಾಮುಲು ಸೇರಿ ಎಲ್ಲಾ ಸಮುದಾಯದವರಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಎಲ್ಲರೂ ಚಿಂತಿಸುತ್ತಿದ್ದಾರೆ’ ಎಂದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಶ್ರೀರಾಮುಲು ಮಾತನಾಡಿ, ‘ಈ ಬಾರಿಯ ವಾಲ್ಮೀಕಿ ಜಯಂತಿಯನ್ನು ಬಂಗಾರದ ಅಕ್ಷರಗಳಲ್ಲಿ ಬರೆದಿಡಬೇಕು. ಮೀಸಲಾತಿ ಪ್ರಮಾಣ ಹೆಚ್ಚಿಸುವ ನಿರ್ಣಯ ಕೈಗೊಂಡ ಸಂದರ್ಭದಲ್ಲಿ ವಾಲ್ಮೀಕಿ ಜಯಂತಿಯ ಸಂಭ್ರಮವನ್ನು ಬಸವರಾಜ ಬೊಮ್ಮಾಯಿ ಅವರು ಹೆಚ್ಚಿಸಿದ್ದಾರೆ. ಅವರಿಗೆ ಈ ಸಮುದಾಯ ಋಣಿಯಾಗಿರಲಿದೆ’ ಎಂದು ಅವರು ಹೇಳಿದರು.



ಎಲ್‌.ಮುನಿಸ್ವಾಮಿ, ಎನ್‌.ನಾಗಪ್ಪ, ಉಷಾರಾಣಿ, ಎಚ್‌.ನಾಗಪ್ಪ, ಪಿ.ಪದ್ಮ ಮತ್ತು ಎಸ್‌.ಎಚ್‌.ಸುಭಾಷ್ ಅವರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸಚಿವ ಗೋವಿಂದ ಕಾರಜೋಳ, ಮಾದಾರ ಚನ್ನಯ್ಯ ಸ್ವಾಮೀಜಿ, ವಚನಾನಂದಸ್ವಾಮೀಜಿ, ಪ್ರಸನ್ನಾನಂದಪುರಿ ಸ್ವಾಮೀಜಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭೋವಿಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಕುಂಚಿಟಿಗ ಮಠದ ಶಾಂತವೀರ ಸ್ವಾಮೀಜಿ, ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷ ಕಡ್ಲಬಾಳ ಪನ್ನಂಗಧರ, ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಸಚಿವ ಶ್ರೀರಾಮುಲು, ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

### ಮೂಗಿಗೆ ತುಪ್ಪ ಸವರಿದ್ದರು

ಶೋಷಿತ ಸಮುದಾಯಗಳಿಂದ ಲಾಭ ಪಡೆದಿದ್ದ ಬಹುತೇಕ ಎಲ್ಲರೂ ನಮ್ಮ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದ್ದರು. ಬಸವರಾಜ ಬೊಮ್ಮಾಯಿ ಅವರು ಮೀಸಲಾತಿ ಪ್ರಮಾಣ ಹೆಚ್ಚಿಸುವ ಮೂಲಕ ಸಾಮಾಜಿಕ ನ್ಯಾಯದ ಬಗ್ಗೆ ತಮ್ಮ ಬದ್ಧತೆ ಪ್ರದರ್ಶಿಸಿದ್ದಾರೆ

**ಪ್ರಸನ್ನಾನಂದಪುರಿ ಸ್ವಾಮೀಜಿ,** ವಾಲ್ಮೀಕಿ ಗುರುಪೀಠ

### ಗುಲಾಮರಾಗಿ ಇರುತ್ತೇವೆ: ರಾಜುಗೌಡ ದೀರ್ಘದಂಡ ನಮಸ್ಕಾರ

‘ಮೀಸಲಾತಿ ಪ್ರಮಾಣ ಹೆಚ್ಚಿಸುವ ನಿರ್ಣಯ ಕೈಗೊಂಡ ಮುಖ್ಯಮಂತ್ರಿ ಮತ್ತು ರಾಜ್ಯ ಸರ್ಕಾರಕ್ಕೆ ಜೀವ ಇರುವ ತನಕ ಗುಲಾಮರಾಗಿ ಇರುತ್ತೇವೆ’ ಎಂದು ಹೇಳಿದ ಸುರಪುರ ಶಾಸಕ ರಾಜುಗೌಡ ವೇದಿಕೆಯಲ್ಲಿದ್ದವರಿಗೆ ದೀರ್ಘದಂಡ ನಮಸ್ಕಾರ ಮಾಡಿದರು.

‘ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಸ್ವಾಮೀಜಿ ಅವರು ಕಾಲ್ನಡಿಗೆ ಜಾಥಾ ನಡೆಸದಿದ್ದರೆ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನದಾಸ್ ಸಮಿತಿ ರಚನೆ ಆಗುತ್ತಿರಲಿಲ್ಲ. ಬಿ.ಎಸ್.ಯಡಿಯೂರಪ್ಪ ಸಿ.ಎಂ ಆಗದಿದ್ದರೆ ಸಮಿತಿ ಮುಂದುವರಿಯುತ್ತಿರಲಿಲ್ಲ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗದಿದ್ದರೆ ಮೀಸಲಾತಿ ಹೆಚ್ಚಳದ ನಿರ್ಣಯ ಆಗುತ್ತಿರಲಿಲ್ಲ’ ಎಂದರು.

‘ಪ್ರಸನ್ನಾನಂದಸ್ವಾಮೀಜಿ ಅವರು ವಾಲ್ಮೀಕಿಯಾದರೆ, ಬಸವರಾಜ ಬೊಮ್ಮಾಯಿ ಅವರು ಶ್ರೀರಾಮನಂತೆ ನಮ್ಮ ನೆರವಿಗೆ ಬಂದಿದ್ದಾರೆ. ಇವರ ಋಣ ತೀರಿಸಲು ಸಾಧ್ಯವೇ ಇಲ್ಲ’ ಎಂದು ಕೊಂಡಾಡಿದರು.

ಬಳಿಕ ಮಾತನಾಡಿದ ಬೊಮ್ಮಾಯಿ, ‘ರಾಜುಗೌಡರು ಗುಲಾಮರಾಗಿರುತ್ತೇವೆ ಎಂದು ಮಾತನಾಡಿದ್ದು ಸರಿಯಲ್ಲ. ದೇವರ ಹೊರತಾಗಿ ಯಾವುದೇ ಮನುಷ್ಯನಿಗೂ ಮತ್ತೊಬ್ಬ ಮನುಷ್ಯ ಗುಲಾಮನಾಗುವುದು ಸರಿಯಲ್ಲ. ಮುಂದೆಂದೂ ಈ ಪದ ಪ್ರಯೋಗ ಮಾಡಬಾರದು. ಪ್ರತಿಯೊಬ್ಬರು ಸ್ವಾಭಿಮಾನದಿಂದ ಬದುಕಬೇಕು. ನನ್ನನ್ನು ಶ್ರೀರಾಮಚಂದ್ರನಿಗೆ ಹೋಲಿಸಬೇಡಿ. ಶ್ರೀರಾಮಚಂದ್ರರ ಪಾದದ ದೂಳಿಗೆ ನಾನು ಸಮನಲ್ಲ’ ಎಂದರು. ಮೀಸಲಾತಿ ಪ್ರಮಾಣ ಹೆಚ್ಚಿಸುವ ಸರ್ಕಾರ ನಿರ್ಣಯ ಕೈಗೊಂಡಿರುವುದರಿಂದ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಸಂಭ್ರಮಾಚರಣೆ ಸಮಾರಂಭವಾಗಿ ಮಾರ್ಪಟ್ಟಿತ್ತು.

## ಚರ್ಮ ಗಂಟು ರೋಗ: ಪರಿಹಾರ ಹೆಚ್ಚಳಕ್ಕೆ ಎಚ್‌ಡಿಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚರ್ಮಗಂಟು ರೋಗದಿಂದ ಜಾನುವಾರು ಮೃತಪಟ್ಟಲ್ಲಿ ರೈತರಿಗೆ ನೀಡುವ ಪರಿಹಾರವನ್ನು ತಲಾ ₹ 50,000ಕ್ಕೆ ಹೆಚ್ಚಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಭಾನುವಾರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ‘ಈ ರೋಗದಿಂದ ಜಾನುವಾರು ಮೃತಪಟ್ಟರೆ, ಮಾಲೀಕರಿಗೆ ತಲಾ ₹ 20,000 ಪರಿಹಾರ ನೀಡುವುದಾಗಿ ಸರ್ಕಾರ ಹೇಳಿದೆ. ಅದು ಇನ್ನೂ ಘೋಷಣೆಯ ಹಂತದಲ್ಲೇ ಇದೆ’ ಎಂದು ಹೇಳಿದರು.

ಈಗ ಘೋಷಿಸಿರುವ ಪರಿಹಾರದಿಂದ ರೈತರ ಸಂಕಷ್ಟ ಪರಿಹಾರ ಆಗದು. ಜಾನುವಾರುಗಳ ಸಾವಿನ ಸಂಖ್ಯೆ ಹೆಚ್ಚುತ್ತಿದ್ದು, ಮರಣೋತ್ತರ ಪರೀಕ್ಷೆಗೂ ವೈದ್ಯರು ಸಿಗುತ್ತಿಲ್ಲ. ಲಸಿಕೆ ಪೂರೈಸಲು ಮತ್ತು ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಬೇಕು ಎಂದರು.

# ಕೋಲಾರದಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲೆಯ ನಗರ ಹಾಗೂ ಗ್ರಾಮಾಂತರ ಪ್ರದೇಶದ ವಿವಿಧೆಡೆ ಭಾನುವಾರ ದಿನವಿಡೀ ಧಾರಾಕಾರ ಮಳೆಯಾಗಿದೆ.

‘ಮುಳಬಾಗಿಲು ತಾಲ್ಲೂಕಿನ ಹನುಮನಹಳ್ಳಿಯಲ್ಲಿ 10 ಸೆ.ಮೀ ಮಳೆಯಾಗಿದೆ. ಇದು ಜಿಲ್ಲೆಯಲ್ಲಿ ಅತ್ಯಧಿಕ ಮಳೆಯಾಗಿರುವ ಪ್ರದೇಶ’ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಜಿಲ್ಲೆಯಲ್ಲಿ ಮೂರು ದಿನಗಳಿಂದ ಮಳೆ ಬಿಟ್ಟು ಬಿಟ್ಟು ಸುರಿಯುತ್ತಿದೆ. ಈ ವರ್ಷ ದಾಖಲೆಯ ಮಳೆಯಾಗಿದ್ದು, ಎಲ್ಲಾ ಕೆರೆಗಳು ತುಂಬಿವೆ.

ಕಲಬುರಗಿ ವರದಿ: ನಗರ ಸೇರಿದಂತೆ ಜಿಲ್ಲೆಯ ಸೇಡಂ, ಅಫಜಲಪುರ ಹಾಗೂ ಚಿತ್ತಾಪುರ ತಾಲ್ಲೂಕುಗಳಲ್ಲಿ ಕೆಲ ಹೊತ್ತು ಬಿರುಸಿನ ಮಳೆಯಾಗಿದ್ದು, ಹೊಲಗಳಲ್ಲಿ ನೀರು ನಿಂತಿದೆ. ಸೇಡಂ ತಾಲ್ಲೂಕಿನ ರಂಜೋಳ, ಕಾಚವಾರ, ಬಟಗೇರಾ, ಮಾದ್ವಾರ, ಇಮಡಾಪೂರ, ಮದರಿ ನಾಗಸನಪಲ್ಲಿ, ಮುಧೋಳ, ಮದನಾ, ಸಿಂಧನಮಡು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.



### ಇಂದು, ನಾಳೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವೆಡೆ ಸೋಮವಾರ ಮತ್ತು ಮಂಗಳವಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

15 ಜಿಲ್ಲೆಗಳಿಗೆ ಸೋಮವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್‌ಎಸ್* | 124.80 | 123.62 | 3,902 | 4,915 |
| ಹಾರಂಗಿ | 2,859 | 2,853.38 | 883 | 1,800 |
| ಕಬಿನಿ | 2284 | 2,281.94 | 874 | 800 |
| ಹೇಮಾವತಿ | 2,922 | 2921.25 | 2,023 | 3,082 |
| ಲಿಂಗನಮಕ್ಕಿ | 1,819 | 1,814 | 2,841 | 3,596 |
| ಸೂಪಾ (ಮೀ) | 564 | 553.62 | 1,186 | 2,449 |
| ಮಾಣಿ | 595 | 589 | 258 | 306 |
| ತುಂಗಭದ್ರಾ | 1,633 | 1633 | 16,830 | 17,345 |
| ಮಲಪ್ರಭಾ | 2079.5 | 2,079.50 | 1,794 | 1,794 |
| ಘಟಪ್ರಭಾ | 2175 | 2,174.51 | 1,210 | 1,703 |
| ಭದ್ರಾ | 186 | 185 | 2,591 | 2,291 |
| ಆಲಮಟ್ಟಿ (ಮೀ) | 519.6 | 519.60 | 35,451 | 35,451 |
| ನಾರಾಯಣಪುರ (ಮೀ) | 492.25 | 492.12 | 50,000 | 52,100 |

* ನೆಲಮಟ್ಟದಿಂದ

# ಲೋಕಾಯುಕ್ತಕ್ಕೆ ಬಲ ತುಂಬಲು ಸಿದ್ಧತೆ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಲೋಕಾಯುಕ್ತದ ಖಾಲಿ ಹುದ್ದೆಗಳ ಭರ್ತಿ ಜತೆಯಲ್ಲೇ ಸಂಸ್ಥೆಗೆ ಹೆಚ್ಚಿನ ಬಲ ತುಂಬಲು ಹೊಸ ಹುದ್ದೆಗಳನ್ನು ಸೃಜಿಸಲು ರಾಜ್ಯ ಸರ್ಕಾರ ಸಮ್ಮತಿಸಿದೆ. ಈ ಸಂಬಂಧ ಪ್ರಸ್ತಾವ ಸಲ್ಲಿಸಲು ಡಿಪಿಎಆರ್ ಅಧಿಕಾರಿಗಳು ಲೋಕಾಯುಕ್ತರಿಗೆ ಪತ್ರ ಬರೆದಿದ್ದಾರೆ.

ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ–1988ರ ಅಡಿ ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಲು ನೀಡಿದ್ದ ಅಧಿಕಾರವನ್ನು 2016ರಲ್ಲಿ ಹಿಂಪಡೆಯಲಾಗಿತ್ತು. ಆ ಬಳಿಕ ಸಂಸ್ಥೆಯಲ್ಲಿ ಹೆಚ್ಚಿನ ಸಂಖ್ಯೆಯ ಹುದ್ದೆಗಳು ಖಾಲಿ ಇದ್ದವು.

ಆಗಸ್ಟ್ 11ರ ಹೈಕೋರ್ಟ್ ಆದೇಶದಂತೆ ಎಸಿಬಿಯನ್ನು ರದ್ದುಗೊಳಿಸಿ, ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಪೊಲೀಸ್ ಠಾಣೆಗಳ ಸ್ಥಾನಮಾನ ನೀಡಿ ಸೆಪ್ಟೆಂಬರ್ 9ರಂದು ಆದೇಶ ಹೊರಡಿಸಲಾಗಿತ್ತು. ಎಸಿಬಿಯಲ್ಲಿ ತನಿಖಾ ಹಂತದಲ್ಲಿರುವ ಎಲ್ಲ ಪ್ರಕರಣಗಳು, ದೂರುಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಲು ಡಿಪಿಎಆರ್ ಆದೇಶಿಸಿತ್ತು.

ಲೋಕಾಯುಕ್ತ ಪೊಲೀಸ್ ವಿಭಾಗದಲ್ಲಿ 534 ಹುದ್ದೆಗಳ ಮಂಜೂರಾತಿ ಇದೆ. ಒಂದು ಐಜಿಪಿ, ಮೂರು ಎಸ್‌ಪಿ, ಐದು ಡಿವೈಎಸ್‌ಪಿ, 10 ಇನ್‌ಸ್ಪೆಕ್ಟರ್ ಸೇರಿ ಕೆಲ ಹುದ್ದೆಗಳು ಖಾಲಿ ಇವೆ. ಅವುಗಳ ಭರ್ತಿ ಜತೆಗೆ ಎಸಿಬಿಯಲ್ಲಿರುವ 322 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನೂ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ವರ್ಗಾಯಿಸುವಂತೆ ಲೋಕಾಯುಕ್ತರು ಕೋರಿದ್ದರು.

**ಮೂಡದ ಸಹಮತ:** ಅಧಿಕಾರಿಗಳು ಮತ್ತು ಸಿಬ್ಬಂದಿ ಹಂಚಿಕೆಗೆ ಸಂಬಂಧಿಸಿದಂತೆ ಡಿಪಿಎಆರ್ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ಹಲವು ಸುತ್ತಿನ ಚರ್ಚೆ ನಡೆಸಿದ್ದರು. ಆದರೆ, ಎಸಿಬಿ ಪೊಲೀಸ್ ಘಟಕವನ್ನು ಸಮಗ್ರವಾಗಿ ಲೋಕಾಯುಕ್ತದಲ್ಲಿ ವಿಲೀನಗೊಳಿಸುವ ಬೇಡಿಕೆ ಕುರಿತು ಸಹಮತ ಮೂಡಿರಲಿಲ್ಲ.

‘ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲೂ ಚರ್ಚೆ ನಡೆದಿತ್ತು. ‘ಎಸಿಬಿಯ ಪೊಲೀಸ್ ಬಲವನ್ನು ಪೂರ್ಣವಾಗಿ ವಿಲೀನಗೊಳಿಸುವ ಅಗತ್ಯವಿಲ್ಲ’ ಎಂಬ ವಾದವನ್ನು ಹಿರಿಯ ಪೊಲೀಸ್‌ಅಧಿಕಾರಿಗಳು ಮಂಡಿಸಿದ್ದರು. ಈ ಕಾರಣದಿಂದಾಗಿಯೇ ವಿಲೀನದ ಪ್ರಸ್ತಾವವನ್ನು ಕೈಬಿಡಲಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

### ‘ಶೀಘ್ರದಲ್ಲಿಯೇ ಪ್ರಸ್ತಾವ ಸಲ್ಲಿಕೆ’



‘ಲೋಕಾಯುಕ್ತದ ಆಡಳಿತ ಮತ್ತು ವಿಚಾರಣೆ, ಪೊಲೀಸ್ ಹಾಗೂ ತಾಂತ್ರಿಕ ವಿಭಾಗಗಳಲ್ಲಿ ಹೊಸ ಹುದ್ದೆಗಳನ್ನು ಸೃಜಿಸಲು ಸರ್ಕಾರ ಒಪ್ಪಿಗೆ ಸೂಚಿಸಿದೆ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಪೊಲೀಸ್ ವಿಭಾಗದಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಅರ್ಹ ಅಧಿಕಾರಿಗಳ ಪಟ್ಟಿ ಕಳುಹಿಸಲು ಸೂಚನೆ ಬಂದಿದೆ. ಶೀಘ್ರ ಅದನ್ನು ಕಳುಹಿಸಲಾಗುವುದು’ ಎಂದರು.

### ಹಸ್ತಾಂತರ

ಅಧಿಕಾರಿಗಳು ಮತ್ತು ಸಿಬ್ಬಂದಿ ವಿಲೀನದ ಬೇಡಿಕೆ ಇತ್ಯರ್ಥವಾಗದ್ದರಿಂದ ಎಸಿಬಿಯಲ್ಲಿರುವ ಪ್ರಕರಣಗಳನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯೂ ವಿಳಂಬವಾಗಿತ್ತು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿ ಕೆಲವು ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ನಿಧಾನಗತಿಯಲ್ಲಿ ಸಾಗಿದೆ.

'ನವೋದಯ' ಪ್ರವೇಶ ಪರೀಕ್ಷೆ

# ಮಾನಸಿಕ ಸಾಮರ್ಥ್ಯ ಪರೀಕ್ಷೆ ಮಾದರಿ ಪ್ರಶ್ನೋತ್ತರಗಳು




ಸರಣಿ 4

ಹಿಂದಿನ ಸಂಚಿಕೆಯಲ್ಲಿ ಮಾನಸಿಕ ಸಾಮರ್ಥ್ಯ ವಿಭಾಗದ ಮೂರು ಮತ್ತು ನಾಲ್ಕು ಭಾಗಗಳ ಬಗ್ಗೆ ತಿಳಿಸಲಾಗಿತ್ತು. ಈ ಸಂಚಿಕೆಯಲ್ಲಿ ಉಳಿದ ಭಾಗಗಳ ಬಗ್ಗೆ ಅರಿಯೋಣ.

ವೆಂಕಟಸುಬ್ಬರಾವ್ ವಿ.

ಹಿಂದಿನ ಮೂರು ಸಂಚಿಕೆಗಳಲ್ಲಿ ಜವಾಹರ ನವೋದಯ ವಿದ್ಯಾಲಯಗಳ ಬಗ್ಗೆ ಕಿರು ಪರಿಚಯ, ಪ್ರವೇಶಾತಿ, ಪ್ರವೇಶ ಪರೀಕ್ಷೆಗಳು, ಮಾದರಿ ಪ್ರಶ್ನೆಪತ್ರಿಕೆಗಳ (ಮಾನಸಿಕ ಸಾಮರ್ಥ್ಯ ಪರೀಕ್ಷೆ, ಅಂಕಗಣಿತ ಹಾಗೂ ಭಾಷೆ) ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿತ್ತು. 6 ನೆಯ ತರಗತಿ ಪ್ರವೇಶ ಪರೀಕ್ಷೆಯ 'ಮಾನಸಿಕ ಸಾಮರ್ಥ್ಯ' ಪರೀಕ್ಷೆಯ ಪ್ರಶ್ನೆಗಳ ಪತ್ರಿಕೆಯ ಕೆಲವು ಉದಾಹರಣೆಗಳನ್ನೂ ನೋಡಿದೆವು. ಈ ಸಂಚಿಕೆಯಲ್ಲಿ ಮಾನಸಿಕ ಸಾಮರ್ಥ್ಯ ಪರೀಕ್ಷೆಯ ಮೂರು ಭಾಗಗಳನ್ನು ನೀಡಲಾಗಿದೆ .

**ಭಾಗ 5** ಈ ವಿಭಾಗದಲ್ಲಿ ಪ್ರಶ್ನೆಗಳು ಹೀಗಿರುತ್ತವೆ; ಎಡಭಾಗದಲ್ಲಿ ಮೂರು ಚಿತ್ರಗಳನ್ನು ಕೊಟ್ಟಿರುತ್ತಾರೆ ಮತ್ತು ನಾಲ್ಕನೆಯ ಚಿತ್ರದ ಸ್ಥಳದಲ್ಲಿ ಪ್ರಶ್ನಾರ್ಥಕ ಚಿಹ್ನೆಯನ್ನು ಕೊಟ್ಟಿರುತ್ತಾರೆ. ಮೊದಲ ಎರಡು ಚಿತ್ರಗಳಲ್ಲಿ ಯಾವುದೋ ರೀತಿಯ ಸಂಬಂಧವಿರುತ್ತದೆ. ಹಾಗೆಯೇ ಮೂರನೆಯ ಮತ್ತು ನಾಲ್ಕನೆಯ ಚಿತ್ರಗಳಿಗೂ ಒಂದು ಸಂಬಂಧವಿರುತ್ತದೆ. ಉತ್ತರ ರೂಪದ ಚಿತ್ರಗಳಲ್ಲಿ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ (A,B,C,D) ಯಾವುದೋ ಒಂದು ಆಯ್ಕೆಯು ಪ್ರಶ್ನೆಯ ಮೂರನೆಯ ಚಿತ್ರದೊಂದಿಗೆ ಸಂಬಂಧಿಸಿರುತ್ತದೆ. ಆ ಆಯ್ಕೆಯನ್ನು ಕಂಡುಹಿಡಿದು ಉತ್ತರಿಸಬೇಕು. ಉದಾಹರಣೆಗೆ,





ಈ ರೀತಿಯ ಪ್ರಶ್ನೆಗಳಲ್ಲಿ, ಮೊದಲ ಎರಡು ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳ ನಡುವಿನ ಸಂಬಂಧಗಳನ್ನು ತಿಳಿಯಿರಿ.

ಈ ಪ್ರಶ್ನೆಯ ಎಡಭಾಗದ ಮೊದಲ ಚಿತ್ರವನ್ನು ಗಮನಿಸಿ. ವೃತ್ತದ ಒಳಭಾಗದಲ್ಲಿ ಮೇಲ್ಗಡೆ ಒಂದು ತ್ರಾಪಿಜ್ಯವೂ ಮತ್ತು ಕಳಗೆ ಒಂದು ತ್ರಿಭುಜವೂ ಇದೆ. ಎರಡನೆಯ ಚಿತ್ರದ ವೃತ್ತದ ಒಳಭಾಗವನ್ನು ಗಮನಿಸಿ, ಇಲ್ಲಿ ಮೇಲಿದ್ದ ತ್ರಾಪಿಜ್ಯದ ಒಳಗೆ ಕೆಳಗಿದ್ದ ತ್ರಿಭುಜವು ಚಲಿಸಿದೆ ಅಲ್ಲವೇ?

ಹಾಗೆಯೇ, ಎಡಭಾಗದ ಮೂರನೆಯ ಚಿತ್ರದಲ್ಲಿ ತ್ರಿಭುಜದ ಒಳಗೆ, ಮೇಲ್ಭಾಗದಲ್ಲಿ ಒಂದು ಚೌಕವೂ ಅದರ ಕೆಳಗೆ ಒಂದು ಸಣ್ಣ ವೃತ್ತವೂ ಇದೆಯಲ್ಲವೇ? ಹಾಗಾದರೆ, ನಾಲ್ಕನೆಯ ಚಿತ್ರ ಯಾವುದಿರಬೇಕು? ಮೊದಲೆರೆಡು ಚಿತ್ರಗಳ ಸಂಬಂಧದಂತೆ, ನಾಲ್ಕನೆಯ ಚಿತ್ರದಲ್ಲಿ, ತ್ರಿಭುಜದ ಒಳಭಾಗದಲ್ಲಿ, ಚೌಕದ ಒಳಗೆ ವೃತ್ತವು ಇರಬೇಕಲ್ಲವೇ? ಹಾಗಾಗಿ (B) ಸರಿ ಉತ್ತರವಾಗುತ್ತದೆ.


2. ಎಡಬದಿಯ ಮೊದಲ ಎರಡು ಚಿತ್ರಗಳನ್ನು ಗಮನಿಸಿ, ಮೂರನೆಯ ಚಿತ್ರಕ್ಕೆ ಹೊಂದುವ ಆಯ್ಕೆಯ ಉತ್ತರವನ್ನು ನೀವೇ ಕಂಡುಹಿಡಿಯಬಹುದೇ? ಪ್ರಯತ್ನಿಸಿ.




**ಭಾಗ 6** ಇಲ್ಲಿ, ಎಡಭಾಗದಲ್ಲಿ ಒಂದು ಜ್ಯಾಮಿತೀಯ ಆಕಾರವನ್ನು ಕೊಟ್ಟಿರುತ್ತಾರೆ. ಈ ಆಕೃತಿಯು ಲೋಪವಾಗಿರುತ್ತದೆ (ಅಪೂರ್ಣವಾಗಿರುತ್ತದೆ). ಬಲಭಾಗದಲ್ಲಿ ಕೊಟ್ಟಿರುವ A,B,C,D ಉತ್ತರ ರೂಪದ ಆಕೃತಿಗಳಲ್ಲಿ ಒಂದು ಆಕೃತಿಯು ಪ್ರಶ್ನೆ ರೂಪದ ಆಕೃತಿಯಲ್ಲಿ ಲೋಪವಾದ ಭಾಗಕ್ಕೆ ಸರಿಯಾಗಿ ಹೊಂದಿ, ಪ್ರಶ್ನೆರೂಪದ ಆಕೃತಿಯನ್ನು ಪೂರ್ಣಗೊಳಿಸುತ್ತದೆ (ದಿಕ್ಕನ್ನು ಬದಲಿಸದೆ). ಆ ಆಕೃತಿಯನ್ನು ಕಂಡುಹಿಡಿದು ಉತ್ತರಿಸಬೇಕು.


ಉದಾಹರಣೆಗೆ,

1




ದೃಶ್ಯೀಕರಣದ ಸಹಾಯದಿಂದ ಈ ರೀತಿಯ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸಬಹುದು. ಎಡಭಾಗದ ಅಪೂರ್ಣ ಚಿತ್ರವನ್ನು ಗಮನಿಸಿ. ಬಲಭಾಗದ ಯಾವ ಆಕೃತಿಯು ಎಡಭಾಗದ ಅಪೂರ್ಣ ಚಿತ್ರವನ್ನು (ದಿಕ್ಕನ್ನು ಬದಲಿಸದೆ) ಪೂರ್ಣಗೊಳಿಸುತ್ತದೆ ಎಂದು ಗಮನಿಸಿ. A,B ಮತ್ತು D ಗಳು ಹೊಂದುವುದಿಲ್ಲ ಎಂದು ಮೇಲ್ನೋಟಕ್ಕೇ ತಿಳಿಯುತ್ತದೆ ಅಲ್ಲವೇ? ಅದ್ದರಿಂದ ಸರಿ ಉತ್ತರ C !

**2. ಈ ಕೆಳಗಿನ ಪ್ರಶ್ನೆಗೆ ಸರಿಯಾದ ಆಯ್ಕೆ ಏನು?**






**ಭಾಗ 7** ಇಲ್ಲಿ, ಒಂದು ಪ್ರಶ್ನೆರೂಪದ ಅಕೃತಿಯನ್ನು ಎಡಬದಿಗೆ ಕೊಡಲಾಗಿರುತ್ತದೆ. A,B,C,D ಎಂಬ ನಾಲ್ಕು ಉತ್ತರ ರೂಪದ ಆಕೃತಿಗಳನ್ನು ಬಲಬದಿಗೆ ಕೊಡಲಾಗಿರುತ್ತದೆ. ಪ್ರಶ್ನೆಯಲ್ಲಿ ತೋರಿಸಿದ X,Y ಜಾಗಕ್ಕೆ ಕನ್ನಡಿಯನ್ನು ಹಿಡಿದಾಗ, ಬಲಭಾಗದ ನಾಲ್ಕು A,B,C,D ಆಯ್ಕೆಗಳಲ್ಲಿ ಯಾವುದೋ ಒಂದು ಆಯ್ಕೆಯು ಎಡಭಾಗದ ಚಿತ್ರದ ಸರಿಯಾದ ಪ್ರತಿಬಿಂಬವಾಗಿರುತ್ತದೆ. ಆ ಸರಿಹೊಂದುವ ಪ್ರತಿಬಿಂಬವನ್ನು ಕಂಡುಹಿಡಿಯಬೇಕು.

ಈ ರೀತಿ ಪ್ರಶ್ನೆಗಳಿಗೆ ಉತ್ತರಿಸಲು, ಕನ್ನಡಿಯಲ್ಲಿ ಪ್ರತಿಬಿಂಬಗಳು ಹೇಗೆ ಕಾಣಿಸುತ್ತವೆ ಎಂದು ತಿಳಿದಿರಬೇಕು. ನಿಮಗೆ ತಿಳಿದಿರುವಂತೆ ಕನ್ನಡಿಯ ಪ್ರತಿಬಿಂಬದಲ್ಲಿ ಎಡ ಮತ್ತು ಬಲ ಭಾಗಗಳು ಅದಲು-ಬದಲಾಗಿರುತ್ತವೆ ಅಲ್ಲವೇ? ಚಿಕ್ಕಂದಿನಲ್ಲಿ ನಾವು 'ಕನ್ನಡಿ' ಆಟ ಆಡುತ್ತಿದ್ದೆವು. ಕೆಲವು ಬಾರಿ ಈ 'ಕನ್ನಡಿ' ಆಟವೂ ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸಲು ಸಹಾಯವಾಗಬಹುದು ! ನಿಮಗೆ ಈ ಆಟದ ಬಗ್ಗೆ ತಿಳಿದಿರದಿದ್ದರೆ, ಮುಂದಿನ ಸಂಚಿಕೆಗಳಲ್ಲಿ ತಿಳಿಸುತ್ತೇನೆ.

ಈ ಭಾಗದ, ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಅಕ್ಷರಗಳ ಪ್ರತಿಬಿಂಬಗಳು ಕನ್ನಡಿಯಲ್ಲಿ ಹೇಗೆ ಕಾಣಿಸುತ್ತವೆ ಎಂದು ತಿಳಿದಿರಬೇಕಾಗುತ್ತದೆ. ಅದಕ್ಕಾಗಿ ಪ್ರತಿಯೊಂದು ಅಕ್ಷರವನ್ನೂ ಒಂದು ಹಾಳೆಯಲ್ಲಿ ಬರೆದು ಕನ್ನಡಿಯಲ್ಲಿ ಅದರ ಪ್ರತಿಬಿಂಬವನ್ನು ಗಮನಿಸಿ.


1. ಉದಾಹರಣೆಗೆ,




ಇಲ್ಲಿ, ಎಡಭಾಗದ ಪ್ರಶ್ನೆಯ ಆಕೃತಿಯನ್ನು ಕನ್ನಡಿಯ ಮುಂದೆ ( X,Y ಜಾಗಕ್ಕೆ) ಹಿಡಿದು ನೋಡಿರಿ. ಮತ್ತು ಸರಿಯಾದ ಆಯ್ಕೆಯನ್ನು ತಿಳಿಸಿ.

2. ಕೆಲವು ಪ್ರಶ್ನೆಗಳು ಅಕ್ಷರಗಳ ಜೊತೆ ಕೆಲವು ಆಕೃತಿಗಳನ್ನೂ ಹೊಂದಿರುತ್ತವೆ ಹಾಗೆಯೇ ಕೆಲವು ಪ್ರಶ್ನೆಗಳಲ್ಲಿ ಕೇವಲ ಆಕೃತಿಗಳೇ ಇರುತ್ತವೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.




ಈ ರೀತಿಯ ಪ್ರಶ್ನೆಗಳಿಗೆ ಉತ್ತರಿಸುವ ವಿಧಾನವನ್ನು ಮುಂದಿನ ಸಂಚಿಕೆಯಲ್ಲಿ ತಿಳಿಯೋಣ. ಹೆಚ್ಚಿನ ವಿವರಗಳಿಗಾಗಿ ಈ ಕೆಳಗಿನ ಜಾಲತಾಣವನ್ನು ನೋಡಿ.

https://navodaya.gov.in/nvs/en/Home1

**(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು)**

**ಮುಂದುವರಿಯುವುದು**

### ಪ್ರಶ್ನೆ ಕಳಿಸಬಹುದು

ಜವಾಹರ ನವೋದಯ ವಿದ್ಯಾಲಯಗಳ ಪ್ರವೇಶ ಪರೀಕ್ಷೆ ಕುರಿತು ಏನಾದರೂ ಪ್ರಶ್ನೆಗಳು, ಅಭಿಪ್ರಾಯಗಳಿದ್ದರೆ, shikshana@prajavani.co.in ಮೇಲ್‌ಗೆ ಬರೆದು ಕಳುಹಿಸಿ. .

# ಪುಸ್ತಕದ ಒಡನಾಟ ಹೆಚ್ಚಲಿ


ಸಾ.ಮ.ಶಿವಮಲ್ಲಯ್ಯ

**ಕೆಲವು ಪ್ರೌಢಶಾಲೆ** ಹಾಗೂ ಮಾಧ್ಯಮಿಕ ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳಲ್ಲಿ ಓದುವ ಅಭಿರುಚಿಯ ಬಗ್ಗೆ ವಿಚಾರಿಸಿದ್ದಿದೆ. ಯಾವ ಪುಸ್ತಕಗಳನ್ನು ಓದಿದ್ದೀರಿ. ಅಂಥವರು ಕೈಯೆತ್ತಿ ಎಂದಾಗ ಯಾವ ವಿದ್ಯಾರ್ಥಿಯೂ ಕೈ ಎತ್ತಲಿಲ್ಲ.

ಓದುವ ಹವ್ಯಾಸವೇ ಇಲ್ಲದೇ ಮಕ್ಕಳ ಕಲ್ಪನಾಲೋಕ ಎಷ್ಟು ಸೊರಗಿದೆ. ಈ ಓದುವ ಅಭಿರುಚಿ ಮಕ್ಕಳಲ್ಲಿ ಅಷ್ಟೇ ಅಲ್ಲ ಅನೇಕ ಮಂದಿ ದೊಡ್ಡವರಲ್ಲಿಯೂ ಕಡಿಮೆಯಾಗಿದೆ. ಟಿ.ವಿ. ಮೊಬೈಲ್, ಕಂಪ್ಯೂಟರ್‌ಗಳಿಂದಾಗಿ ಪುರಸೊತ್ತಿಲ್ಲದ ಒತ್ತಡದ ಬದುಕು. ಓದುವ ಅಭ್ಯಾಸವಾದರೂ ಎಲ್ಲಿಂದ ಬರುತ್ತದೆ?

'ಮನೆಯ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರು, ಜನನಿಯಿಂದ ಪಾಠ ಕಲಿತ ಜನರು ಧನ್ಯರು'. ಪೋಷಕರಾದ ನಾವುಗಳು ಮನೆಗಳಲ್ಲಿ ಪುಸ್ತಕ ಸಂಗ್ರಹಿಸಿ ಆಗಾಗ ಓದುತ್ತಿದ್ದರೆ ಮಕ್ಕಳಲ್ಲೂ ಓದುವ ಅಭಿರುಚಿ ಬರುತ್ತದೆ. ಮನೆಯಲ್ಲಿಯೇ ಈ ವಾತಾವರಣ ಇಲ್ಲದಿದ್ದಾಗ ಶಿಕ್ಷಕರಾದರೂ ಈ ಕರ್ತವ್ಯವನ್ನು ಪಾಲಿಸಬೇಕು.

ಬಹಳಷ್ಟು ಶಾಲೆಗಳಲ್ಲಿ ಗ್ರಂಥಾಲಯಗಳಿರುತ್ತವೆ. ಆದರೆ, ಅದರಲ್ಲಿನ ಪುಸ್ತಕಗಳು ಮಕ್ಕಳ ಕೈಗೆಟುವಂತಿರುವುದಿಲ್ಲ. ಪ್ರತಿ ಶಾಲೆಯಲ್ಲಿ ಮಕ್ಕಳ ವಯೋಮಾನಕ್ಕೆ ಅನುಗುಣವಾದ ಪುಸ್ತಕಗಳನ್ನು ಸಂಗ್ರಹಿಸಬೇಕು. ದಾನಿಗಳಿಂದ, ಇಲಾಖೆಯ ಅನುದಾನದಿಂದ ಉತ್ತಮ ಪುಸ್ತಕ ಖರೀದಿಸಬೇಕು. ಕಥೆ, ಕವಿತೆ, ಹಾಸ್ಯ, ಚಿತ್ರಕಲೆ, ಗಾದೆ, ಒಗಟು, ವ್ಯಕ್ತಿ ಪರಿಚಯ, ವಿಜ್ಞಾನ, ಗಣಿತಕ್ಕೆ ಸಂಬಂಧಿಸಿದಂತೆ ಪುಸ್ತಕಗಳನ್ನು ಖರೀದಿಸಬೇಕು. ಕಪಾಟಿನಲ್ಲಿ ಪುಸ್ತಕವಿಟ್ಟು ಭದ್ರ ಪಡಿಸುವ ಬದಲು ಮಕ್ಕಳ ಕೈಗೆ ಸುಲಭವಾಗಿ ಸಿಗುವಂತೆ ಇಡಬೇಕು. ಸೂಕ್ತ ಕೊಠಡಿಯಲ್ಲಿ ಕಪಾಟು ಇಟ್ಟು, ಪುಸ್ತಕಗಳನ್ನು ಮಕ್ಕಳೇ ಜೋಡಿಸುವಂತಾಗಬೇಕು. ಈ ಕೆಲಸಕ್ಕೆ ಶಾಲೆಯ ಹಿರಿಯ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಬಳಸಿಕೊಳ್ಳಬೇಕು.



ಗ್ರಂಥಾಲಯದ ನಿರ್ವಹಣೆ ಜವಾಬ್ದಾರಿಯನ್ನು ಹಿರಿಯ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿಗೆ ವಹಿಸಬೇಕು.

**ಪುಸ್ತಕದ ಬಳಕೆಗೆ ಹೀಗೆ ಮಾಡಿ**


- ನಾಲ್ಕು ಅಥವಾ ಐದು ವಿದ್ಯಾರ್ಥಿಗಳು ಕಪಾಟಿನ ಹತ್ತಿರ ಹೋಗಿ ತಮಗೆ ಬೇಕಾದ ಪುಸ್ತಕವನ್ನು ಆರಿಸಿಕೊಳ್ಳಬೇಕು.
- ಒಂದು ನೋಂದಣಿ ಪುಸ್ತಕ ಅಲ್ಲಿಟ್ಟು, ಅದರಲ್ಲಿ ಕ್ರಮ ಸಂಖ್ಯೆ/ದಿನಾಂಕ/ವಿದ್ಯಾರ್ಥಿಯ ಹೆಸರು/ತರಗತಿ/ಆರಿಸಿಕೊಂಡ ಪುಸ್ತಕದ ಹೆಸರು/ಲೇಖಕರ ಹೆಸರು/ಪುಸ್ತಕದ ಬೆಲೆ/ವಿದ್ಯಾರ್ಥಿಯ ಸಹಿ ಇರಲಿ.
- ವಿದ್ಯಾರ್ಥಿಗಳು ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡ ಮೇಲೆ ಶಿಕ್ಷಕರಿಲ್ಲದ ಅವಧಿಯಲ್ಲಿ ತರಗತಿಯ ಹೊರಗೆ ಅಥವಾ ಖಾಲಿ ಇರುವ ಸೂಕ್ತ ಜಾಗದಲ್ಲಿ ಕುಳಿತು ಓದುವಂತಾಗಬೇಕು.
- ವಿದ್ಯಾರ್ಥಿಗಳು ಓದಿದ ಮೇಲೆ ಪ್ರತ್ಯೇಕ ಪುಸ್ತಕದಲ್ಲಿ ಓದಿದ ಪುಸ್ತಕದ ಹೆಸರು ಅದರ ಸಾರಾಂಶವನ್ನು ಬರೆಯಬೇಕು.

**ವಾರಕ್ಕೊಮ್ಮೆ ವಿತರಣೆ**

ವಾರಕ್ಕೊಮ್ಮೆ ತರಗತಿವಾರು ಅಂದರೆ ನಾಲ್ಕನೇ ತರಗತಿಯಿಂದ ಮೇಲ್ಪಟ್ಟ ತರಗತಿಗಳ ವಿದ್ಯಾರ್ಥಿಗಳಿಗೆ ಪುಸ್ತಕ ಕೊಡಬೇಕು. ಆಗಲೂ ಸಹ ಮಕ್ಕಳೇ ತಮಗಿಷ್ಟವಾದ ಪುಸ್ತಕಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವತಂತ್ರವಿರಬೇಕು.

# ವೇಗವಾಗಿ ವಿಷಯ ಗ್ರಹಿಸುವುದು ಹೇಗೆ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

**1. ನನಗೆ ಯಾವುದೇ ವಿಷಯ ಬೇಗ ಅರ್ಥವಾಗುವುದಿಲ್ಲ. ಗ್ರಹಿಕೆಯ ಶಕ್ತಿ ಕಡಿಮೆ ಇದೆ; ಗ್ರಹಿಸುವವರೆಗೂ ಕಷ್ಟಪಡುತ್ತೇನೆ. ಒಮ್ಮೆ ವಿಷಯವನ್ನು ಸರಿಯಾಗಿ ಗ್ರಹಿಸಿದ ಮೇಲೆ ಕಾರ್ಯತಂತ್ರವನ್ನು ಪಾಲಿಸುತ್ತೇನೆ. ಗ್ರಹಿಕೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಏನು ಮಾಡಬೇಕು?**

ಊರು, ಹೆಸರು ತಿಳಿಸಿಲ್ಲ.

ನಮ್ಮ ಸಾಮರ್ಥ್ಯದ ಒಂದು ಕನಿಷ್ಠ ಭಾಗವನ್ನಷ್ಟೇ ನಾವು ಸಕ್ರಿಯಗೊಳಿಸುತ್ತೇವೆ ಎಂದು ಅನೇಕ ಮನಃಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ, ಪ್ರಸ್ತುತ ನಿಮ್ಮ ಕಲಿಕೆಯ ಶೈಲಿಯನ್ನು ಪರೀಕ್ಷಿಸಿ, ನಿಮ್ಮ ಅನನ್ಯ ಕಲಿಕೆಯ ಶೈಲಿಯನ್ನು ಬೆಳೆಸಿಕೊಳ್ಳಿ.

ನಿಮ್ಮ ಗ್ರಹಿಕೆ ಮತ್ತು ಕಲಿಕೆಯ ಸಾಮರ್ಥ್ಯವನ್ನು ವೃದ್ಧಿಸಲು ಈ ಸಲಹೆಗಳನ್ನು ಅನುಸರಿಸಿ:

- ಎಲ್ಲಾ ವಿಷಯಗಳಲ್ಲಿ ಗ್ರಹಿಕೆಯ ಕೊರತೆಯಿದೆಯೇ ಅಥವಾ ಯಾವುದಾದರೂ ಒಂದೆರಡು ವಿಷಯಗಳಲ್ಲಿ ಮಾತ್ರ ಈ ಸಮಸ್ಯೆಯಿದೆಯೇ ಎಂದು ಪರಿಶೀಲಿಸಿ.
- ನಿಮಗಿರುವ ಗ್ರಹಿಕೆಯ ಸಮಸ್ಯೆಯ ಬಗ್ಗೆ ನಿಮ್ಮ ಅಧ್ಯಾಪಕರೊಡನೆ ಚರ್ಚಿಸಿ, ಅವರು ನೀಡುವ ಸಲಹೆಗಳನ್ನು ಪಾಲಿಸಿ.
- ಉಪನ್ಯಾಸಗಳನ್ನು ಏಕಾಗ್ರತೆಯಿಂದ ಸಕ್ರಿಯವಾಗಿ ಆಲಿಸಬೇಕು.
- ತರಗತಿಯಲ್ಲಿ ಬೋಧಿಸುವ ವಿಷಯ ಅರ್ಥವಾಗದಿದ್ದರೆ ಸಂಕೋಚವಿಲ್ಲದೆ ಪ್ರಶ್ನೆಗಳನ್ನು ಕೇಳಬೇಕು. ಏಕೆಂದರೆ, ಪ್ರಶ್ನೆಗಳನ್ನು ಕೇಳುವುದರಿಂದ ವಿಮರ್ಶಾತ್ಮಕ ಚಿಂತನಾ ಕೌಶಲ್ಯಗಳ ಅಭಿವೃದ್ಧಿಯ ಜೊತೆಗೆ, ವಿಷಯದ ಬಗ್ಗೆ ಒಳನೋಟಗಳು ಲಭಿಸಿ ಕಲಿಕೆ ಪರಿಣಾಮಕಾರಿಯಾಗುತ್ತದೆ.
- ತರಗತಿಯಲ್ಲಿ ಪರಿಣಾಮಕಾರಿಯಾಗಿ ಟಿಪ್ಪಣಿ (ನೋಟ್ಸ್) ಬರೆಯುವುದರಿಂದ ಕಲಿಕೆಯ ಸಾಮರ್ಥ್ಯ ಹೆಚ್ಚುತ್ತದೆ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ.
- ಪರಿಣಾಮಕಾರಿ ಓದುವಿಕೆಯ ಕಲೆಯನ್ನು ಎಸ್‌ಕ್ಯು3ಆರ್ (SQ3R) ನಂತಹ ತಂತ್ರಗಾರಿಕೆಯ ಮೂಲಕ ರೂಢಿಸಿಕೊಳ್ಳಿ.

ಇದರಿಂದ, ಜ್ಞಾಪಕ ಶಕ್ತಿಯೂ ವೃದ್ಧಿಸುತ್ತದೆ.

ಸಕಾರಾತ್ಮಕವಾದ ಆಶಾಭಾವನೆಯಿಂದ ಈ ಸಲಹೆಗಳನ್ನು ಅನುಸರಿಸಿದರೆ ಒಂದೆರಡು ತಿಂಗಳುಗಳಲ್ಲಿ ನಿಮ್ಮ ಕಲಿಕೆ ಸುಧಾರಿಸುತ್ತದೆ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/watch?v = 3PzmKRaJHmk

**2. ಪಿಯುಸಿ (ಪಿಸಿಎಂಬಿ) ಓದುತ್ತಿದ್ದೀನಿ. ಐದು ವರ್ಷಗಳಲ್ಲಿ ಎಂಬಿಬಿಎಸ್ ಹೊರತುಪಡಿಸಿ ವೃತ್ತಿಪರಳಾಗಲು ಯಾವ ಆಯ್ಕೆಗಳಿವೆ?**

**ರಶ್ಮಿ,** ಊರು ತಿಳಿಸಿಲ್ಲ.

ಪಿಯುಸಿ (ಪಿಸಿಎಂಬಿ) ವಿದ್ಯಾರ್ಥಿಗಳಿಗೆ ಅಸಂಖ್ಯಾತ ಉನ್ನತ ಶಿಕ್ಷಣದ ಅವಕಾಶಗಳಿವೆ. ಉದಾಹರಣೆಗೆ, ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಡಿಸೈನ್, ಆಹಾರ ತಂತ್ರಜ್ಞಾನ, ಎನ್‌ಡಿಎ, ಐಎಎಸ್, ಮಾಧ್ಯಮ, ಪತ್ರಿಕೋದ್ಯಮ, ಕೃಷಿ ಸಂಬಂಧಿತ ಕೋರ್ಸ್‌ಗಳು, ಬಿಎಸ್ಸಿ(ಆನರ್ಸ್ ಸೇರಿದಂತೆ 50ಕ್ಕೂ ಹೆಚ್ಚು ಆಯ್ಕೆಗಳು), ಬಿಸಿಎ, ಸಿಎ, ಎಸಿಎಸ್, ಐಸಿಡಬ್ಲ್ಯು ಸೇರಿದಂತೆ ಅನೇಕ ಕೋರ್ಸ್ ಆಯ್ಕೆಗಳಿವೆ. ಪ್ರಮುಖವಾಗಿ, ನಿಮ್ಮ ಸ್ವಾಭಾವಿಕ ಪ್ರತಿಭೆ ಮತ್ತು ಅಭಿರುಚಿ ಯಾವ ಕ್ಷೇತ್ರದಲ್ಲಿದೆ ಎಂದು ನೀವು ಅರಿತು, ವೃತ್ತಿಯೋಜನೆಯ ಮುಖಾಂತರ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/c/EducationalExpertManagementCareerConsultant

**4. ನಾನು ಎಂಜಿನಿಯರಿಂಗ್ ಮಾಡಬೇಕು ಅಂದುಕೊಂಡಿದ್ದೇನೆ. ನನಗೆ ಇ ಆ್ಯಂಡ್ ಸಿ (ಎಲೆಕ್ಟ್ರಾನಿಕ್ ಆ್ಯಂಡ್ ಕಮ್ಯೂನಿಕೇಷನ್ ) ಮತ್ತು ಸಿ.ಎಸ್ (ಕಂಪ್ಯೂಟರ್ ಸೈನ್ಸ್) ವಿಭಾಗಗಳಲ್ಲಿ ಯಾವ ವಿಭಾಗವನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಗೊಂದಲವಿದೆ. ಗಣಿತ ಹಾಗೂ ರಸಾಯನಶಾಸ್ತ್ರದ ವಿಷಯಗಳು ಸುಲಭವಾಗಿವೆ; ಭೌತಶಾಸ್ತ್ರ ಸ್ವಲ್ಪ ಮಟ್ಟಿಗೆ ಕಠಿಣವೆನಿಸುತ್ತದೆ. ಯಾವ ವಿಭಾಗವನ್ನು ತೆಗೆದುಕೊಂಡರೆ ನನ್ನ ಮುಂದಿನ ಭವಿಷ್ಯ ಚೆನ್ನಾಗಿರುತ್ತದೆ?**

**ಹೆಸರು,** ಊರು ತಿಳಿಸಿಲ್ಲ.

ಸದ್ಯಕ್ಕೆ, ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಹೆಚ್ಚಿನ ಬೇಡಿಕೆಯಿದೆ. ಹಾಗೂ ನಿಮಗೆ ಭೌತಶಾಸ್ತ್ರ ಕಠಿಣವೆನಿಸುವುದರಿಂದ ಕಂಪ್ಯೂಟರ್ ಸೈನ್ಸ್ ವಿಭಾಗ ಸೂಕ್ತವೆನಿಸುತ್ತದೆ. ಇ ಆ್ಯಂಡ್ ಸಿ ವಿಭಾಗದಲ್ಲಿ ಭೌತಶಾಸ್ತ್ರದ ಸಿದ್ಧಾಂತಗಳು, ಪರಿಕಲ್ಪನೆಗಳು, ಸೂತ್ರಗಳು ಹೆಚ್ಚಾಗಿರುತ್ತವೆ.

ಎಂಜಿನಿಯರಿಂಗ್ (ಇಸಿ) ನಂತರ ಸರ್ಕಾರಿ ಕ್ಷೇತ್ರದ ಬೃಹತ್ ಉದ್ದಿಮೆಗಳಲ್ಲಿ (ಬಿಎಸ್‌ಎನ್‌ಎಲ್, ಬಿಇಎಲ್, ಬಿಎಆರ್‌ಸಿ, ಡಿಆರ್‌ಡಿಒ, ಐಎಸ್‌ಆರ್‌ಒ ಇತ್ಯಾದಿ), ಸರ್ಕಾರಿ ಇಲಾಖೆಗಳಲ್ಲಿ ಹಾಗೂ ಖಾಸಗಿ ಕ್ಷೇತ್ರದ ಉದ್ದಿಮೆಗಳಲ್ಲಿ ಉದ್ಯೋಗಾವಕಾಶಗಳಿವೆ. ಇದೇ ರೀತಿ, ಎಂಜಿನಿಯರಿಂಗ್ (ಸಿಎಸ್) ವಿಭಾಗದಲ್ಲೂ ಆಕರ್ಷಕ ಉದ್ಯೋಗಾವಕಾಶಗಳಿವೆ. ಆದ್ದರಿಂದ, ಅಂತಿಮ ಆಯ್ಕೆಯ ಮೊದಲು ಎಂಜಿನಿಯರಿಂಗ್ (ಇಸಿ) ವಿಭಾಗದ ಪಠ್ಯಕ್ರಮ, ವಿಷಯಸೂಚಿಯನ್ನು ಗಮನಿಸಿ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ.

**ಮತ್ತಷ್ಟು ಪ್ರಶ್ನೋತ್ತರಕ್ಕಾಗಿ www.prajavani.net/education ಜಾಲತಾಣಕ್ಕೆ ಭೇಟಿ ನೀಡಿ.**

### ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

## ವಿದ್ಯಾರ್ಥಿ ವೇತನ ಕೈಪಿಡಿ

### ಲೋರೆಯಾಲ್ ಇಂಡಿಯಾ ಫಾರ್ ಯಂಗ್ ವಿಮೆನ್ ಇನ್ ಸೈನ್ಸ್ ಸ್ಕಾಲರ್‌ಶಿಪ್ 2022

ಇದು ವಿಜ್ಞಾನದ ಕ್ಷೇತ್ರದಲ್ಲಿ ಪದವಿ ಮುಂದುವರಿಸಲು ಬಯಸುವ ಯುವತಿಯರಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ರೂಪಿಸಿರುವ ಸ್ಕಾಲರ್‌ಷಿಪ್ ಪ್ರೊಗ್ರಾಂ. ಈ ಮೂಲಕ ಯುವತಿಯರನ್ನು ಶೈಕ್ಷಣಿಕವಾಗಿ ಬಲವರ್ಧಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ.

**ಅರ್ಹತೆ:** 2021-22ರ ಶೈಕ್ಷಣಿಕ ವರ್ಷದಲ್ಲಿ ಪಿಯುಸಿಯಲ್ಲಿ(12ನೇ ತರಗತಿ) ಪಿಸಿಬಿ/ಪಿಸಿಎಂ/ಪಿಸಿಎಂಬಿಯಲ್ಲಿ ಶೇ 85 ಅಂಕದೊಂದಿಗೆ ಉತ್ತೀರ್ಣರಾದ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಕಡಿಮೆಯಿರಬೇಕು.

**ಆರ್ಥಿಕ ನೆರವು :** ಆಯ್ದ ವಿದ್ಯಾರ್ಥಿನಿಯರಿಗೆ ವಿಜ್ಞಾನದಲ್ಲಿ ಪದವಿ ಪಡೆಯಲು ಅವರ ಬೋಧನಾ ಶುಲ್ಕ ಮತ್ತು ಶೈಕ್ಷಣಿಕ ವೆಚ್ಚಗಳಿಗಾಗಿ ಕಂತುಗಳಲ್ಲಿ ₹ 2,50,000 ವರೆಗೆ ನೀಡಲಾಗುತ್ತದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನ:** 16-10-2022

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ

**ಹೆಚ್ಚಿನ ಮಾಹಿತಿಗೆ:** www.b4s.in/praja/LIS1

### ಎರಿಕ್ಸನ್ ಎಂಪವರಿಂಗ್ ಗರ್ಲ್ ಸ್ಕಾಲರ್‌ಷಿಪ್ ಪ್ರೋಗ್ರಾಂ 2022

ಎರಡನೇ ವರ್ಷದ ಎಂಜಿನಿಯರಿಂಗ್ (ಐಟಿ/ಸಿಎಸ್) ಅಥವಾ ಎಂಬಿಎ ಪ್ರೋಗ್ರಾಂನಲ್ಲಿ ಓದುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಶೈಕ್ಷಣಿಕ ನೆರವು ನೀಡುವುದಕ್ಕಾಗಿ ರೂಪಿಸಿರುವ ಸ್ಕಾಲರ್‌ಷಿಪ್ ಪ್ರೋಗ್ರಾಂ ಇದು. ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿನಿಯರನ್ನು ಬೆಂಬಲಿಸುವ ಉದ್ದೇಶದೊಂದಿಗೆ ಈ ಕಾರ್ಯಕ್ರಮ ರೂಪಿಸಲಾಗಿದೆ.


**ಅರ್ಹತೆ:** ಎಂಜಿನಿಯರಿಂಗ್ (ಐಟಿ/ಸಿಎಸ್) ಅಥವಾ ಎಂಬಿಎ ಪದವಿಯ ಎರಡನೇ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಹಿಂದಿನ ವರ್ಷದ ಅಂತಿಮ ಪರೀಕ್ಷೆಯಲ್ಲಿ ಕನಿಷ್ಠ 6.5 ಜಿಪಿಎ ಅಥವಾ ತತ್ಸಮಾನ ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 6 ಲಕ್ಷ ಮೀರಿರಬಾರದು.

**ಆರ್ಥಿಕ ಸಹಾಯ:** ವರ್ಷಕ್ಕೆ ₹75,000

**ಅರ್ಜಿ ಸಲ್ಲಿಸಲು ಕೊನೆಯ ದಿನ:** 07-11-2022

**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ.

**ಹೆಚ್ಚಿನ ಮಾಹಿತಿಗೆ:** www.b4s.in/praja/EEGS13



## ಸುಭಾಷಿತ

ಬದಲಾವಣೆಯ ಗುಟ್ಟು ಹಳೆಯದರ ವಿರುದ್ಧ ಹೋರಾಟಕ್ಕೆ ನಿಮ್ಮೆಲ್ಲ ಶಕ್ತಿಯನ್ನು ಬಳಸುವುದರಲ್ಲಿಲ್ಲ; ಹೊಸತನ್ನು ಕಟ್ಟುವುದರಲ್ಲಿದೆ.

–ಸಾಕ್ರಟೀಸ್

# 'ಜನಸಂಖ್ಯಾ ಅಸಮತೋಲನ' ತಪ್ಪು ಗ್ರಹಿಕೆ, ಕುಟಿಲ ತಂತ್ರ

ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರು ನಾಗಪುರದಲ್ಲಿರುವ ಸಂಘದ ಕೇಂದ್ರ ಕಚೇರಿಯಲ್ಲಿ ವಿಜಯದಶಮಿಯ ದಿನ ಮಾಡಿದ ಭಾಷಣದಲ್ಲಿ ಆಡಿದ ಕೆಲವು ಮಾತುಗಳು ಮತ್ತು ನೀಡಿದ ಕೆಲವು ಸಲಹೆಗಳು ಸಹಜ ನೆಲೆಯ ಮೇಲೆ ನಿಂತಿಲ್ಲ, ಅಷ್ಟೇ ಅಲ್ಲದೆ, ಅವು ತಪ್ಪು ಗ್ರಹಿಕೆಗಳಿಂದ ಕೂಡಿವೆ. ವಿಜಯದಶಮಿಯ ಭಾಷಣದಲ್ಲಿ ವ್ಯಕ್ತಪಡಿಸಲಾಗುವ ಅಭಿಪ್ರಾಯಗಳನ್ನು ವಿವಿಧ ವಿಚಾರಗಳ ಬಗ್ಗೆ ಸಂಘದ ಅಧಿಕೃತ ನಿಲುವು ಎಂದೇ ಪರಿಗಣಿಸಲಾಗುತ್ತದೆ. ಸಂಘದ ಕಾರ್ಯಕರ್ತರು ಇದನ್ನು ಎದುರು ನೋಡುತ್ತಿರುತ್ತಾರೆ. ದೇಶದ ಜನಸಂಖ್ಯೆ ಮತ್ತು ಅದರಲ್ಲಿ ವಿವಿಧ ಧರ್ಮಗಳ ಪಾಲು ಎಷ್ಟು ಎಂಬುದರ ಕುರಿತ ಚರ್ಚೆಯು ಸಂಘದ ನೆಚ್ಚಿನ ವಿಷಯ. ಸಮಾಜವನ್ನು ವಿಭಜಿಸಲು ಮತ್ತು ದೇಶದಲ್ಲಿ ಹಿಂದೂಗಳು ಅಪಾಯದಲ್ಲಿದ್ದಾರೆ ಎಂದು ಬಿಂಬಿಸಲು ಇದನ್ನು ಸದಾ ಬಳಸಿಕೊಳ್ಳಲಾಗಿದೆ. ಭಾಗವತ್ ಅವರು ಈ ವಿಷಯವನ್ನು ಮತ್ತೆ ಕೆದಕಿದ್ದಾರೆ. ಜನಸಂಖ್ಯಾ ನಿಯಂತ್ರಣದ ಕುರಿತು ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಿಶೀಲನೆಗೆ ಒಳಪಡಿಸಿದರೆ ಅವು ಬಿದ್ದು ಹೋಗುತ್ತವೆ. ಜನಸಂಖ್ಯೆಗೆ ಸಂಬಂಧಿಸಿದ ಹಲವು ವಿಚಾರಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಜನಸಂಖ್ಯೆ ಏರಿಕೆಯ ದರ, ಜನಸಂಖ್ಯೆಯ ಏರಿಕೆಯಿಂದಾಗಿ ಆರ್ಥಿಕತೆ ಮೇಲಾಗುವ ಪರಿಣಾಮ, ಮಹಿಳೆಯರ ಸಬಲೀಕರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಮುಂತಾದ ವಿಚಾರಗಳನ್ನು ಅವರು ಚರ್ಚಿಸಿದ್ದಾರೆ. 'ಜನಸಂಖ್ಯಾ ಅಸಮತೋಲನ' ಮತ್ತು ಜನಸಂಖ್ಯಾ 'ನಿಯಂತ್ರಣ'ದ ಅಗತ್ಯದಂತಹ ತಪ್ಪು ಗ್ರಹಿಕೆಗಳಿಗೆ ಅವರು ಒತ್ತು ನೀಡಿದ್ದಾರೆ.



ಭಾಗವತ್ ಅವರು ಮತಾಂತರ ಮತ್ತು ಒಳನುಸುಳುವಿಕೆ ಕುರಿತು ಎತ್ತಿರುವ ಪ್ರಶ್ನೆಗಳಿಗೆ ಕೂಡ ಸಮರ್ಥನೆ ಇಲ್ಲ

ಜನಸಂಖ್ಯಾ ಬೆಳವಣಿಗೆಯಲ್ಲಿನ ಅಸಮತೋಲನ ಮತ್ತು ಜನಸಂಖ್ಯೆಯ ಧರ್ಮವಾರು ಪ್ರಾತಿನಿಧ್ಯದಲ್ಲಿ ಆಗುವ ಬದಲಾವಣೆಗಳು ಭೌಗೋಳಿಕ ಗಡಿ ಗುರುತುಗಳಲ್ಲಿಯೂ ಬದಲಾವಣೆಗೆ ಕಾರಣವಾಗಬಹುದು ಎಂದು ಅವರು ಹೇಳಿದ್ದಾರೆ. 'ಜನಸಂಖ್ಯಾ ನಿಯಂತ್ರಣ ಮತ್ತು ಧರ್ಮ ಆಧಾರಿತ ಜನಸಂಖ್ಯಾ ಸಮತೋಲನವು ಮಹತ್ವದ ವಿಚಾರವಾಗಿದ್ದು ಅದನ್ನು ನಿರ್ಲಕ್ಷಿಸಲು ಸಾಧ್ಯವೇ 'ಇಲ್ಲ' ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಇದು ತಪ್ಪು ಮತ್ತು ಕುಟಿಲವಾದ ಯೋಚನೆ. ಭಾರತದ ಒಟ್ಟು ಫಲವಂತಿಕೆ ದರವು ಸತತವಾಗಿ ಕುಸಿಯುತ್ತಲೇ ಇದೆ ಮತ್ತು ದೇಶವು ಕಡಿಮೆ ಫಲವಂತಿಕೆ ಹಂತವನ್ನು ಪ್ರವೇಶಿಸುವ ಸಾಧ್ಯತೆಯೂ ಇದೆ. ಒಟ್ಟು ಫಲವಂತಿಕೆ ದರವು 2ಕ್ಕೆ ಇಳಿದಿದೆ ಮತ್ತು ಅದು ಜನಸಂಖ್ಯೆ ಮರುಭರ್ತಿಗೆ ಬೇಕಾದ ದರವಾದ 2.1ಕ್ಕಿಂತಲೂ ಕಡಿಮೆ ಆಗಿದೆ. ಜನಸಂಖ್ಯೆಯ ವಾರ್ಷಿಕ ಹೆಚ್ಚಳ ದರ ಕೂಡ ಕಡಿಮೆ ಆಗುತ್ತಲೇ ಇದೆ. ಭಾಗವತ್ ಅವರು ಜನಸಂಖ್ಯೆ ಏರಿಕೆ ದರ ಕುರಿತು ಆಡಿದ ಮಾತುಗಳು ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್‌ನಂತಹ ರಾಜ್ಯಗಳಿಗೆ ಮಾತ್ರ ಅನ್ವಯ ಆಗುತ್ತವೆ. ದೇಶದ ಹೆಚ್ಚಿನ ಭಾಗಗಳಲ್ಲಿ ಜನಸಂಖ್ಯೆಯು ಸ್ಥಿರಗೊಂಡಿರುವ ಕಾರಣದಿಂದಾಗಿ ಜನಸಂಖ್ಯಾ ನಿಯಂತ್ರಣದ ಪ್ರಯತ್ನಗಳನ್ನು ಈ ರಾಜ್ಯಗಳಿಗೆ ಕೇಂದ್ರೀಕರಿಸಬಹುದು.

ಆರ್‌ಎಸ್‌ಎಸ್ ಮುಖ್ಯಸ್ಥರು ಪ್ರತಿಪಾದಿಸಿದ ಜನಸಂಖ್ಯಾ ಅಸಮತೋಲನ, ಅಂದರೆ ಹಿಂದೂಗಳ ಜನಸಂಖ್ಯೆ ಬೆಳವಣಿಗೆ ದರ ಮತ್ತು ಮುಸ್ಲಿಮರ ಜನಸಂಖ್ಯೆ ಬೆಳವಣಿಗೆ ದರದ ನಡುವೆ ಅಸಮತೋಲನ ಇದೆ ಎಂಬ ಗ್ರಹಿಕೆಯೂ ತಪ್ಪು. ದೇಶದ ಎಲ್ಲ ಧರ್ಮಗಳಲ್ಲಿಯೂ ಜನಸಂಖ್ಯೆ ಮತ್ತು ಏರಿಕೆ ದರವು ಕುಸಿದಿದೆ. ಮುಸ್ಲಿಮರ ಒಟ್ಟು ಫಲವಂತಿಕೆ ದರವು ಈಗ 2.3ರಷ್ಟಿದೆ. ಕಳೆದ ಎರಡು ದಶಕಗಳಲ್ಲಿ ಈ ಸಮುದಾಯದ ಫಲವಂತಿಕೆ ದರವು ಇತರ ಸಮುದಾಯಗಳಿಗೆ ಹೋಲಿಸಿದರೆ ಹೆಚ್ಚು ವೇಗದಲ್ಲಿ ಕುಸಿಯುತ್ತಿದೆ. ಕೇರಳ, ಜಮ್ಮು–ಕಾಶ್ಮೀರ ಮತ್ತು ಅಸ್ಸಾಂನಲ್ಲಿ ಮುಸ್ಲಿಂ ಸಮುದಾಯದ ಫಲವಂತಿಕೆ ದರವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಭಾಗವತ್ ಅವರು ಮತಾಂತರ ಮತ್ತು ಒಳನುಸುಳುವಿಕೆ ಕುರಿತು ಎತ್ತಿರುವ ಪ್ರಶ್ನೆಗಳಿಗೆ ಕೂಡ ಸಮರ್ಥನೆ ಇಲ್ಲ. ಹಿಂದೂಗಳನ್ನು ಈ ದೇಶದಲ್ಲಿ ಅಲ್ಪಸಂಖ್ಯಾತರನ್ನಾಗಿಸಲು ಮುಸ್ಲಿಮರು ಯತ್ನಿಸುತ್ತಿದ್ದಾರೆ ಎಂಬುದನ್ನು ಸಂಘ ಮತ್ತು ಅದರ ಜೊತೆಗೆ ಇರುವವರು ಪ್ರತಿಪಾದಿಸುತ್ತಾರೆ. ಇದು ಸುಳ್ಳು ಮಾತ್ರವಲ್ಲ, ರಾಜಕೀಯ ಮತ್ತು ಕೋಮುವಾದಿ ಯೋಜನೆಯನ್ನು ಹೊಂದಿರುವ ಕುಟಿಲ ತಂತ್ರ. 'ಜನಸಂಖ್ಯಾ ಅಸಮತೋಲನ' ಮತ್ತು ಅದರ ಪರಿಣಾಮಗಳ ಕುರಿತು ಮಾತನಾಡುವ ಮೂಲಕ ಇದನ್ನು ಮತ್ತೆ ಮುನ್ನೆಲೆಗೆ ತರಲು ಭಾಗವತ್ ಯತ್ನಿಸಿದ್ದಾರೆ.

## ದಿನದ ಟ್ವೀಟ್

### ಭಾರಿ ವಹಿವಾಟು



ಭಾರತದ ವಿವಾಹೋದ್ಯಮದ ಮೌಲ್ಯವು 13 ಸಾವಿರ ಕೋಟಿ ಡಾಲರ್‌ಗಿಂತಲೂ ಹೆಚ್ಚು. ದೇಶದಲ್ಲಿ ಇಂಧನ, ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳ ನಂತರದ ನಾಲ್ಕನೇ ಅತಿದೊಡ್ಡ ಉದ್ಯಮ ಇದು. ಹಲವಾರು ಕುಟುಂಬಗಳಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕಿಂತಲೂ ಮದುವೆಗೇ ಜನ ಹೆಚ್ಚು ಹಣ ಖರ್ಚು ಮಾಡುತ್ತಾರೆ. ಇದಕ್ಕೆ ಕಾರಣ ಏನಿರಬಹುದು?

**ರವಿಸುತಾಂಜನಿ,** ಉದ್ಯಮಿ

## ಕಿಡಿನುಡಿ




ಮುಸ್ಲಿಮರಿಗೆ ಆರ್ಥಿಕ ಬಹಿಷ್ಕಾರ ಹಾಕುವಂತೆ ಬಿಜೆಪಿ ಸಂಸದ ಪರ್ವೇಶ್ ವರ್ಮಾ ಅವರು ದೆಹಲಿಯ ಜನರಿಗೆ ಕರೆ ಕೊಟ್ಟಿದ್ದಾರೆ. ಸಮುದಾಯಗಳ ನಡುವೆ ದ್ವೇಷವನ್ನು ಪ್ರಚೋದಿಸಿದ್ದಕ್ಕಾಗಿ ಇವರ ವಿರುದ್ಧ ದೆಹಲಿ ಪೊಲೀಸರು ಕ್ರಮ ಕೈಗೊಳ್ಳುವರೇ? ಪ್ರಧಾನಿ ಮೋದಿ ಅವರು ಇವರ ಮಾತನ್ನು ಮನ್ನಿಸುವರೇ? ಬಿಜೆಪಿಯವರು ಹೇಳುವ 'ಸಬ್ಕಾ ಸಾಥ್ ಸಬ್ಕಾ ವಿಕಾಸ್' ಮಾತಿನ ಅರ್ಥ ಇದೇನಾ?! ನರೇಂದ್ರ ಮೋದಿ ಅವರೇ ಮಾತನಾಡಿ.

**ಡಾ. ಶಮಾ ಮೊಹಮ್ಮದ್,** ರಾಷ್ಟ್ರೀಯ ವಕ್ತಾರೆ, ಕಾಂಗ್ರೆಸ್ ಪಕ್ಷ

## 25 ವರ್ಷಗಳ ಹಿಂದೆ

ಶುಕ್ರವಾರ, 10-10-1997

**● ಪಾಕ್ ಬೆಂಬಲಿತ ಉಗ್ರರ ಸಂಘಟನೆ ನಿಷೇಧಕ್ಕೆ ಭಾರತ ಸ್ವಾಗತ**

**ನವದೆಹಲಿ, ಅಕ್ಟೋಬರ್ 9 (ಪಿಟಿಐ, ಯುಎನ್‌ಐ)**– ಪಾಕಿಸ್ತಾನದಲ್ಲಿ ನೆಲೆ ಇರುವ ಹರ್ಕತ್-ಉಲ್ ಅನ್ಸಾರ್ ಉಗ್ರಗಾಮಿ ಸಂಘಟನೆಯನ್ನು ಅಮೆರಿಕವು ನಿಷೇಧಿಸಿದ್ದನ್ನು ಭಾರತ ಇಂದು ಸ್ವಾಗತಿಸಿ, ಇದರಿಂದ ಪಾಕಿಸ್ತಾನವು ಉಗ್ರಗಾಮಿ ತರಬೇತಿ ಶಿಬಿರಗಳನ್ನು ಇನ್ನಾದರೂ ನಿರ್ಮೂಲನಗೊಳಿಸಲಿ ಎಂದು ಆಶಿಸಿದೆ.

ಹರ್ಕತ್-ಉಲ್ ಅನ್ಸಾರ್ ಭಯೋತ್ಪಾದಕ ಸಂಘಟನೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಚಟುವಟಿಕೆ ನಡೆಸುತ್ತಿದ್ದು, ಈ ವಾಸ್ತವ ಸ್ಥಿತಿಯನ್ನು ಅಮೆರಿಕ ಸರಿಯಾಗಿ ಗ್ರಹಿಸಿದೆ ಎಂದು ವಿದೇಶಾಂಗ ಕಚೇರಿ ವಕ್ತಾರರು ಬಣ್ಣಿಸಿದ್ದಾರೆ. ಭಾರತ ಹಾಗೂ ಇತರೆಡೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರ ಉಗ್ರಗಾಮಿ ಸಂಘಟನೆಗಳ ಬಗ್ಗೆಯೂ ಅಮೆರಿಕ ಇಂಥದೇ ನಿಲುವನ್ನು ತಾಳುವುದೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

**● ಮತ್ತೆ ವೀರಪ್ಪನ್ ಅಟ್ಟಹಾಸ**

**ಬೆಂಗಳೂರು, ಅಕ್ಟೋಬರ್ 9**– ಕುಖ್ಯಾತ ನರಹಂತಕ ಹಾಗೂ ದಂತಚೋರ ವೀರಪ್ಪನ್ ಮತ್ತೆ ಅಟ್ಟಹಾಸವನ್ನು ಮೆರೆದಿದ್ದು, ಬಂಡೀಪುರ ಅರಣ್ಯ ಪ್ರದೇಶದಿಂದ ಛಾಯಾಚಿತ್ರಗಾರರಾದ ಕೃಪಾಕರ ಹಾಗೂ ಸೇನಾನಿ ಸೇರಿದಂತೆ 26 ಜನರನ್ನು ಅಪಹರಿಸಿ, ನಂತರ 20 ಮಂದಿಯನ್ನು ಬಿಡುಗಡೆ ಮಾಡಿ, ಆರು ಜನರನ್ನು ತನ್ನ ವಶದಲ್ಲಿ ಇಟ್ಟುಕೊಂಡಿದ್ದಾನೆ.

ಅರಣ್ಯ ಇಲಾಖೆಯ ಅಧಿಕಾರಿಗಳು ತಕ್ಷಣ ಈ ವಿಷಯವನ್ನು ಪೊಲೀಸರಿಗೆ ತಿಳಿಸಿದರು. ವಿಶೇಷ ಕಾರ್ಯಾಚರಣೆ ಪಡೆಯ ಮುಖ್ಯಸ್ಥರೂ ಅದೇ ಪ್ರದೇಶದಲ್ಲಿದ್ದರು ಎನ್ನಲಾಗಿದೆ. ತಕ್ಷಣ ವೀರಪ್ಪನ್ ತಂಡಕ್ಕಾಗಿ ಶೋಧನೆಯನ್ನು ನಡೆಸಲಾಯಿತಾದರೂ ಪ್ರಯೋಜನವಾಗಲಿಲ್ಲ.

## 50 ವರ್ಷಗಳ ಹಿಂದೆ

ಮಂಗಳವಾರ, 10-10-1972

**● ಭಾರತದ ಘನತೆ ತಗ್ಗಿಸಲು ವಿದೇಶಿ ರಾಷ್ಟ್ರಗಳ ಪ್ರಯತ್ನ: ಕಾಂಗ್ರೆಸ್ ಅಧ್ಯಕ್ಷರ ಆರೋಪ**

**ಇಂದೂಚಾಚಾನಗರ, ಅಕ್ಟೋಬರ್ 9**– ಭಾರತದ ಈಗಿನ ಆರ್ಥಿಕ ತೊಂದರೆಗಳ ದುರುಪಯೋಗ ಮಾಡಿಕೊಂಡು, ಬಾಂಗ್ಲಾದೇಶದ ವಿಮೋಚನೆ ಮಾಡಿದ ಬಳಿಕ, ಭಾರತ ಗಳಿಸಿರುವ ಘನತೆಯನ್ನು ಕುಗ್ಗಿಸಲು 'ಕೆಲವು ವಿದೇಶಿ ರಾಷ್ಟ್ರಗಳು' ಪ್ರಯತ್ನಿಸುತ್ತಿವೆ ಎಂದು ಕಾಂಗ್ರೆಸ್ ಅಧ್ಯಕ್ಷ ಡಾ. ಶಂಕರ ದಯಾಳ್ ಶರ್ಮಾ ಅವರು ಇಂದು ಆರೋಪಿಸಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಆರಂಭಿಕ ಭಾಷಣ ಮಾಡುತ್ತಿದ್ದ ಡಾ. ಶರ್ಮಾ ಅವರು, 'ಬಾಂಗ್ಲಾದೇಶದ ಜನತೆಯ ಉದ್ಧಾರದಲ್ಲಿ ಭಾರತ ವಹಿಸಿದ ಪಾತ್ರವು ಈ ವಿದೇಶಿ ರಾಷ್ಟ್ರಗಳಿಗೆ ಹಿಡಿಸಲಿಲ್ಲ. ಈಗ ಅವು ಭಾರತಕ್ಕೆ ಪಾಠ ಕಲಿಸಲು ಬೆದರಿಕೆ ಹಾಕುತ್ತಿವೆ' ಎಂದರು.

**● ಧಾನ್ಯ ಸಗಟು ವ್ಯಾಪಾರ, ಸಾರ್ವಜನಿಕ ಹಂಚಿಕೆ ಸರ್ಕಾರದ ವಶಕ್ಕೆ**

**ಇಂದೂಚಾಚಾನಗರ, ಅಕ್ಟೋಬರ್ 9**– ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ವಹಿಸಿಕೊಳ್ಳುವಂತೆ ಮತ್ತು ಅಗತ್ಯ ವಸ್ತುಗಳ ಸಾರ್ವಜನಿಕ ಹಂಚಿಕೆ ಕಾರ್ಯವನ್ನು ಕೈಗೊಳ್ಳುವಂತೆ ಸರ್ಕಾರವನ್ನು ಕೋರುವ ನಿರ್ಣಯವನ್ನು ಎ.ಐ.ಸಿ.ಸಿ. ಅಧಿವೇಶನವು ಇಂದು ಸರ್ವಾನುಮತದಿಂದ ಅಂಗೀಕರಿಸಿತು.

ಹುಲಿ ದಾಳಿಯಿಂದ ಗಂಡನನ್ನು ಕಳೆದುಕೊಂಡ ಸಂತ್ರಸ್ತೆಯರ ಬದುಕಿಗೆ ಬೇಕು ಆಸರೆ

# ಸುಂದರಬನದ ಸಂತ್ರಸ್ತೆಯರ ಗೋಳು



ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಈ ತಿಂಗಳ ಮೊದಲ ವಾರ ದೇಶದಾದ್ಯಂತ ವನ್ಯಜೀವಿ ಸಪ್ತಾಹದ ಸಭೆ– ಸಮಾರಂಭಗಳು ಭರದಿಂದ ನಡೆಯುತ್ತಿದ್ದ ಸಮಯದಲ್ಲೇ ಪಶ್ಚಿಮ ಬಂಗಾಳದ ಹಲವಾರು ಸ್ವಯಂಸೇವಾ ಸಂಘಟನೆಗಳು, ಸುಂದರಬನದಲ್ಲಿ ಹುಲಿಯ ದಾಳಿಗೆ ತುತ್ತಾಗಿ ಮೃತಪಟ್ಟವರ ಪತ್ನಿಯರ ಹಸಿವು, ಬಡತನದ ತೀವ್ರ ಸಂಕಷ್ಟದ ಬದುಕಿನತ್ತ ಸಮಾಜದ ಗಮನ ಸೆಳೆದಿವೆ.


ವಿಶ್ವ ಪರಂಪರೆಯ ತಾಣವಾದ ಸುಂದರಬನವು ಗಂಗಾ, ಬ್ರಹ್ಮಪುತ್ರಾ ಮತ್ತು ಬಾಂಗ್ಲಾದೇಶದ ಮೇಘನಾ ನದಿಯು ಬಂಗಾಳ ಕೊಲ್ಲಿಗೆ ಅನಾದಿ ಕಾಲದಿಂದ ತಂದು ಸೇರಿಸುತ್ತಿರುವ ಮೆಕ್ಕಲು ಮಣ್ಣಿನಿಂದಾದ, ಪ್ರಪಂಚದ ಅತಿ ದೊಡ್ಡ ಮುಖಜ ಭೂಮಿ. ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶದಲ್ಲಿ ಹಬ್ಬಿರುವ ಸುಂದರಬನ, ಪ್ರಪಂಚದಲ್ಲಿಯೇ ಅತಿ ವಿಸ್ತಾರವಾದ ಕಾಂಡ್ಲಾ ಕಾಡುಗಳಿಗೆ (ಮ್ಯಾಂಗ್ರೋವ್ ಫಾರೆಸ್ಟ್) ಹೆಸರಾಗಿದೆ. ನಮ್ಮ ದೇಶದ ಆರು ಅತಿ ದೊಡ್ಡ ಹುಲಿ ಸಂರಕ್ಷಿತ ಪ್ರದೇಶಗಳು ಮತ್ತು ರಾಷ್ಟ್ರೀಯ ಉದ್ಯಾನಗಳಲ್ಲಿ ಸುಂದರಬನವೂ ಒಂದು.

ಪಶ್ಚಿಮ ಬಂಗಾಳದಲ್ಲಿ 4,200 ಚದರ ಕಿ.ಮೀ. ವಿಸ್ತೀರ್ಣ ಹೊಂದಿರುವ ಸುಂದರಬನವು 104 ದ್ವೀಪಗಳ ಸಮೂಹ. ಇದರಲ್ಲಿ 54 ದ್ವೀಪಗಳಲ್ಲಿ ಜನವಸತಿಯಿದೆ. ಕೃಷಿ, ಮೀನುಗಾರಿಕೆ, ಏಡಿಗಳನ್ನು ಹಿಡಿಯುವುದು, ಜೇನು, ಉರುವಲು ಸೌದೆ, ನಾಟಾ ಸಂಗ್ರಹದಂತಹವು ಇಲ್ಲಿನ ಜನರ ಜೀವನೋಪಾಯದ ಮುಖ್ಯ ಮಾರ್ಗಗಳು. ಈ ದ್ವೀಪಗಳ ಸುಮಾರು 45 ಲಕ್ಷ ನಿವಾಸಿಗಳಲ್ಲಿ ಅಂದಾಜು 5 ಲಕ್ಷ ಜನ ತಮ್ಮ ಬದುಕಿಗಾಗಿ ನೇರವಾಗಿ ಕಾಂಡ್ಲಾ ಕಾಡುಗಳನ್ನು ಅವಲಂಬಿಸಿದ್ದಾರೆ. ಸುಂದರಬನದ ಈ ಅರಣ್ಯ ಪ್ರದೇಶವು ಹುಲಿಗಳ (ರಾಯಲ್ ಬೆಂಗಾಲ್ ಟೈಗರ್) ಸಹಜ ಆವಾಸವೂ ಹೌದು. ಹುಲಿ ಸಂರಕ್ಷಣಾ ಯೋಜನೆಯ ಕ್ರಮಗಳಿಂದಾಗಿ ಹುಲಿಗಳ ಸಂಖ್ಯೆಯೂ ಇಲ್ಲಿ ಹೆಚ್ಚುತ್ತಿದೆ. 2010ರ ಗಣತಿಯಲ್ಲಿ 70 ಹುಲಿಗಳಿದ್ದು, ಈಗ 96 ಹುಲಿಗಳಿವೆಯೆಂದು ಪಶ್ಚಿಮ ಬಂಗಾಳದ ಅರಣ್ಯ ಇಲಾಖೆ ತಿಳಿಸಿದೆ.

ಈ ಪರಿಸ್ಥಿತಿಯಲ್ಲಿ, ಜೀವನೋಪಾಯಕ್ಕಾಗಿ ಕಾಂಡ್ಲಾ ಕಾಡುಗಳನ್ನು ಪ್ರವೇಶಿಸುವ ಸ್ಥಳೀಯರು, ಹುಲಿಯ ಆಕ್ರಮಣದಿಂದ ಪ್ರಾಣ ಬಿಟ್ಟಿರುವ ನೂರಾರು ಪ್ರಕರಣಗಳಿವೆ. ಮೀನು ಹಿಡಿಯುವ ಸಣ್ಣ ದೋಣಿಗಳ ಮೇಲೆ ಆಕ್ರಮಣ ಮಾಡಿ, ಜನರನ್ನು ಕೊಂದಿರುವ ನಿದರ್ಶನಗಳಿವೆ. ಇಂಥ ಸಂಘರ್ಷದಲ್ಲಿ ಗಂಡಂದಿರನ್ನು ಕಳೆದುಕೊಂಡ ಅಂದಾಜು 4,000 ಸಂತ್ರಸ್ತೆಯರು ಸುಂದರಬನದ ದ್ವೀಪಗಳಲ್ಲಿ ಇದ್ದಾರೆ ಎಂದು ಕೋಲ್ಕತ್ತದ ನ್ಯಾಷನಲ್ ಫಿಶ್ ವರ್ಕರ್ಸ್ ಫೋರಮ್‌ನ ಕಾರ್ಯದರ್ಶಿ ಪ್ರದೀಪ್ ಚಟರ್ಜಿ ತಿಳಿಸುತ್ತಾರೆ. ದಕ್ಷಿಣ ಬಂಗಾ ಮತ್ಸ್ಯಜೀವಿ ವೇದಿಕೆ, ಹುಲಿ ವಿಧವಾ ಕಲ್ಯಾಣ ಸಂಘ, ಸುಂದರಬನ ಗ್ರಾಮೀಣ ಅಭಿವೃದ್ಧಿ ಸಂಘಗಳು ಇದನ್ನು ಖಚಿತಪಡಿಸುತ್ತವೆ. ಸುಂದರಬನ ಹುಲಿ ಸಂರಕ್ಷಿತ ಪ್ರದೇಶದ ಕೇಂದ್ರಭಾಗದ (ಕೋರ್ ಏರಿಯಾ) ವಿಸ್ತೀರ್ಣ 1,700 ಚದರ ಕಿ.ಮೀ. ಮಾನವನ ಯಾವುದೇ ಚಟುವಟಿಕೆಗೆ ಇಲ್ಲಿ ಅವಕಾಶವಿಲ್ಲ. ಕೇಂದ್ರ ವಲಯವನ್ನು ಸುತ್ತುವರಿದಿರುವ ಕಾಪು ವಲಯದಲ್ಲಿ (ಬಫರ್ ಜೋನ್) ಮೀನು, ಏಡಿಗಳನ್ನು ಹಿಡಿಯುವುದು, ಜೇನು, ಸೌದೆ, ನಾಟಾಗಳ ಸಂಗ್ರಹಣೆಗೆ ಸೀಮಿತ ಅವಕಾಶವುಂಟು. ಯಾಂತ್ರೀಕೃತ ದೋಣಿಗಳಿಂದ ನಡೆಯುತ್ತಿರುವ ಮೀನುಗಾರಿಕೆ, ಕಲುಷಿತಗೊಳ್ಳುತ್ತಿರುವ ನೀರು, ನೀರಿನಲ್ಲಿ ಹೆಚ್ಚುತ್ತಿರುವ ಲವಣದ ಅಂಶ, ವಾಯುಗುಣ ಬದಲಾವಣೆಗಳ ಪರಿಣಾಮವಾಗಿ ಮೀನು, ಏಡಿಗಳ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಗಿರುವುದರಿಂದ, ಸ್ಥಳೀಯರು ಬೇರೆ ದಾರಿ ಕಾಣದೆ ಅಕ್ರಮವಾಗಿ ಕೇಂದ್ರ ವಲಯದೊಳಗೆ ಪ್ರವೇಶಿಸುತ್ತಾರೆ. ಹುಲಿಗಳಿಂದ ಆಕ್ರಮಣಕ್ಕೆ ಒಳಗಾಗುತ್ತಾರೆ.

ಇಲ್ಲಿ ಮತ್ತೊಂದು ಸಮಸ್ಯೆಯೂ ಎದುರಾಗುತ್ತದೆ. ನೆಲದ ಮೇಲಿನ ಅರಣ್ಯದಲ್ಲಿ ಕೇಂದ್ರ ಮತ್ತು ಕಾಪು ವಲಯಗಳ ಗಡಿಯನ್ನು ಗುರುತಿಸಬಹುದು. ಆದರೆ ದ್ವೀಪಗಳ ನಡುವಿನ ನೀರಿನ ಮೇಲೆ ಇದು ತುಂಬ ಕಷ್ಟ. ಇದು ಗೊಂದಲಕ್ಕೆ ಕಾರಣವಾಗುತ್ತದೆ. ಇದರೊಂದಿಗೆ ಪ್ರವಾಸಿಗರನ್ನು ಹೊತ್ತ ಯಾಂತ್ರೀಕೃತ ದೋಣಿಗಳು ಯಾವುದೇ ಅಡೆತಡೆಯಿಲ್ಲದೆ ಹುಲಿ ಸಂರಕ್ಷಣಾ ಪ್ರದೇಶದ ಕೇಂದ್ರ ವಲಯದಲ್ಲಿ ಸಂಚರಿಸುತ್ತವೆ ಎಂಬುದು ಸ್ಥಳೀಯರ ದೂರು. ಹುಲಿಗಳಿಂದ ಸಾವಿಗೀಡಾದವರ ಮನೆಯವರಿಗೆ ಸರ್ಕಾರದ ಕಡೆಯಿಂದ ₹ 5 ಲಕ್ಷದವರೆಗೂ ಪರಿಹಾರ ನೀಡುವ ಅವಕಾಶವಿದೆ. ಆದರೆ ಇದನ್ನು ಪಡೆಯಲು ಅರ್ಜಿ ಸಲ್ಲಿಸುವವರ ಸಂಖ್ಯೆ ಬಹು ಕಡಿಮೆ. ಉದಾಹರಣೆಗೆ, 2010- 16ರ ನಡುವೆ 100 ಮೀನುಗಾರರು ಹುಲಿಯ ಆಕ್ರಮಣದಿಂದ ಸತ್ತಿದ್ದರೂ ಪರಿಹಾರ ಕೋರಿ ಅರ್ಜಿ ಸಲ್ಲಿಸಿದವರು 5 ಮಂದಿ ಮಾತ್ರ. ಪರಿಹಾರ ದೊರೆತದ್ದು 3 ಕುಟುಂಬಗಳಿಗಷ್ಟೇ. ಇದೇ ಪ್ರವೃತ್ತಿ ಈಗಲೂ ಮುಂದುವರಿದಿದೆ. ಈ ವಿಚಿತ್ರ ಪರಿಸ್ಥಿತಿಗೆ ಹಲವಾರು ಕಾರಣಗಳಿವೆ.

ಹುಲಿ ಸಂರಕ್ಷಣಾ ಪ್ರದೇಶದ ಕೇಂದ್ರ ಭಾಗದಲ್ಲಿ ಪ್ರವೇಶವೇ ನಿಷಿದ್ಧವಾದ್ದರಿಂದ ಅಲ್ಲಿ ಹುಲಿಯಿಂದ ಸಾವಿಗೀಡಾದರೆ ಯಾವ ಪರಿಹಾರವೂ ದೊರೆಯುವುದಿಲ್ಲ. ಕಾಪು ವಲಯದಲ್ಲಿ ಸತ್ತರೆ ಪರಿಹಾರ ಪಡೆಯಲು ಪೊಲೀಸರು ಮತ್ತು ಅರಣ್ಯ ಇಲಾಖೆಯಿಂದ ಪಡೆದ ಹಲವಾರು ದಾಖಲೆಗಳನ್ನು ಸಲ್ಲಿಸಬೇಕು. ಇದರಲ್ಲಿ ಬಹು ಮುಖ್ಯವಾದದ್ದು 'ಬೋಟ್ ಲೈಸೆನ್ಸ್ ಸರ್ಟಿಫಿಕೇಟ್' (ಬಿಎಲ್‌ಸಿ) ಎಂಬ ಪರವಾನಗಿ. ಇದನ್ನು ಪಡೆಯದಿದ್ದರೆ ಕಾಪು ವಲಯದಲ್ಲಿ ಮೀನು, ಏಡಿಗಳನ್ನು ಹಿಡಿಯುವಂತಿಲ್ಲ. ಜೇನು, ಸೌದೆಗಳನ್ನು ಸಂಗ್ರಹಿಸುವಂತಿಲ್ಲ. ಈ ಚಟುವಟಿಕೆಗಳಿಗೆ ಕಾಪು ವಲಯದಲ್ಲಿ ಇರುವ ಅವಕಾಶಗಳು ಸೀಮಿತವಾದ್ದರಿಂದ, ಅರಣ್ಯ ಇಲಾಖೆ ನೀಡುವ ಬಿಎಲ್‌ಸಿಗಳ ಸಂಖ್ಯೆಯೂ ಕಡಿಮೆ. ಇದುವರೆವಿಗೂ ಸುಮಾರು 900 ಬಿಎಲ್‌ಸಿಗಳನ್ನು ಮಾತ್ರ ನೀಡಲಾಗಿದೆ.



ಈ ಪರವಾನಗಿ ದೊರೆಯದಿರುವ ಕಾರಣ, ಜೀವನೋಪಾಯಕ್ಕಾಗಿ ಅಕ್ರಮವಾಗಿಯೇ ಕಾಪು ಮತ್ತು ಕೇಂದ್ರ ವಲಯಗಳನ್ನು ಪ್ರವೇಶಿಸುತ್ತಾರೆ. ಹುಲಿಗಳ ಆಕ್ರಮಣಕ್ಕೆ ಈಡಾಗಿ ಸಾಯುತ್ತಾರೆ. ಬಿಎಲ್‌ಸಿ ಇಲ್ಲದಿರುವುದರಿಂದ ಅಂತಹವರು ಪರಿಹಾರಕ್ಕೆ ಅರ್ಜಿ ಸಲ್ಲಿಸುವುದೇ ಇಲ್ಲ. ಬಿಎಲ್‌ಸಿ ಇದ್ದರೂ ಪರಿಹಾರ ಸುಲಭವಾಗಿ ದೊರೆಯುವುದಿಲ್ಲ. ಸಾವು ಹುಲಿಯಿಂದಲೇ ಆಗಿದೆ ಎಂಬುದನ್ನು ಸಾಬೀತುಪಡಿಸಬೇಕು. ಆಕ್ರಮಣ ನಡೆದು, ವ್ಯಕ್ತಿ ಸತ್ತದ್ದು ಕಾಪು ವಲಯದಲ್ಲೇ ಎಂಬುದು ರುಜುವಾತಾಗಬೇಕು. ಈ ಕೆಲಸಗಳಿಗೆ ಅರಣ್ಯ ಮತ್ತು ಪೊಲೀಸ್ ಇಲಾಖೆಗಳ ನೆರವು ಬೇಕು. ಗಂಡನ ಸಾವಿನಿಂದ ಮಾನಸಿಕವಾಗಿ ಕುಗ್ಗಿಹೋಗಿ, ದಿಕ್ಕೇ ತೋಚದ ಪರಿಸ್ಥಿತಿಯಲ್ಲಿರುವ ಸಂತ್ರಸ್ತೆಯರು, ಸರ್ಕಾರಿ ಕಚೇರಿಗಳಿಗೆ ಅಲೆದಾಡುವ ಗೋಳೇ ಬೇಡ ಎಂದು ದೂರ ಉಳಿಯುತ್ತಾರೆ.

ಪ್ರದೀಪ್ ಚಟರ್ಜಿ ಖಾರವಾಗಿ ಹೇಳುವಂತೆ, ಈ ಸಂತ್ರಸ್ತೆಯರ ಮುಂದಿರುವ ದಾರಿ ಎರಡು ಮಾತ್ರ- ಬದುಕುವ ದಾರಿಯಿಲ್ಲದೆ ಉಪವಾಸದಿಂದ ಸಾಯುವುದು ಅಥವಾ ಅಪಾಯವನ್ನು ಲೆಕ್ಕಿಸದೆ ಅರಣ್ಯದೊಳಗೆ ಹೋಗಿ ಕಡೆಗೊಮ್ಮೆ ಹುಲಿಯಿಂದ ಸಾಯುವುದು.

ಸುಂದರಬನದ ಸಂತ್ರಸ್ತೆಯರಿಗೆ ಜೀವನೋಪಾಯದ ಪರ್ಯಾಯ ಅವಕಾಶಗಳನ್ನು ಕಲ್ಪಿಸಿಕೊಡುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿರುವುದು ನಿಜ. ಕೃಷಿ, ಹೊಲಿಗೆ, ಕ್ಯಾಂಡಲ್ ತಯಾರಿಕೆ, ಜೇನು ಸಾಕಣೆ, ಚರ್ಮದ ಚೀಲ, ಬೆಲ್ಟ್ ತಯಾರಿಸಲು ಬೇಕಾದ ತರಬೇತಿ ಶಿಬಿರಗಳನ್ನು ಏರ್ಪಡಿಸುತ್ತಿದೆ. ಅರಣ್ಯ ಇಲಾಖೆಯ ನರ್ಸರಿಗಳಲ್ಲೂ ಸಂತ್ರಸ್ತೆಯರು ಕೆಲಸ ಮಾಡುತ್ತಾರೆ. ಸ್ವಸಹಾಯ ಸಂಘಗಳಲ್ಲೂ ಅವಕಾಶವಿದೆ. ಸುಂದರಬನದ ವಿಧವೆಯರ ಕಲ್ಯಾಣ ಸಂಘದ ಅಧ್ಯಕ್ಷ ಜಾನಾ ಅವರ ಅಭಿಪ್ರಾಯದಂತೆ, ಈ ಎಲ್ಲವೂ ತಾತ್ಕಾಲಿಕವಾದ ಅಲ್ಪಕಾಲಿಕ ಕ್ರಮಗಳೇ ವಿನಾ ಸಂತ್ರಸ್ತೆಯರಿಗೆ, ಅವರ ಮಕ್ಕಳಿಗೆ ಭವಿಷ್ಯವನ್ನು ರೂಪಿಸಿಕೊಳ್ಳುವಂತಹ ಸಾಮರ್ಥ್ಯವನ್ನು ನೀಡುವುದಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ, ಸುಂದರಬನವನ್ನು ಅತ್ಯಾಕರ್ಷಕವಾದ ಪ್ರವಾಸಿ ತಾಣವನ್ನಾಗಿ ಬಿಂಬಿಸಿ, ವಿದೇಶಿ ಪ್ರವಾಸಿಗರನ್ನು ಸೆಳೆಯಲು ಪ್ರಯತ್ನಿಸುತ್ತಿರುವ ಸರ್ಕಾರವು ಆ ಹಣದ ಅಲ್ಪ ಭಾಗವನ್ನಾದರೂ ಈ ಸಂತ್ರಸ್ತೆಯರ ಸಂಕಷ್ಟವನ್ನು ನಿವಾರಿಸಲು ಬಳಸಬೇಕೆನ್ನುವುದು ಸ್ವಯಂಸೇವಾ ಸಂಘಟನೆಗಳ ಒತ್ತಾಯ.

ನಿಶ್ಚಿತ ಆದಾಯ, ಬದುಕಿಗೊಂದು ಭದ್ರತೆ, ಆಹಾರ, ವಸತಿ, ಆರೋಗ್ಯ, ಶಿಕ್ಷಣದಂತಹ ಎಲ್ಲ ಮೂಲ ಸೌಲಭ್ಯಗಳಿಂದ ವಂಚಿತರಾಗಿರುವ ಸಂತ್ರಸ್ತೆಯರ ದಾರುಣ ಬದುಕನ್ನು, ದಕ್ಷಿಣ್‌ಬಂಗಾ ಮತ್ಸ್ಯಜೀವಿ ಫೋರಮ್, ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮೂಲಕ ಕಲ್ಕತ್ತ ಹೈಕೋರ್ಟ್ ಗಮನಕ್ಕೆ ತಂದಿದೆ. ನ್ಯಾಯಾಲಯದ ಮಧ್ಯಪ್ರವೇಶದಿಂದ, ವನ್ಯಜೀವಿಗಳಿಗೆ ತೊಂದರೆಯಾಗದಂತೆ, ಸಂತ್ರಸ್ತೆಯರ ಬದುಕು ಸಹ್ಯವಾಗಬೇಕೆಂಬುದು ಎಲ್ಲರ ಆಶಯ.

## ಚುರುಮುರಿ



### ಗಾಳಿಯಲ್ಲಿ ಗುಂಡು

• ಸುಮಂಗಲಾ

**'ನನಗೊಂದು** ಪಿಸ್ತೂಲ್ ಕೊಡಿಸು' ಎಂದು ಬೆಕ್ಕಣ್ಣ ಪೀಡಿಸುತ್ತಿತ್ತು. ಕೇಪು ಪಟಾಕಿ ಹೊಡೆಯುವ ಪಿಸ್ತೂಲ್ ಕೇಳುತ್ತಿದೆ ಎಂದುಕೊಂಡೆ.

'ಅಲ್ಲಲೇ... ದೀಪಾವಳಿ ಇನ್ನಾ ದೂರ ಐತಿ. ಈಗ್ಲೇ ಪಿಸ್ತೂಲು ಯಾಕೆ...' ಎಂದು ಬೈದ್ಯೆ.

'ಆ ಪಿಸ್ತೂಲ್ ಅಲ್ಲ. ಖರೇ ಖರೇ ಪಿಸ್ತೂಲು. ಆಯುಧಪೂಜೆ ದಿನ ಸುಮ್ಮನೇ ಚಾಕುಗೀಕು ಪೂಜೆ ಮಾಡಬ್ಯಾಡ್ರಿ, ಶಸ್ತ್ರಗಳನ್ನು ಪೂಜೆ ಮಾಡ್ರಿ, ಮತ್ತ ಎಲ್ಲಾ ಥರದ ಶಸ್ತ್ರಗಳನ್ನು ಬಳಸಾಕೂ ಕಲೀರಿ ಅಂತ ವಿಹಿಂಪ ಕಾರ್ಯ-ದರ್ಶಿಯೊಬ್ಬರು ಹೇಳ್ಯಾರ' ಸುದ್ದಿಯನ್ನು ತೋರಿಸಿತು.

'ಈಗ ಆಯುಧಪೂಜೆ ಮುಗೀತಲ್ಲ, ಮುಂದಿನ ವರ್ಸ ನೋಡೂಣೇಳು' ಎಂದು ಬಾಯಿ ಮುಚ್ಚಿಸಿದೆ. 'ಈಶೂ ಮಾಮ 'ನನ್ನೂ ಆಟಕ್ಕೆ ಸೇರಿಸಿಕೊಳ್ರೋ' ಅಂತ ಎಷ್ಟು ಕೇಳಿಕೆಂಡ್ರೂ ಮುಂದಿನ ಸಲ ಚುನಾವಣೆ ಮುಗಿದ ಮ್ಯಾಗೆ ನೋಡೂಣೇಳು ಅಂತ ಕಮಲಕ್ಕನ ಮನಿವಳಗಿರೋ ದೊಡ್ಡೋರೆಲ್ಲ ಹೇಳ್ಯಾರಂತ... ನೀನೂ ಹಂಗ ಕೇಳಿದ್ದಕ್ಕೆಲ್ಲ ಮುಂದಿನ ವರ್ಸ ಅಂತಿ' ಎಂದು ಮುಖವುಬ್ಬಿಸಿತು.

'ಅದಕ್ಕ ಇದಕ್ಕ ವ್ಯತ್ಯಾಸ ಐತಲೇ' ಸಮಾಧಾನಿಸಲು ನೋಡಿದೆ.

'ಅದನ್ನೇ ಈಶೂ ಮಾಮ ಹೇಳ್ಯಾನ. ಬ್ಯಾರೆ ಥರದ ಕೇಸುಗಳಿಗೆ, ತನ್ನ ಮ್ಯಾಗೆ ಬಂದಿದ್ದ ಕೇಸಿಗೆ ವ್ಯತ್ಯಾಸ ಐತಿ, ಈಗ ಕೋರ್ಟ್ ತನಗ ಕ್ಲೀನ್ ಚಿಟ್ ಕೊಟ್ಟೈತಿ ಅಂದಾನ'.

'ಭಾರತ್ ಜೋಡೊ ಯಾತ್ರೆಯನ್ನ ಮುರಿಯೂದು ಹೆಂಗೆ ಅನ್ನೂ ಚಿಂತಿವಳಗ ಕಮಲಕ್ಕನ ಮನಿ ದೊಡ್ಡೋರು ಇದ್ದರ, ನಿಮ್ಮ ಈಶೂ ಮಾಮಗ ಕುರ್ಚಿ ಚಿಂತಿ ಆಗ್ಯೈತಿ. ಅದಿರ್ಲಿ, ಸುದ್ದಿ ಕೇಳೀಯೇನು... ಭೂತಾನ್ ದೇಶದಿಂದ ಕನಿಷ್ಠ ಆಮದು ಧಾರಣೇನೂ ಇಲ್ಲದೆ ಅಡಕೆ ಆಮದಿಗೆ ಹಸಿರು ನಿಶಾನೆ ತೋರಿಸ್ಯಾರ. ಹಿಂಗಾದರ ನಮ್ಮ ಅಡಕೆ ಬೆಳೆಗಾರರ ಗತಿಯೇನು? ಡಬಲ್ ಎಂಜಿನ್ ಸರ್ಕಾರ ಇದ್ರೂ ನಮ್ಮ ಬೆಳೆಗಾರರ ಬಾಳು ಮೂರಾಬಟ್ಟೆ'.

'ಅಡಕೆ ಆಮದು ಮಾಡಿಕೆಂಡು, ಗುಟ್ಕಾ, ಪಾನ್ ಮಸಾಲಾ ರಫ್ತು ಮಾಡೂಣು. ಅಡಕೆಯಲ್ಲಿ ಹೋದ ಮಾನ ಗುಟ್ಕಾದಾಗೆ ಬರತೈತೇಳು' ಬೆಕ್ಕಣ್ಣ ಪಿಸ್ತೂಲಿಲ್ಲದೆಯೇ ಗಾಳಿಯಲ್ಲಿ ಗುಂಡು ಹೊಡೆಯಿತು.

## ಸಂಗತ

# ಓ ಒಳಮನಸೆ... ಬಿಚ್ಚಿಡು ಆಂತರ್ಯ

ಮನೋರೋಗದ ಕುರಿತು ಸಮಾಜದಲ್ಲಿ ಇರುವ ಅಜ್ಞಾನ ಮತ್ತು ತಪ್ಪುಕಲ್ಪನೆಗಳಿಂದ ಮನೋರೋಗಿಗಳು ವೈಜ್ಞಾನಿಕ ಚಿಕಿತ್ಸೆಯಿಂದ ವಂಚಿತರಾಗುತ್ತಿದ್ದಾರೆ

• ಡಾ. ಕೆ.ಆರ್.ಶ್ರೀಧರ್


**ದೈಹಿಕ** ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ ಎಂಬುದನ್ನು ಮನಗಂಡ ವಿಶ್ವ ಆರೋಗ್ಯ ಸಂಸ್ಥೆಯು 1992ರಲ್ಲಿ 'ವಿಶ್ವ ಮಾನಸಿಕ ಆರೋಗ್ಯ ದಿನ'ವನ್ನು (ಅ. 10) ಮೊದಲ ಬಾರಿಗೆ ಆಚರಿಸಿತು. ಅಂದಿನಿಂದ ಪ್ರತಿವರ್ಷ ಈ ದಿನಾಚರಣೆ ನಡೆಯುತ್ತಿದೆಯಾದರೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ನಮ್ಮ ಸರ್ಕಾರಗಳು ಹಾಗೂ ಸಮಾಜ ಹೆಚ್ಚಿನ ಒತ್ತು ಕೊಟ್ಟಿಲ್ಲ.

ಕೊರೊನಾ ತೀವ್ರವಾಗಿದ್ದಾಗ ಕೆಲವರು ಸೋಂಕಿನ ಭಯದಿಂದ ಅಸುನೀಗಿದ್ದರೇ ವಿನಾ ಸೋಂಕಿನಿಂದಲ್ಲ. ಕೊರೊನಾ ಹಣೆಪಟ್ಟಿ ಕಟ್ಟಿಕೊಂಡು ಸಮಾಜದ ಅವಹೇಳನಕ್ಕೆ ಗುರಿಯಾಗಬೇಕಾಗುತ್ತದೆ ಎಂದು ಭಯಪಟ್ಟು ಆತ್ಮಹತ್ಯೆಗೆ ಶರಣಾದ ನಿದರ್ಶನಗಳಿವೆ. ಮಾನಸಿಕ ಆರೋಗ್ಯಕ್ಕೆ ಸಿಗಬೇಕಾದಷ್ಟು ಮನ್ನಣೆ ಸಿಕ್ಕಿಲ್ಲ ಎಂಬುದಕ್ಕೆ ಇವೆಲ್ಲ ಉದಾಹರಣೆಗಳು. ಈ ದಿಸೆಯಲ್ಲಿ ಈಗ ಒಂದು ಹೆಜ್ಜೆ ಮುಂದೆ ಹೋದಂತೆ ಭಾಸವಾಗುತ್ತಿದೆ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದರ ಮಹತ್ವವು ವಿಶ್ವದಾದ್ಯಂತ ಅಧಿಕಾರಸ್ಥರಿಗೆ ಮತ್ತು ನಾಗರಿಕರಿಗೆ ಮನವರಿಕೆ ಆದಂತಿದೆ. ಹೀಗಾಗಿ, ಈ ವರ್ಷದ ವಿಶ್ವ ಮಾನಸಿಕ ಆರೋಗ್ಯ ದಿನವನ್ನು 'ಜಗತ್ತಿನ ಸರ್ವರಿಗೂ ಮಾನಸಿಕ ಆರೋಗ್ಯ ಮತ್ತು ನೆಮ್ಮದಿಯನ್ನು ಖಾತರಿಪಡಿಸುವ' ದಿನವನ್ನಾಗಿ ಘೋಷಿಸಲಾಗಿದೆ.

ಜಾಗತೀಕರಣ ಮತ್ತು ಆಧುನೀಕರಣದಿಂದ ಜನರಲ್ಲಿ ಭೋಗ ಮನೋಭಾವ ಹೆಚ್ಚಾಗುತ್ತಿದೆ. ಅತಿಯಾದ ನಿರೀಕ್ಷೆಯಿಂದ ಜನ ಹತಾಶೆಗೊಂಡು ಭಯ, ಆತಂಕ ಮತ್ತು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಕೆಲವು ಅಂಕಿ ಅಂಶಗಳ ಪ್ರಕಾರ, ದೇಶದಲ್ಲಿ ಪ್ರತೀ ಏಳು ಜನಕ್ಕೊಬ್ಬರು ಒಂದಲ್ಲ ಒಂದು ಬಗೆಯಲ್ಲಿ ಮಾನಸಿಕ ಕ್ಷೋಭೆಗೆ ಒಳಗಾಗುತ್ತಾರೆ. ದೈಹಿಕ ಕಾಯಿಲೆಗಳಿಂದ ಬಳಲುವವರೂ ಮಾನಸಿಕವಾಗಿ ಸಂಕಟ ಅನುಭವಿಸುತ್ತಾರೆ. ಹರೆಯದವರು ಈ ಸ್ಥಿತಿಯಿಂದ ಹೊರಬರಲಾಗದೇ ಮದ್ಯ, ಮಾದಕ ವಸ್ತುಗಳ ಮೊರೆ ಹೋಗುತ್ತಿದ್ದಾರೆ. ಹೀಗೆ ಆಬಾಲವೃದ್ಧರಾದಿಯಾಗಿ ಮಾನಸಿಕ ಅನಾರೋಗ್ಯದಿಂದ ಬಳಲುವವರು ಹೆಚ್ಚಾಗುತ್ತಿದ್ದಾರೆ. ಸರಿಯಾಗಿ ಚಿಕಿತ್ಸೆ ದೊರೆತರೆ ಅವರ ಮಾನಸಿಕ ಆರೋಗ್ಯ ಸುಧಾರಿಸಲು ಸಾಧ್ಯ.

ಮನೋರೋಗದ ಕುರಿತು ಸಮಾಜದಲ್ಲಿ ಇರುವ ಅಜ್ಞಾನ ಮತ್ತು ತಪ್ಪುಕಲ್ಪನೆಗಳಿಂದ ಮನೋರೋಗಿಗಳು ವೈಜ್ಞಾನಿಕ ಚಿಕಿತ್ಸೆಯಿಂದ ವಂಚಿತರಾಗುತ್ತಿದ್ದಾರೆ. ಮನೋರೋಗ ಎಂದರೆ ಬುದ್ಧಿಭ್ರಮಣೆ, ಈ ಕಾಯಿಲೆ ಎಂದಿಗೂ ವಾಸಿಯಾಗುವುದಿಲ್ಲ, ಮನೋರೋಗಿಯು ಮುಂದೆ ಜೀವನ ಮಾಡಲಾರ, ಅವನಿಗೆ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ ಎಂಬುದು ಕೆಲವರ ನಂಬಿಕೆ. ಮನೋರೋಗಿಗಳಲ್ಲಿ ಪ್ರತಿಶತ ತೊಂಬತ್ತು ಮಂದಿ ದೆವ್ವ, ಮಾಟ, ಮಂತ್ರ, ಗ್ರಹಗಳ ಪೀಡೆ ಅಥವಾ ದೈವ ಶಾಪ ಎಂದು ನಂಬುತ್ತಾರೆ. ವರ್ಷಗಟ್ಟಲೆ ಹರಕೆ, ಪೂಜೆ, ಶಾಂತಿ ಎಂದು ಕಂಡ ಕಂಡ ದೇವರ ಮೊರೆ ಹೋಗುತ್ತಾರೆ. ಇವೆಲ್ಲಕ್ಕಿಂತ ಹೆಚ್ಚಾಗಿ, ವೈಜ್ಞಾನಿಕವಾಗಿ ದೊರಕುವ ಔಷಧಗಳನ್ನು ತೆಗೆದುಕೊಂಡಲ್ಲಿ ಮತ್ತು ಮನೋವೈದ್ಯರು ಹೇಳಿದ ಸಲಹೆಗಳನ್ನು ಪಾಲಿಸಿದಾಗ ಮಾನಸಿಕ ಆರೋಗ್ಯ ಸುಧಾರಿಸುತ್ತದೆ.

ಎದೆ ನೋವಾದರೆ ಕೂಡಲೇ ಮನೆಯವರಿಗೆ ತಿಳಿಸಿ, ವೈದ್ಯರ ಹತ್ತಿರ ಚಿಕಿತ್ಸೆಗಾಗಿ ಓಡುತ್ತಾರೆ. ಅದೇ ಗಾಬರಿ, ಭಯ, ಖಿನ್ನತೆ ಉಂಟಾದರೆ, ಅದನ್ನು ಇತರರೊಂದಿಗೆ ಹಂಚಿಕೊಳ್ಳಲು ಹಿಂಜರಿಯುತ್ತಾರೆ. ಹಾಗೆ ಹೇಳಿಕೊಂಡರೆ ತನಗೆ ಮನೋರೋಗಿ ಎಂದು ಎಲ್ಲಿ ಹಣೆಪಟ್ಟಿ ಕಟ್ಟಿಬಿಡುವರೋ ಎಂಬ ಭಯ. ಮನೋವೈದ್ಯರಿಂದ ಚಿಕಿತ್ಸೆ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಖಿನ್ನತೆಯಿಂದ ಬಳಲುವ ಹರೆಯದವರು ಅದರಿಂದ ಹೊರಬರಲು ಸಹಜ ಮಾರ್ಗಗಳನ್ನು ಕಾಣದೆ ಸ್ಮಾರ್ಟ್‌ಫೋನ್, ಕಂಪ್ಯೂಟರ್‌ನೊಂದಿಗೆ ಕಾಲ ಕಳೆಯುತ್ತಾರೆ, ಓದಿನಲ್ಲಿ ಏಕಾಗ್ರತೆಯ ಕೊರತೆ ಅನುಭವಿಸುತ್ತಾರೆ. ಯಾರೊಂದಿಗೂ ಬೆರೆಯುವುದೇ ಇಲ್ಲ. ಇದರಿಂದ ಒಂಟಿತನ ಪ್ರಾರಂಭವಾಗಿ ಖಿನ್ನತೆ ಹೆಚ್ಚಾಗುತ್ತದೆ. ಇದಕ್ಕೆಲ್ಲ ಪರಿಹಾರ ಇದೆಯೇ?



ಖಂಡಿತವಾಗಿಯೂ ಇದೆ. ಮನೋರೋಗ ಮತ್ತು ಮನೋವೈದ್ಯರ ಬಗ್ಗೆ ಇರುವ ತಪ್ಪುಕಲ್ಪನೆಗಳಿಂದ ಹೊರಬಂದು, ಮೊದಲು ವೈಜ್ಞಾನಿಕ ಚಿಕಿತ್ಸೆ ತೆಗೆದುಕೊಳ್ಳಬೇಕು. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಮುಖ್ಯವಾದ ಅಂಶ ನಮ್ಮ ಜೀವನಶೈಲಿ. ಆರೋಗ್ಯಕರ ಜೀವನಶೈಲಿಯನ್ನು ಪೋಷಕರು ಮಕ್ಕಳಲ್ಲಿ ಬಾಲ್ಯದಿಂದಲೇ ರೂಢಿಸಬೇಕು. ಸಕಾರಾತ್ಮಕ ಚಿಂತನೆ, ಜೀವನಕೌಶಲ, ಪರಸ್ಪರ ಸಂಬಂಧಗಳನ್ನು ಕಾಪಾಡಿಕೊಳ್ಳುವತ್ತ ಮಾರ್ಗದರ್ಶನ ನೀಡಬೇಕು. ವಾಸ್ತವಿಕ ನಿರೀಕ್ಷೆ, ಪ್ರೀತಿಯ ಮತ್ತು ಸ್ನೇಹದ ಸಂಬಂಧಗಳನ್ನು ಹೊಂದುವುದು ಆರೋಗ್ಯಕರ ಜೀವನಶೈಲಿಯ ಕೆಲವು ಅಂಶಗಳು.

ಮಕ್ಕಳಲ್ಲಿ ಹೊಂದಿಕೊಂಡು ಹೋಗುವ ಗುಣವನ್ನು ರೂಢಿಸಬೇಕು. ತಮ್ಮ ಭಾವನೆಗಳನ್ನು ಹತ್ತಿರದವರೊಂದಿಗೆ ಹಂಚಿಕೊಳ್ಳುವುದನ್ನು, ಕೋಪ, ದ್ವೇಷ ಭಾವನೆ ನಿಯಂತ್ರಿಸುವುದನ್ನು ಕಲಿಸಬೇಕು. ದಂಪತಿಯಲ್ಲಿ ಪರಸ್ಪರ ಗೌರವ, ಪ್ರೀತಿ ಮತ್ತು ಹೊಂದಿಕೊಳ್ಳುವಿಕೆ ಸುಖೀ ದಾಂಪತ್ಯವನ್ನು ಅನುಭವಿಸುವಲ್ಲಿ ಪ್ರಮುಖ ಅಂಶಗಳು. ಮರೆತು ಕ್ಷಮಿಸುವ ಗುಣ, ಒತ್ತಡ ಹೆಚ್ಚಾದಾಗ ಅದನ್ನು ಆತ್ಮೀಯರೊಂದಿಗೆ ಹಂಚಿಕೊಂಡು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ನೆಮ್ಮದಿ ಕಾಪಾಡಿಕೊಳ್ಳುವಲ್ಲಿ ಪೂರಕ.

ಈ ದಿಸೆಯಲ್ಲಿ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಆದ್ಯತೆಯ ಮೇರೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಈ ಅಂಶಗಳನ್ನು ಮನಗಂಡು ಕಿಂಚಿತ್ತಾದರೂ ಅನುಸರಿಸಿದಲ್ಲಿ ಮಾನಸಿಕ ಆರೋಗ್ಯ ದಿನಾಚರಣೆಯ ಈ ವರ್ಷದ ಘೋಷಣೆಯು ಅರ್ಥಪೂರ್ಣವಾಗುತ್ತದೆ.

ಲೇಖಕ: ಮನೋವೈದ್ಯ

## ವಾಚಕರ ವಾಣಿ

### ವಿದ್ಯುತ್ ಚಾಲಿತ ಕಾರು: ಇಂದಿನ ಅಗತ್ಯ

ವಿದ್ಯುತ್ ಚಾಲಿತ ಕಾರುಗಳ ಬ್ಯಾಟರಿ ರಿಚಾರ್ಜ್ ಮಾಡಲು ಅತ್ಯಂತ ಸುಧಾರಿತ, ಕ್ಷಿಪ್ರ ಮರುಪೂರಣ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವಲ್ಲಿ 'ನಾಸಾ' ಮುಂದಡಿ ಇಡುತ್ತಿರುವುದನ್ನು ತಿಳಿದು ಭರವಸೆ ಮೂಡಿತು. ವಿದ್ಯುತ್‌ಚಾಲಿತ ಕಾರುಗಳ ಮಾರುಕಟ್ಟೆ ಸದ್ದಿಲ್ಲದೆ ಏರುಗತಿಯನ್ನು ಪಡೆದಿರುವ ಈ ದಿನಗಳಲ್ಲಿ ಚಾರ್ಜಿಂಗ್ ಅವಧಿ ಮತ್ತು ಚಾರ್ಜಿಂಗ್ ತಾಣಗಳ ಲಭ್ಯತೆಯದ್ದೇ ದೊಡ್ಡ ತಲೆನೋವಾಗಿದೆ. ಹೀಗಾಗಿ ವಿದ್ಯುತ್ ಚಾಲಿತ ಕಾರು ಮಾರುಕಟ್ಟೆ ನಿರೀಕ್ಷಿತ ಮಟ್ಟದ ಬೆಳವಣಿಗೆ ಕಾಣುತ್ತಿಲ್ಲ. ಪೆಟ್ರೋಲ್ ಬಂಕ್‌ಗಳ ರೀತಿಯಲ್ಲಿ ಚಾರ್ಜಿಂಗ್ ತಾಣಗಳು ಮುಂದಿನ ದಿನಗಳಲ್ಲಿ ಹೆಚ್ಚಾಗಿ ಸ್ಥಾಪನೆಗೊಳ್ಳಬೇಕಿದೆ. ವಿದ್ಯುತ್ ಚಾಲಿತ ವಾಹನ ಮಾರುಕಟ್ಟೆಗೆ ಇದೇ ಸವಾಲಾಗಿದೆ. ಇದನ್ನು ನಿವಾರಿಸಲು ಹೆಚ್ಚಿನ ಗಮನಹರಿಸುವುದು ಅಗತ್ಯ.

**ತಿರುಪತಿ ನಾಯಕ್,** ಹೊಸನಗರ

### ಬಯಸಿದ ಕರು: ವ್ಯತಿರಿಕ್ತ ಪರಿಣಾಮ ಸಾಧ್ಯತೆ

ಲಿಂಗ ನಿರ್ಧರಿತ ವೀರ್ಯ ನಳಿಕೆ ಬಳಸಿ, ಬಯಸಿದ ಕರು ಪಡೆಯುವ ಯೋಜನೆಯು ರಾಮನಗರ ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಆರಂಭವಾಗಿರುವುದು ಸರಿಯಷ್ಟೆ. ಈ ಯೋಜನೆಯು ಪಶುಪಾಲಕರಿಗೆ ವರದಾನವಾಗಲಿದೆ ಎಂಬ ಮಾತು ಕ್ಷಣಿಕಕ್ಕೆ ಸರಿ ಎನಿಸಿದರೂ ದೀರ್ಘಾವಧಿಯಲ್ಲಿ ಸಮಸ್ಯೆ ಇದೆ. ಮುಂದೆ ಹಸುಗಳ ಸಂತತಿ ಹೆಚ್ಚಾಗಿ ಹಾಲಿನ ಉತ್ಪಾದನೆ ಮಿತಿ ಮೀರಿದರೆ, ಹಾಲಿನ ದರ ಕಡಿಮೆಯಾಗಿ ನಷ್ಟ ಉಂಟಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಪೈಪೋಟಿ ದರದಲ್ಲಿ ಹಾಲಿನ ಉತ್ಪನ್ನಗಳನ್ನು ರಫ್ತು ಮಾಡಿದರೆ ಉಪಯೋಗವಾಗಬಹುದು. ಆದರೆ ಪಶು ಆಹಾರದ ದರ ದಿನನಿತ್ಯ ಏರಿಕೆಯಾಗುತ್ತಿದೆ ವಿನಾ ಕಡಿಮೆಯಾಗುತ್ತಿಲ್ಲ. ಇದರಿಂದ ದೀರ್ಘಾವಧಿಯಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗುವ ಸಾಧ್ಯತೆ ಇದೆ.

**ಸುನಿಲ್ ಟಿ.ಪಿ.,** ಮಂಡ್ಯ

### 'ಭಾರತ್ ಜೋಡೊ': ಸದವಕಾಶವಾಗಲಿ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೈಗೊಂಡಿರುವ 'ಭಾರತ್ ಜೋಡೊ' ಯಾತ್ರೆಗೆ ರಾಜ್ಯದಾದ್ಯಂತ ಉತ್ತಮ ಬೆಂಬಲ ಸಿಕ್ಕಿರುವುದು ಆ ಪಕ್ಷಕ್ಕೆ ಸ್ವಲ್ಪಮಟ್ಟಿಗೆ ಸಮಾಧಾನ ತರುವ ವಿಷಯವಾಗಬಹುದು. ರಾಹುಲ್ ಹೋದೆಡೆಯೆಲ್ಲಾ ಜನರೊಡನೆ ಬೆರೆತು ಅವರ ಕಷ್ಟ ಸುಖಗಳಿಗೆ ಧ್ವನಿಯಾಗುತ್ತಿದ್ದಾರೆ. ಒಂದು ಗ್ರಾಮದಲ್ಲಿ ಮಳೆ ಬೀಳುತ್ತಿದ್ದರೂ ವಿಚಲಿತರಾಗದೆ ಸಭಿಕರನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನವನ್ನು ಅವರು ವಹಿಸಿಕೊಳ್ಳಲು ನಿರಾಕರಿಸುವ ಮೂಲಕ ಒಳ್ಳೆಯ ಕೆಲಸ ಮಾಡಿದ್ದಾರೆ. ರಾಹುಲ್ ಅವರಲ್ಲಿ ಸ್ವಲ್ಪ ಸ್ವಲ್ಪವಾಗಿ ರಾಜಕೀಯ ಪ್ರಬುದ್ಧತೆ ಮತ್ತು ನಾಯಕತ್ವದ ಲಕ್ಷಣಗಳು ಗೋಚರಿಸಲು ಪ್ರಾರಂಭಿಸಿವೆ.

ರಾಹುಲ್ ಅವರಿಗೆ ನೇರವಾಗಿ ಜನರೊಡನೆ ಬೆರೆಯುವ ಹಾಗೂ ಅವರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಅವಕಾಶ ಸಿಕ್ಕಿದೆ. ಒಳ್ಳೆಯ ನಾಯಕನಾಗಿ ಬೆಳೆಯಲು ಇದು ಅವರಿಗೆ ಸಹಕಾರಿ. ಇದನ್ನು ಅವರು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲಿ.

**ಕೆ.ವಿ.ವಾಸು,** ಮೈಸೂರು

### ಸಮಿ(ನ್ಮ)ತಿ

ಯಾವುದೇ ವಿಷಯ
ಚರ್ಚಾಸ್ಪದವಾದಾಗ,
ಸರ್ವಾನುಮತದಿಂದ
ತೆಗೆದುಕೊಳ್ಳುತ್ತಾರೆ ತೀರ್ಮಾನ:
('ಬೀಸುವ ದೊಣ್ಣೆ'ಯ ಗಾದೆಯಂತೆ)
'ಮುಂದೆ ನೋಡಿಕೊಳ್ಳೋಣ;
ಸದ್ಯಕ್ಕೆ ರಚಿಸಿ ಅದಕ್ಕೊಂದು ಸಮಿತಿ!'
ಸಮಿತಿ, ಗಿಮಿತಿ, ತಿಥಿ ಯಾವುದೂ ಬೇಕಿಲ್ಲ;
ಇದ್ದರೆ ಸಾಕು ಸನ್ಮತಿ!
(ಸಬ್ ಕೋ ಸನ್ಮತಿ ದೇ ಭಗವಾನ್).

**ಸಿ.ಪಿ.ಕೆ.,** ಮೈಸೂರು

### ತಬ್ಬಲಿಯಾಗದಿರಲಿ ಗೋವು

ತಬ್ಬಲಿಯು ನೀನಾದೆ ಮಗನೆ... ಸುದ್ದಿ (ಪ್ರ.ವಾ., ಅ. 9) ಓದಿ ಮನಸ್ಸಿಗೆ ನೋವಾಯಿತು. ಗೋವುಗಳಿಗೆ ನಾಡಿನಾದ್ಯಂತ ಇಂತಹ ದುಃಸ್ಥಿತಿ ಬರಬಾರದಿತ್ತು. ಗಂಡು ಕರುಗಳು ಹುಟ್ಟಿದಾಗಲೇ ಕಾಡುಪಾಲಾಗುತ್ತಿರುವುದು ಶೋಚನೀಯ. ಅಶಕ್ತ, ರೋಗಗ್ರಸ್ತ, ಅನಾಥ ದನಕರುಗಳ ಆರೈಕೆ ಕಷ್ಟವಾಗಿದೆ. ಸಾಕಲಾಗದೇ ನೋಡಿಕೊಳ್ಳಲಾಗದೇ ಇರುವ ಬೀಡಾಡಿ ದನಗಳನ್ನು ಸಂರಕ್ಷಿಸಲು ಸೂಕ್ತ ವ್ಯವಸ್ಥೆ ಮಾಡುವುದು ತುರ್ತಿನ ಜವಾಬ್ದಾರಿ. ಸರ್ಕಾರ ಮತ್ತು ಸಂಘ– ಸಂಸ್ಥೆಗಳು ಈ ದಿಸೆಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಬೇಕು.

**ಸಂತೆಬೆನ್ನೂರು ಫೈಜ್ನಟ್ರಾಜ್,** ಸಂತೆಬೆನ್ನೂರು

### ಬ್ಯಾಕ್‌ಲಾಗ್ ಹುದ್ದೆ ಮೊದಲು ಭರ್ತಿಯಾಗಲಿ

ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಏರಿಸುವ ಐತಿಹಾಸಿಕ ನಿರ್ಧಾರ ತೆಗೆದುಕೊಂಡಿರುವುದೇನೋ ಸರಿ. ಆದರೆ ಈ ವರ್ಗಗಳಿಗೆ ಈಗ ಲಭ್ಯವಿರುವ ಮೀಸಲಾತಿಯು ಅನೇಕ ಇಲಾಖೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಂಡಿಲ್ಲ. ಅನೇಕ ಮೀಸಲು ಹುದ್ದೆಗಳು ನಾನಾ ಕಾರಣಗಳಿಂದ ಭರ್ತಿಯಾಗಿಲ್ಲ. ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗಾಗಿ ಇನ್ನೂ ಹೋರಾಟಗಳು ನಡೆಯುತ್ತಿವೆ.

ವಸ್ತುಸ್ಥಿತಿ ಹೀಗಿರುವಾಗ, ವಿಧಾನಸಭಾ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಂತೆ ಈ ವರ್ಗಗಳ ಮೀಸಲಾತಿ ಪ್ರಮಾಣ ಏರಿಸಲು ಸರ್ಕಾರ ಮುಂದಾಗಿದೆ. ಹೀಗಾಗಿ ಇದು ಕೇವಲ ಚುನಾವಣಾ ಗಿಮಿಕ್ ಇರಬಹುದೇ ಎಂಬ ಅನುಮಾನ ಮೂಡುತ್ತಿದೆ. ದುರ್ಬಲ ವರ್ಗಗಳ ಸಬಲೀಕರಣದ ಆಶಯವು ಬದ್ಧತೆಯಿಂದ ಅನುಷ್ಠಾನವಾಗಬೇಕು.

**ಡಿ.ಪ್ರಸನ್ನಕುಮಾರ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

# ಪರ–ವಿರೋಧಗಳ ನಡುವೆ ಹೆಸರು ಬದಲಾವಣೆ ಗೀಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು** ಮತ್ತು ಮೈಸೂರು ಮಧ್ಯೆ ಪ್ರತಿದಿನ ಸಂಚರಿಸುವ ಟಿಪ್ಪು ಎಕ್ಸ್‌ಪ್ರೆಸ್ ಹೆಸರನ್ನು 'ಒಡೆಯರ್ ಎಕ್ಸ್‌ಪ್ರೆಸ್' ಎಂದು ಮರುನಾಮಕರಣ ಮಾಡಲಾಗಿದೆ. ಮೈಸೂರು ಒಡೆಯರ್ ಮನೆತನಕ್ಕೆ ಗೌರವ ಸಲ್ಲಿಸುವ ಕಾರಣಕ್ಕಾಗಿ ಟಿಪ್ಪು ಎಕ್ಸ್‌ಪ್ರೆಸ್‌ನ ಹೆಸರನ್ನು ಬದಲಿಸಲಾಗಿದೆ ಎಂದು ಸಂಸದ ಪ್ರತಾಪ ಸಿಂಹ ಹೇಳಿದ್ದಾರೆ. 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಬಂದ ನಂತರ, ಹೀಗೆ ಹೆಸರು ಬದಲಿಸುವುದನ್ನೂ ಒಂದು ಯೋಜನೆ ಎಂಬಂತೆ ಮಾಡಲಾಗುತ್ತಿದೆ. ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆಗೆ ಸ್ವಾಗತ ಮತ್ತು ವಿರೋಧ ಎರಡೂ ವ್ಯಕ್ತವಾಗಿವೆ. ಈ ಮರುನಾಮಕರಣವು ಮೈಸೂರು ಸಂಸ್ಥಾನದ ಇತಿಹಾಸ ಮತ್ತು ಸಂಸ್ಕೃತಿಗೆ ಮಾಡುತ್ತಿರುವ ಅವಮಾನ ಎಂಬ ಆಕ್ಷೇಪವೂ ಕೇಳಿಬಂದಿದೆ.

ಕೇಂದ್ರ ಸರ್ಕಾರದ ಈ ಸ್ವರೂಪದ ಮರುನಾಮಕರಣ ಯತ್ನವು, ಭಾರತದಲ್ಲಿ ಮುಸ್ಲಿಮರ ಇತಿಹಾಸ ಮತ್ತು ಸಂಸ್ಕೃತಿಯನ್ನು ಮರೆಮಾಚುವ ಕಾರ್ಯಸೂಚಿಯೇ ಆಗಿದೆ ಎಂಬ ಆರೋಪ ಇದೆ. ಕೇಂದ್ರದ ಬಿಜೆಪಿ ಸರ್ಕಾರ ಮಾಡಿರುವ ಮರುನಾಮಕರಣಗಳೂ ಈ ಆರೋಪವನ್ನು ಪುಷ್ಟೀಕರಿಸುತ್ತವೆ. ದೇಶದಲ್ಲಿ ಮುಸ್ಲಿಮರ ಆಡಳಿತವನ್ನು ಸೂಚಿಸುವ, ಅದರ ಸಂಸ್ಕೃತಿಯ ಪ್ರತೀಕವಾಗಿದ್ದ ನಗರ, ರೈಲು ನಿಲ್ದಾಣ ಮತ್ತು ರೈಲುಗಳನ್ನೇ ಮರುನಾಮಕರಣಕ್ಕೆ ಬಿಜೆಪಿ ಸರ್ಕಾರಗಳು ಆಯ್ಕೆ ಮಾಡಿಕೊಂಡಿವೆ.

ಟಿಪ್ಪು ಎಕ್ಸ್‌ಪ್ರೆಸ್ ಮೈಸೂರು ಕರ್ನಾಟಕ ಭಾಗದ ಜನರೊಂದಿಗೆ ಒಂದು ಸಂಸ್ಕೃತಿಕ ಸಂಬಂಧವಿದೆ. 1980ರ ಏಪ್ರಿಲ್ 15ರಂದು ಆರಂಭವಾಗಿದ್ದ ಈ ರೈಲು, ಎರಡೂ ನಗರಗಳ ನಡುವಣ 139 ಕಿ.ಮೀ. ಅಂತರವನ್ನು 3.30 ಗಂಟೆಯಲ್ಲಿ ಕ್ರಮಿಸುತ್ತಿತ್ತು. ನಂತರದ ವರ್ಷಗಳಲ್ಲಿ ಈ ಸೂಪರ್‌ಫಾಸ್ಟ್ ರೈಲಿನ ವೇಗವನ್ನು ಹೆಚ್ಚಿಸಲಾಗಿತ್ತು. ಈಗ ಅದೇ ಅಂತರವನ್ನು 2.30 ಗಂಟೆಯಲ್ಲಿ ಟಿಪ್ಪು ಎಕ್ಸ್‌ಪ್ರೆಸ್ ಕ್ರಮಿಸುತ್ತದೆ. ಈ ನಗರಗಳ ಸಾವಿರಾರು ಜನರು ಕೆಲಸ ಕಾರ್ಯದ ನಿಮಿತ್ತ, ಪ್ರತಿದಿನ ಓಡಾಟಕ್ಕೆ ಈ ರೈಲನ್ನೇ ನೆಚ್ಚಿಕೊಂಡಿದ್ದಾರೆ. ಆಗಾಗ್ಗೆ ರೈಲಿನ ವೇಳಾಪಟ್ಟಿಯಲ್ಲಿ ಸ್ವಲ್ಪ ಏರುಪೇರಾದರೂ, ಈ ರೈಲನ್ನು ಈ ಭಾಗದ ಜನರು ನೆಚ್ಚಿಕೊಂಡಿದ್ದಾರೆ.

ಈ ರೈಲಿಗೆ ಒಡೆಯರ್ ಹೆಸರಿಟ್ಟಿರುವುದಕ್ಕೆ ಯಾವುದೇ ಆಕ್ಷೇಪ ವ್ಯಕ್ತವಾಗಿಲ್ಲ. ಮೈಸೂರು ಸಂಸ್ಥಾನ ಮತ್ತು ಒಡೆಯರ್ ಮನೆತನದೊಂದಿಗೆ ಈ ಭಾಗದ ಜನರಿಗೆ ಅಕ್ಕರೆ ಪ್ರೀತಿ ಇದೆ. ಆದರೆ, ಟಿಪ್ಪು ಹೆಸರು ತೆಗೆದುಹಾಕಿದ್ದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಬ್ರಿಟಿಷರು ಮತ್ತು ಟಿಪ್ಪು ಮಧ್ಯೆ ನಡೆದ ಆಂಗ್ಲೊ-ಮೈಸೂರು ಯುದ್ಧಗಳು, ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಮಹತ್ವದ ಘಟ್ಟಗಳಾಗಿ ದಾಖಲಾಗಿವೆ. ಇವಷ್ಟೇ ಅಲ್ಲದೆ, ರಾಜ್ಯದ ಸಂಸ್ಕೃತಿಯ ಭಾಗವಾಗಿಯೂ ಟಿಪ್ಪು ಜನಜನಿತನಾಗಿದ್ದಾನೆ. ಶ್ರೀರಂಗಪಟ್ಟಣ, ಶೃಂಗೇರಿಯಲ್ಲಿ ಸಲಾಂ ಆರತಿ, ಬೆಂಗಳೂರಿನ ಬೇಸಿಗೆ ಅರಮನೆ, ನಂದಿದುರ್ಗದ ಟಿಪ್ಪು ಡ್ರಾಪ್ ಇವೆಲ್ಲವೂ ಟಿಪ್ಪು ಆಡಳಿತ ಮಾತ್ರವಲ್ಲ, ಮೈಸೂರು ಸಂಸ್ಥಾನದ ಸಂಸ್ಕೃತಿಯ ಭಾಗವಾಗಿವೆ ಎಂದು ನೆಟ್ಟಿಗರು ನೆನಪು ಮಾಡುತ್ತಿದ್ದಾರೆ. ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆಯು, ಈ ಸಂಸ್ಕೃತಿಯನ್ನು ಮರೆಮಾಚುವ ಯತ್ನ ಎಂದು ಆರೋಪಿಸುತ್ತಿದ್ದಾರೆ.

ಉತ್ತರ ಪ್ರದೇಶದಲ್ಲೂ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮರುನಾಮಕರಣದ ಕ್ರಮ ಆರಂಭವಾಯಿತು. ಅದು ಈಗ ಬಿಜೆಪಿ ಸರ್ಕಾರ ಇರುವ ಬಹುತೇಕ ರಾಜ್ಯಗಳಿಗೆ ಹರಡಿದೆ. ಮರುನಾಮಕರಣಕ್ಕೆ ಗುರಿ ಮಾಡಿಕೊಂಡಿರುವ ಹೆಸರುಗಳ ದೊಡ್ಡ ಪಟ್ಟಿಯೇ ಕೇಂದ್ರ ಸರ್ಕಾರದ ಮುಂದೆ ಇದೆ. ಅವೆಲ್ಲವೂ ಮುಸ್ಲಿಂ ಸಂಸ್ಕೃತಿಯನ್ನು ಪ್ರತಿನಿಧಿಸುವ ಉರ್ದು ಮತ್ತು ಅರೇಬಿಕ್ ಹೆಸರುಗಳೇ ಆಗಿವೆ ಎಂಬುದು ಗಮನಾರ್ಹ.

**ಆಧಾರ:** ಪಿಟಿಐ, ಪಿಐಬಿ ಪತ್ರಿಕಾ ಪ್ರಕಟಣೆಗಳು, ಟ್ವೀಟ್‌ಗಳು




ಫೈಜಾಬಾದ್ ರೈಲು ನಿಲ್ದಾಣದಲ್ಲಿನ ನಾಮಫಲಕದಲ್ಲಿ ಅಯೋಧ್ಯಾ ಹೆಸರು ಬರೆದ ಕಲಾವಿದರು

## ಫೈಜಾಬಾದ್

ಭಾರತದ ಸಂಸ್ಕೃತಿ ಮತ್ತು ರಾಜಕಾರಣದಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿರುವ ಬಾಬರಿ ಮಸೀದಿ ಮತ್ತು ರಾಮಮಂದಿರ ಇದ್ದದ್ದು ಇದೇ ಫೈಜಾಬಾದ್‌ನಲ್ಲಿ. ಮೂಲ ಫೈಜಾಬಾದ್ ಅಯೋಧ್ಯೆಯಿಂದ 6 ಕಿ.ಮೀ. ದೂರದಲ್ಲಿದೆ. ಪುರಾಣ ಕಾಲದಲ್ಲಿ ಇಲ್ಲಿ ಸಾಕೇತ್ ಎಂಬ ನಗರವಿತ್ತು ಎಂದು ಹೇಳಲಾಗುತ್ತದೆ. ಆದರೆ, ಅವಧ್‌ನ ನವಾಬ ಸಾದತ್ ಅಲಿ ಖಾನ್ 1730ರಲ್ಲಿ ಫೈಜಾಬಾದ್ ನಗರವನ್ನು ಸ್ಥಾಪಿಸಿದ. ಅಂದು ಅದು ಅವಧ್ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ನಂತರದ ದಿನಗಳಲ್ಲಿ ರಾಜಧಾನಿಯನ್ನು ಲಖನೌಗೆ ಬದಲಿಸಲಾಯಿತು ಎಂದು ಇತಿಹಾಸ ಹೇಳುತ್ತದೆ. ಈ ನಗರದ ಹೆಸರನ್ನು ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ಅವರ ಸರ್ಕಾರವು 'ಅಯೋಧ್ಯೆ' ಎಂದು ಬದಲಿಸಿತು.

## ಮುಘಲ್‌ಸರಾಯ್ ಜಂಕ್ಷನ್...



ದೇಶದ ಅತ್ಯಂತ ದಟ್ಟಣೆಯ ರೈಲು ಜಂಕ್ಷನ್‌ಗಳಲ್ಲಿ ಒಂದಾಗಿದ್ದ 'ಮುಘಲ್‌ಸರಾಯ್ ಜಂಕ್ಷನ್'ನ ಹೆಸರನ್ನು ಉತ್ತರ ಪ್ರದೇಶದ ಬಿಜೆಪಿ ಸರ್ಕಾರವು 2018ರಲ್ಲಿ 'ಪಂಡಿತ್ ದೀನ ದಯಾಳ್ ಉಪಾಧ್ಯಾಯ ಜಂಕ್ಷನ್' ಎಂದು ಬದಲಾಯಿಸಿತು. 10ನೇ ಶತಮಾನದಿಂದಲೂ ಮಧ್ಯಪ್ರಾಚ್ಯ ಮತ್ತು ಐರೋಪ್ಯ ದೇಶಗಳೊಟ್ಟಿಗೆ ಭಾರತಕ್ಕೆ ರಸ್ತೆ ಸಂಪರ್ಕ ಕಲ್ಪಿಸುತ್ತಿದ್ದ 'ಗ್ರ್ಯಾಂಡ್ ಟ್ರಂಕ್ ರೋಡ್' ಮುಘಲ್‌ಸರಾಯ್ ಅನ್ನು ಹಾದುಹೋಗುತ್ತಿತ್ತು. ಭಾರತದಲ್ಲಿ ಮೊಘಲರ ಆಳ್ವಿಕೆ ಮತ್ತು ಮೊಘಲ್ ಸಂಸ್ಕೃತಿ, ಮೊಘಲ್ ಮತ್ತು ಹಿಂದೂ ಸಂಸ್ಕೃತಿಯ ಐಕ್ಯತೆಗೆ ಮುಘಲ್‌ಸರಾಯ್ ಹೆಸರಾಗಿತ್ತು. ಈ ಜಂಕ್ಷನ್‌ನಲ್ಲಿ ಇಳಿಯುವ ಪ್ರವಾಸಿಗರು ಇಲ್ಲಿನ ಖ್ಯಾತ ಕಾಳಿ ಮಾತಾ ಮಂದಿರ, ಗೌರಿ ಮಾತಾ ಮಂದಿರ ಮತ್ತು ಐತಿಹಾಸಿಕ ಜಾಮಾ ಮಸೀದಿಗೆ ಭೇಟಿ ನೀಡುತ್ತಾರೆ. ಮುಘಲ್‌ಸರಾಯ್‌ನ ಅವಧ್ ಸಂಸ್ಕೃತಿಯ ಖಾದ್ಯಗಳು, ಮೊಘಲ್ ಸಂಸ್ಕೃತಿಯ ಖಾದ್ಯಗಳು ಮತ್ತು ಪರ್ಷಿಯನ್ ಖಾದ್ಯಗಳು ಅತ್ಯಂತ ಜನಪ್ರಿಯವಾಗಿವೆ. ಈ ಎಲ್ಲಾ ಖಾದ್ಯಗಳನ್ನು ಬೆರೆಸಿದ ಫ್ಯೂಶನ್ ಖಾದ್ಯಗಳೂ ಅಲ್ಲಿ ಹೆಸರಾಗಿವೆ. ಇಲ್ಲಿ ಲಭ್ಯವಿದ್ದ ಖಾದ್ಯಗಳು ಮುಘಲ್‌ಸರಾಯ್ ಕ್ಯುಸೀನ್ ಎಂದೇ ಹೆಸರಾಗಿವೆ. ಅಂತಹ ಹೆಸರನ್ನು ಬಿಜೆಪಿ ಸರ್ಕಾರ ಬದಲಿಸಿದೆ.

## ಪ್ರಯಾಗರಾಜ್

ಅಲಹಾಬಾದ್‌ನ ಹೆಸರನ್ನು ಉತ್ತರ ಪ್ರದೇಶ ಸರ್ಕಾರವು 'ಪ್ರಯಾಗರಾಜ್' ಎಂದು ಬದಲಿಸಿದೆ. ಈ ನಗರದಲ್ಲಿ ಹಿಂದೂಗಳು ಬಹುಸಂಖ್ಯಾತರಾಗಿದ್ದರೂ, ಮುಸ್ಲಿಮರು, ಜೈನರು, ಬೌದ್ಧರು ಮತ್ತು ಕ್ರೈಸ್ತ ಧರ್ಮೀಯರೂ ನೆಲೆಸಿದ್ದಾರೆ.

'ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ತ್ರಿವೇಣಿ ಸಂಗಮದ ಸ್ಥಳದಲ್ಲಿ ಮೊದಲು ವಸತಿಯನ್ನು ಸ್ಥಾಪಿಸಿದ್ದು ಆರ್ಯನ್ನರು' ಎಂದು ಪ್ರಯಾಗರಾಜ್ ಜಿಲ್ಲೆಯ ಅಧಿಕೃತ ಜಾಲತಾಣದಲ್ಲಿ ವಿವರಿಸಲಾಗಿದೆ. ಆದರೆ, ಇಲ್ಲಿ ಒಂದು ವ್ಯವಸ್ಥಿತ ನಗರವನ್ನೊಂದನ್ನು ಸ್ಥಾಪಿಸಿದ್ದು ಮೊಘಲ್ ದೊರೆ ಅಕ್ಬರ್ ಎನ್ನುತ್ತದೆ ಇದೇ ಜಾಲತಾಣ. ಸರ್ಕಾರವೇ ಹೇಳುತ್ತಿರುವಂತೆ, ಈ ನಗರವನ್ನು 1575ರಲ್ಲಿ ಅಕ್ಬರ್ ಸ್ಥಾಪಿಸಿದ. ಅಕ್ಬರನೇ ಈ ನಗರಕ್ಕೆ 'ಇಲಾಹಾಬಾದ್' ಎಂದು ನಾಮಕರಣ ಮಾಡಿದ್ದ. ಕಾಲಾನಂತರದಲ್ಲಿ ಅದು ಅಲಹಾಬಾದ್ ಎಂದು ಬದಲಾಯಿತು.

ಈ ನಗರದ ಹೆಸರನ್ನು ಪ್ರಯಾಗರಾಜ್ ಎಂದು ಬದಲಿಸಿದ್ದರ ಹಿಂದೆ, ಅಕ್ಬರನ ಇತಿಹಾಸವನ್ನು ಅಳಿಸುವ ಹುನ್ನಾರವಿದೆ ಎಂಬ ಆಕ್ಷೇಪ ವ್ಯಕ್ತವಾಗಿತ್ತು.


## 'ಮೀರತ್‌ಗೆ ಗೋಡ್ಸೆ ಹೆಸರಿಡಿ'

ಸುಲ್ತಾನ್‌ಪುರಕ್ಕೆ ಶ್ರೀರಾಮನ ಮಗ ಕುಶನ ಹೆಸರಿಟ್ಟು 'ಕುಶ್ ಭವನಪುರ' ಎಂಬುದಾಗಿ ಬದಲಾವಣೆ ಮಾಡಬೇಕು ಎಂಬ ಆಗ್ರಹವಿದೆ. ಅಲಿಗಡವನ್ನು ಹರಿಗಢ, ಮೈನ್‌ಪುರಿಯನ್ನು ಮಾಯನ್ ನಗರ, ಫಿರೋಜಾಬಾದ್ ಅನ್ನು ಚಂದ್ರನಗರ, ಮಿರ್ಜಾಪುರವನ್ನು ವಿಂಧ್ಯಧಾಮ, ಗಾಜಿಯಾಬಾದ್ ಅನ್ನು ದಿಗ್ವಿಜಯ ನಗರ, ಹಾಪುರವನ್ನು ಅವೈದ್ಯನಾಥ ನಗರ ಎಂದು ಬದಲಿಸುವ ಬೇಡಿಕೆಗಳಿವೆ. ಅಚ್ಚರಿಯೆಂದರೆ, ಮೀರತ್ ನಗರಕ್ಕೆ ಪಂಡಿತ್ ನಾಥೂರಾಮ್ ಗೋಡ್ಸೆ ಹೆಸರು ಇರಿಸಬೇಕು ಎಂಬ ಬೇಡಿಕೆಯೂ ಇದೆ. 2018ರಲ್ಲಿ ಅಖಿಲ ಭಾರತ ಹಿಂದೂ ಮಹಾಸಭಾ ಈ ಪ್ರಸ್ತಾವವನ್ನು ಸಲ್ಲಿಸಿದ್ದ ಬಗ್ಗೆ ವರದಿಯಾಗಿತ್ತು.

## ಬಲಪಂಥೀಯರ ಹೆಸರು

ದೊಡ್ಡ ನಗರಗಳಷ್ಟೇ ಅಲ್ಲದೆ, ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆ, ಉದ್ಯಾನಗಳಿಗೂ ಮರುನಾಮಕರಣ ಮಾಡುವ ಯತ್ನ ನಡೆಯುತ್ತಿದೆ. ಬಲಪಂಥೀಯ ವಿಚಾರಧಾರೆಗಳನ್ನು ಹೊಂದಿರುವ ವ್ಯಕ್ತಿಗಳ ಹೆಸರನ್ನು ಇರಿಸುವ ಪ್ರಸ್ತಾವಕ್ಕೆ ಲಖನೌ ಮಹಾನಗರ ಪಾಲಿಕೆ ಕಾರ್ಯಕಾರಿ ಸಮಿತಿಯು ಇತ್ತೀಚೆಗೆ ಒಪ್ಪಿಗೆ ನೀಡಿದೆ.

ಲಖನೌದ ಬರ್ಲಿಂಗ್ಟನ್ ಕ್ರಾಸಿಂಗ್‌ಗೆ ವಿಎಚ್‌ಪಿ ನಾಯಕ ಅಶೋಕ್ ಸಿಂಘಾಲ್ ಹೆಸರು, ಸರ್ವೋದಯ ನಗರದ ದ್ವಾರಕ್ಕೆ ಸಾವರ್ಕರ್ ಹೆಸರು, ನಿರ್ಮಲ ನಗರದ ತ್ರಿಕೋನ ಉದ್ಯಾನಕ್ಕೆ ಜನಸಂಘದ ಸ್ಥಾಪಕ ಶ್ಯಾಮಪ್ರಸಾದ್ ಮುಖರ್ಜಿ ಹೆಸರು ಪ್ರಸ್ತಾಪವಾಗಿದ್ದವು. ಈ ಪ್ರಸ್ತಾವಗಳಿಗೆ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಳೆದ ತಿಂಗಳು ಒಪ್ಪಿಗೆ ನೀಡಲಾಗಿದೆ.



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 245



## ದೇವತೆಗಳ ಮೊರೆ ಮನ್ನಿಸಿದ ಶಿವ

ಶಿವನಿಂದನೆಯನ್ನು ಶಿವನ ಮೂಲಕವೇ ಪರ್ವತರಾಜನಿಗೆ ಕೇಳಿಸುವಂತೆ ಬ್ರಹ್ಮ ಕೊಟ್ಟ ಸಲಹೆಯಂತೆ ದೇವತೆಗಳು ಕೈಲಾಸಕ್ಕೆ ಹೋದರು. ಶಿವನಿಗೆ ನಮಸ್ಕರಿಸಿ, ಸ್ತುತಿಸಿ, 'ಹಿಮವಂತನನ್ನು ಪರೀಕ್ಷಿಸಲು ಮಾರುವೇಷದಲ್ಲಿ ಹೋಗಿ ನಿನ್ನ ನೀನು ನಿಂದನೆ ಮಾಡು. ಅಂಥವನಿಗೆ ಮಗಳು ಪಾರ್ವತಿಯನ್ನು ಕೊಡದಿರುವಂತೆ ಎಚ್ಚರಿಸು. ಹಿಮವಂತ ನಿಜವಾಗಿಯೂ ನಿನ್ನ ಮೇಲೆ ನಂಬಿಕೆ ಇದ್ದರೆ, ನಿನ್ನ ಮಾತು ಧಿಕ್ಕರಿಸುತ್ತಾನೆ. ನಂಬಿಕೆಗೆ ಅನರ್ಹನಾಗಿದ್ದರೆ, ನಿನ್ನ ಮಾತನ್ನು ನಂಬುತ್ತಾನೆ' ಎಂದು ಹೇಳುತ್ತಾರೆ.

ದೇವತೆಗಳ ಮಾತನ್ನು ಕೇಳಿ ಶಿವ ನಗುತ್ತಾನೆ. ದೇವತೆಗಳ ಕುಟಿಲೋಪಾಯ ತಿಳಿದಿದ್ದರೂ, ಹಾಗೆಯೇ ಆಗಲೆಂದು ಅವರ ಮಾತನ್ನು ಅಂಗೀಕರಿಸುತ್ತಾನೆ. ಶಿವ ಬ್ರಾಹ್ಮಣನ ವೇಷ ಧರಿಸಿ ಹಿಮವಂತನಲ್ಲಿಗೆ ಹೋದ. ತೇಜಸ್ವಿಯಂತೆ ಕಂಗೊಳಿಸುತ್ತಿದ್ದ ಅತಿಥಿಗೆ ಹಿಮವಂತ ನಮಸ್ಕರಿಸಿದ. ವಿಪ್ರರೂಪ ಧರಿಸಿ ಬಂದಿರುವುದು ತನ್ನ ಪ್ರಾಣಕಾಂತನೆಂಬುದು ಪಾರ್ವತಿಯ ದಿವ್ಯದೃಷ್ಟಿಗೆ ಗೋಚರಿಸಿ, ಸಂತೋಷಪಟ್ಟಳು. ಹಿಮವಂತ ಆದರದಿಂದ ಮಧುಪರ್ಕ ಮುಂತಾದುವನ್ನು ಆ ಬ್ರಾಹ್ಮಣನಿಗೆ ಅರ್ಪಿಸಿ, ವಿಧಿವತ್ತಾಗಿ ಪೂಜಿಸಿದ. ನಂತರ 'ಎಲೈ ವಿಪ್ರನೇ, ನೀನು ಯಾರು? ಇಲ್ಲಿಗೆ ಬಂದ ಕಾರ್ಯವೇನು?' ಎಂದು ಕುಶಲಪ್ರಶ್ನೆ ಮಾಡಿದ. ಇದಕ್ಕೆ ಬ್ರಾಹ್ಮಣವೇಷಧಾರಿ ಶಿವ, 'ಎಲೈ ಪರ್ವತರಾಜನೆ, ನಾನು ವೈಷ್ಣವಬ್ರಾಹ್ಮಣ. ಗುರುಗಳ ಅನುಗ್ರಹದಿಂದ ನಾನು ಯಾವ ಕಡೆಗೆ ಬೇಕೆಂದರೆ ಆ ಕಡೆಗೆ ಹೋಗಬಲ್ಲ ಶಕ್ತಿಯುಳ್ಳವನಾಗಿದ್ದೇನೆ. ಎಲ್ಲವನ್ನೂ ತಿಳಿಯಬಲ್ಲ ಶಕ್ತಿಯು ನನಗಿದೆ. ನನ್ನ ಜ್ಞಾನದೃಷ್ಟಿಗೆ ತಿಳಿದಂತೆ ನಿನ್ನ ಪುತ್ರಿಯನ್ನು ಶಿವನಿಗೆ ಮದುವೆ ಮಾಡಿಕೊಡಲು ಇಚ್ಛಿಸಿದ್ದೀಯ. ಆದರೆ ಇದು ಸರಿಯಲ್ಲ.

ನಯನಮನೋಹರಿಯಾದ ಪಾರ್ವತಿಯನ್ನು ಶಿವನಂಥ ನಿರಾಶ್ರಿತನಿಗೆ ಕೊಡುವುದು ಸೂಕ್ತ ಅನ್ನಿಸುವುದಿಲ್ಲ. ಸದಾ ಶ್ಮಶಾನದಲ್ಲಿ ವಾಸಿಸುತ್ತಾ, ಹಾವುಗಳನ್ನು ಧರಿಸಿ ಸುತ್ತಾಡುವವನಿಗೆ ಸುಕೋಮಲೆಯಾದ ಮಗಳನ್ನು ಕೊಡುವುದು ಉತ್ತಮವೆನಿಸುವುದಿಲ್ಲ. ಸಂಸಾರದಲ್ಲಿ ಆಸಕ್ತಿಯಿಲ್ಲದ, ದಿಗಂಬರನಾದ ಶಿವನಿಗೆ ಹೆಣ್ಣು ಕೊಡುವುದೆಂದರೆ ಹೆತ್ತ ಮಗಳನ್ನು ಹಾಳುಬಾವಿಗೆ ತಳ್ಳಿದಂತಾಗುತ್ತೆ.

'ಸದಾ ಮೈಗೆ ಬೂದಿಯನ್ನು ಬಳಿದುಕೊಳ್ಳುವ, ಬಹು ಕೋಪಿಷ್ಠ, ಅವಿವೇಕಿಯು ಆದ ಶಿವನಿಗೆ ವಯಸ್ಸೇ ತಿಳಿಯದು. ಹೊಲಸಾದ ಜಟೆಯೊಂದಿಗೆ ಬಿಡುಬೀಸಾಗಿ ಊರು ತುಂಬ ಅಲೆಯುವ ಅವನಿಗೆ ಸರ್ಪವೇ ಹಾರ. ವಿಷವೇ ಆಹಾರ. ಮಹಾಜ್ಞಾನಿಯಾದ ನೀನೇ ಯೋಚನೆಮಾಡು. ಪಾರ್ವತಿಯನ್ನು ಪರಿಗ್ರಹಿಸಲು ಆ ಶಿವನು ಯೋಗ್ಯನೇ ಎಂದು?

'ಓ ಗಿರಿರಾಜ, ಆ ಶಿವನಿಗೆ ಒಬ್ಬನೂ ಬಂಧುವಿಲ್ಲ. ಧನವಿಲ್ಲದ ದರಿದ್ರ. ನೀನಾದರೋ ಅಸಂಖ್ಯ ಬಂಧು–ಬಳಗ ಹೊಂದಿದ್ದೀಯ. ಬೇಕಾದಷ್ಟು ರತ್ನಗಳುಳ್ಳವ. ಆದ್ದರಿಂದ ಮದುವೆಯ ವಿಷಯದಲ್ಲಿ ನಿನ್ನ ಬಂಧುಗಳು, ಹೆಂಡತಿ, ಮಕ್ಕಳು, ಗುರುಹಿರಿಯರ ಮಾತನ್ನು ಕೇಳು. ಆದರೆ ಪಾರ್ವತಿಯನ್ನು ಮಾತ್ರ ಕೇಳಬೇಡ. ಏಕೆಂದರೆ ರೋಗಿಗೆ ಔಷಧ ಇಷ್ಟವಾಗುವುದಿಲ್ಲ. ರೋಗಿಗೆ ಇಷ್ಟವಿಲ್ಲ ಅಂತ ಔಷಧ ನೀಡದಿದ್ದರೆ, ರೋಗ ವಾಸಿಯಾಗುವುದಿಲ್ಲ ಅಲ್ಲವೆ? ಪ್ರೇಮರೋಗದಿಂದ ಬಳಲುತ್ತಿರುವ ಪಾರ್ವತಿ ಮಾತಿಗೆ ಕಿವಿಗೊಟ್ಟು ಕೆಡಬೇಡ' ಎಂದು ಬ್ರಾಹ್ಮಣವೇಷಧಾರಿ ಶಿವ ಹೇಳಿ, ಕೈಲಾಸಕ್ಕೆ ತೆರಳಿದ.

ಇಲ್ಲಿಗೆ ಶ್ರೀಶಿವಮಹಾಪುರಾಣದ ಪಾರ್ವತೀಖಂಡದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

## ಹೆಸರು ಬದಲಾವಣೆ ಪಟ್ಟಿಯಲ್ಲಿ ಸಾಲು ಸಾಲು ನಗರಗಳು

ಪ್ರಮುಖ ಮೆಟ್ರೊಪಾಲಿಟನ್ ನಗರ ಹೈದರಾಬಾದ್ ಹೆಸರನ್ನು 'ಭಾಗ್ಯನಗರ' ಎಂಬುದಾಗಿ ಬದಲಿಸಲು ಬಿಜೆಪಿ ಸಿದ್ಧವಾಗಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಮೊದಲಾದವರು ಹೈದರಾಬಾದ್ ಹೆಸರು ಬದಲಿಸುವ ಕುರಿತು ಸ್ಪಷ್ಟ ಧ್ವನಿಯಲ್ಲಿ ಮಾತನಾಡಿದ್ದಾರೆ. ತೆಲಂಗಾಣದಲ್ಲಿ ಅಧಿಕಾರಕ್ಕೆ ಬಂದರೆ ಹೆಸರು ಬದಲಾವಣೆ ಮಾಡುವುದಾಗಿ ಇವರು ಹೇಳಿದ್ದಾರೆ.

ಗುಜರಾತ್ ರಾಜಧಾನಿ ಹಾಗೂ ಪ್ರಮುಖ ವಾಣಿಜ್ಯ ಕೇಂದ್ರ ಎನಿಸಿರುವ ಅಹಮದಾಬಾದ್ ಅನ್ನು 'ಕರ್ಣಾವತಿ' ಎಂಬುದಾಗಿ ಬದಲಿಸಬೇಕು ಎಂಬ ಕೂಗು ಆಗಾಗ್ಗೆ ಕೇಳಿಬಂದಿದೆ. 'ಶಿವಸೇನಾ ಸರ್ಕಾರವು ಔರಂಗಾಬಾದ್ ಹಾಗೂ ಉಸ್ಮಾನಾಬಾದ್ ಹೆಸರುಗಳನ್ನು ಬದಲಿಸುವ ಧೈರ್ಯ ತೋರಿದೆ. ಬಿಜೆಪಿ ಆಡಳಿತವಿರುವ ಗುಜರಾತ್‌ನಲ್ಲಿ ಅಹಮದಾಬಾದ್ ಹೆಸರು ಬದಲಿಸಲು ಬಿಜೆಪಿಯಿಂದ ಸಾಧ್ಯವೇ' ಎಂದು ಶಿವಸೇನಾ ಇತ್ತೀಚೆಗೆ ಸವಾಲು ಹಾಕಿತ್ತು. 'ನಮಗೆ ಕರ್ಣಾವತಿ ಬೇಕು' ಎಂಬ ಹ್ಯಾಷ್‌ಟ್ಯಾಗ್‌ನಡಿಯಲ್ಲಿ ಟ್ವಿಟರ್‌ನಲ್ಲಿ ಇತ್ತೀಚೆಗೆ ಭಾರಿ ಚರ್ಚೆ ನಡೆದಿತ್ತು.

ಅಧಿಕಾರಕ್ಕೆ ಬಂದ ಆರಂಭದಲ್ಲಿ, ಅಲಹಾಬಾದ್ ಹಾಗೂ ಫೈಜಾಬಾದ್ ಹೆಸರುಗಳನ್ನು ಬದಲಿಸಿದ್ದ ಯೋಗಿ ಸರ್ಕಾರದ ಮರುನಾಮಕರಣ ಪಟ್ಟಿಯಲ್ಲಿ ಈಗ ಹತ್ತಾರು ನಗರಗಳು ಇವೆ. ರಾಜಧಾನಿ ಲಖನೌ ಅನ್ನು 'ಲಕ್ಷ್ಮಣಪುರಿ' ಎಂಬ ಹೆಸರಿನಿಂದ ಕರೆಯಬೇಕೆಂಬ ಒತ್ತಡವಿದ್ದರೂ, ಈ ಬಗ್ಗೆ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಿಜೆಪಿ ಸರ್ಕಾರವು ಇಲ್ಲಿ ಬೃಹತ್ ಲಕ್ಷ್ಮಣ ದೇವಸ್ಥಾನವನ್ನು ನಿರ್ಮಿಸುತ್ತಿರುವುದು ಉಲ್ಲೇಖಾರ್ಹ.




ಅಲಹಾಬಾದ್ ಹೆಸರು ಬದಲಾವಣೆ ಘೋಷಣೆಯಾಗುತ್ತಿದ್ದಂತೆ ರೈಲು ನಿಲ್ದಾಣದಲ್ಲಿದ್ದ ಫಲಕಕ್ಕೆ, ಪ್ರಯಾಗರಾಜ್ ಹೆಸರಿರುವ ಬ್ಯಾನರ್ ಅನ್ನು ರಾಷ್ಟ್ರ ರಕ್ಷಕ ಸಮೂಹ ಕಾರ್ಯಕರ್ತರು ಕಟ್ಟಿದ್ದರು

ವಿಶ್ವವಿಖ್ಯಾತ ತಾಜ್‌ಮಹಲ್ ಇರುವ ಆಗ್ರಾದ ಹೆಸರನ್ನು ಆಗ್ರಾವನ ಎಂಬುದಾಗಿ ಬದಲಿಸುವಂತೆ ಒತ್ತಡವಿದೆ. ಅದರ ಜತೆ ಮುಜಫ್ಫರ್‌ನಗರದ ಹೆಸರನ್ನು ಲಕ್ಷ್ಮಿನಗರ ಎಂದು ಕರೆಯಬೇಕು ಎಂಬ ಪ್ರಸ್ತಾವವೂ ರಾಜ್ಯ ಸರ್ಕಾರದ ಮುಂದಿದೆ.

ಅಲಿಗಡ, ಅಜಂಗಡ, ಷಾಜಹಾನ್‌ಪುರ, ಗಾಜಿಯಾಬಾದ್, ಫಿರೋಜಾಬಾದ್, ಫಾರೂಕಾಬಾದ್, ಮಿರ್ಜಾಪುರ, ಸುಲ್ತಾನ್‌ಪುರ, ಮೈನ್‌ಪುರಿ, ಮೊರಾದಾಬಾದ್ ಸೇರಿದಂತೆ ರಾಜ್ಯದ ಹಲವು ನಗರಗಳು ಮುಂದಿನ ದಿನಗಳಲ್ಲಿ ಮರು ನಾಮಕರಣ ಕಾಣಲಿವೆ ಎಂದು ಮೂಲಗಳು ಹೇಳುತ್ತವೆ. ಸುಲ್ತಾನ್‌ಪುರ, ಮಿರ್ಜಾಪುರ, ಅಲಿಗಡ, ಫಿರೋಜಾಬಾದ್ ಹಾಗೂ ಮೈನ್‌ಪುರಿ ಹೆಸರು ಬದಲಿಸುವಂತೆ ಯೋಗಿ ಸರ್ಕಾರದ ಮೊದಲ ಅವಧಿಯಲ್ಲಿ ಪ್ರಸ್ತಾಪವಿತ್ತು. ಆದರೆ, ಪ್ರಯಾಗರಾಜ್ ಹಾಗೂ ಅಯೋಧ್ಯೆ ಹೆಸರುಗಳು ಮಾತ್ರ ಬದಲಾಗಿದ್ದವು.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಅಮೆರಿಕದಲ್ಲಿ ಕಾಯಂ ಆಗಿ ವಾಸಿಸುವ ಹಾಗೂ ಅಲ್ಲಿಯೇ ಕೆಲಸ ಮಾಡಲು ಅವಕಾಶ ಒದಗಿಸುವ ಗ್ರೀನ್‌ಕಾರ್ಡ್ ಹೊಂದಿದ್ದಾರೆ. ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಹುದ್ದೆ ವಹಿಸಿಕೊಳ್ಳಲಿರುವ ಚಂದ್ರಚೂಡ್ ಅವರ ಈ ನಡೆ ಸ್ವಹಿತಾಸಕ್ತಿಯಿಂದ ಕೂಡಿಲ್ಲವೇ' ಎಂದು ಇಂದ್ರವಜ್ರ ಎಂಬ ಟ್ವಿಟರ್ ಬಳಕೆದಾರರು ಆಕ್ಷೇಪ ಎತ್ತಿದ್ದಾರೆ. ಪತ್ರಕರ್ತ ರಾಘವ್ ಎಂಬುವರು ತಪ್ಪಾಗಿ ಅರ್ಥೈಸಿ ಮಾಡಿದ್ದ ಟ್ವೀಟ್ ಸಹ ಇದಕ್ಕೆ ಪುಷ್ಟಿ ನೀಡುವಂತಿದ್ದು, ಈ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಒಳಗಾಗಿದೆ. ಲೇಖಕ ರಾಜೀವ್ ಮಲ್ಹೋತ್ರಾ ಎಂಬುವರು ಚಂದ್ರಚೂಡ್ ವಿರುದ್ಧ ಇನ್ನಷ್ಟು ಆರೋಪಗಳನ್ನು ಮಾಡಿದ್ದಾರೆ. ಜೊತೆಗೆ ಆರ್.ಕೆ ಪಠಾಣ್ ಎಂಬುವರು ಚಂದ್ರಚೂಡ್ ವಿರುದ್ಧ ರಾಷ್ಟ್ರಪತಿಗೆ ದೂರು ನೀಡಿದ್ದಾರೆ ಎನ್ನಲಾದ ಪ್ರತಿ ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿದೆ.



ನ್ಯಾಯಮೂರ್ತಿ ಚಂದ್ರಚೂಡ್ ಅವರು ನವೆಂಬರ್ 8ರಂದು ಸುಪ್ರೀಂಕೋರ್ಟ್‌ನ ನೂತನ ಮುಖ್ಯನ್ಯಾಯಮೂರ್ತಿಯಾಗಿ (ಸಿಜೆಐ) ನೇಮಕವಾಗುವ ಸಾಧ್ಯತೆ ಇದೆ. ಹೀಗಾಗಿ ಅವರ ವಿರುದ್ಧ ಇಲ್ಲಸಲ್ಲದ ಟೀಕೆಗಳು ಹಾಗೂ ಆರೋಪಗಳು ಕೇಳಿಬರುತ್ತಿವೆ ಎಂದು 'ಬಾರ್ ಅಂಡ್ ಬೆಂಚ್' ಜಾಲತಾಣ ಅಭಿಪ್ರಾಯಪಟ್ಟಿದೆ. ಚಂದ್ರಚೂಡ್ ಅವರು ಅಮೆರಿಕದ ಗ್ರೀನ್‌ಕಾರ್ಡ್ ಹೊಂದಿಲ್ಲ, ಇದು ತಪ್ಪು ಮಾಹಿತಿ ಎಂದು ಸ್ಪಷ್ಟಪಡಿಸಿದೆ. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ಅರ್ಜಿದಾರರ ಸಂಘದ ಅಧ್ಯಕ್ಷ ಎಂದು ಹೇಳಿಕೊಂಡಿರುವ ಪಠಾಣ್ ಅವರು ಚಂದ್ರಚೂಡ್ ವಿರುದ್ಧ ಮಾಡಿರುವ ಭ್ರಷ್ಟಾಚಾರ ಆರೋಪ ಆಧಾರರಹಿತ ಎಂದು ತಿಳಿಸಿದೆ. 164 ಪುಟಗಳ ದೂರಿನಲ್ಲಿ ಯಾವುದೇ ನಂಬಲರ್ಹ ಅಂಶವೂ ಇಲ್ಲ ಎಂದು ಸುಪ್ರೀಂ ಕೋರ್ಟ್ ವಕೀಲರ ಸಂಘದ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ ಹೇಳಿದ್ದಾರೆ. ಸಿಜೆಐ ಆಗಲಿರುವ ಚಂದ್ರಚೂಡ್ ಅವರಿಗೆ ಮುಜುಗರ ಮಾಡುವ ಯತ್ನವಿದು ಎಂದು ಅವರು ಹೇಳಿದ್ದಾರೆ.

## ಬೆರಗಿನ ಬೆಳಕು

ಗುರುರಾಜ ಕರಜಗಿ



### ಹಕ್ಕಿ-ಮನುಷ್ಯರ ಬದುಕು

ಏನೊ ಕಣ್ಣನು ಪಿಡಿವುದೇನೊ ದಿಗಿಲಾಗಿಪುದು |
ಏನನೋ ನೆನೆದು ಪುರ್ರೆಂದು ಹಾರುವುದು ||
ಬಾನೊಳಾಡುವ ಹಕ್ಕಿಗಿದುವೆ ನಿತ್ಯಾನುಭವ |
ನೀನದನು ಮೀರಿಹೆಯ?


– ಮಂಕುತಿಮ್ಮ || 731 ||

**ಪದ-ಅರ್ಥ:** ಪಡಿವುದೇನೊ = ಪಿಡಿವುದು(ಹಿಡಿಯುವುದು) + ಏನೊ, ದಿಗಿಲಾಪುದು = ದಿಗಿಲು(ಆತಂಕ) + ಆಗಿಪುದು(ಆಗುವುದು), ಬಾನೊಳಾಡುವ = ಬಾನೊಳು(ಆಕಾಶದಲ್ಲಿ) + ಆಡುವ, ಹಕ್ಕಿಗಿದುವೆ = ಹಕ್ಕಿಗೆ + ಇದುವೆ.

**ವಾಚ್ಯಾರ್ಥ:** ಹಾರುವ ಹಕ್ಕಿಯ ಕಣ್ಣಿಗೆ ಏನೋ ಕಾಣುತ್ತದೆ, ಏನೋ ಅಪಾಯ ಬಂದಂತೆ ಗಾಬರಿಯಾಗುತ್ತದೆ, ಏನನ್ನೋ ನೆನೆಸಿಕೊಂಡು ಪುರ್ರನೆ ಹಾರಿ ಹೋಗುತ್ತದೆ. ಇದು ಆಕಾಶದಲ್ಲಿ ಹಾರುವ ಹಕ್ಕಿಯ ನಿತ್ಯದ ಅನುಭವ. ನಿನ್ನ ಬದುಕು ಈ ಬಗೆಯನ್ನು ಮೀರಿದೆಯಾ?

**ವಿವರಣೆ:** ಒಂದು ಹಕ್ಕಿಗಳ ಗುಂಪನ್ನು ನೋಡಿ. ಅದರಲ್ಲಿ ಒಂದು ಪಕ್ಷಿಯ ಮೇಲೆ ಹೆಚ್ಚು ಗಮನವಿಡಿ. ಅದು ಸರಸರನೆ ನಡೆಯುತ್ತದೆ. ಪುರ್ರೆಂದು ಹಾರಿ ಮತ್ತೊಂದು ಕಡೆಗೆ ಕೂಡ್ರುತ್ತದೆ. ಅಲ್ಲೊಂದೆರಡು ಕಾಳು ದೊರೆತದ್ದನ್ನು ತಿನ್ನುತ್ತದೆ. ಹಾಗೆ ತಿನ್ನುವಾಗಲೇ ಅಪಾಯದ ಸುಳಿವು ಬಂದಿತೆಂಬಂತೆ ಪುರ್ರೆಂದು ಹಾರಿಹೋಗುತ್ತದೆ. ಮತ್ತೆರಡು ಕ್ಷಣಗಳಲ್ಲಿ ಮರಳಿ ಬಂದು, ಗಾಬರಿಯಿಂದೆಂಬಂತೆ ಆ ಕಡೆಗೆ ಈ ಕಡೆಗೆ ನೋಡುತ್ತ ಅತ್ತಿತ್ತ ಚಲಿಸಿ ಹಾರುತ್ತದೆ. ಇದು ಪಕ್ಷಿಗೆ ನಿತ್ಯವೂ ಆಗುವ ಅನುಭವ. ಕಗ್ಗ ಕೇಳುತ್ತದೆ, ನಮ್ಮ ಅನುಭವ, ಪಕ್ಷಿಯ ಅನುಭವವನ್ನು ಮೀರಿದ್ದೇ? ನಮ್ಮ ಜೀವನವೂ ಹಾಗೆಯೇ ನಡೆಯುತ್ತದೆ ಅಲ್ಲವೆ? ಯಾವುದೋ ಒಂದು ವಸ್ತು, ರೂಪ ಕಣ್ಣನ್ನು ಸೆಳೆಯುತ್ತದೆ. ಆಗ ಅದರ ಹಿಂದೆಯೇ ಮನಸ್ಸು ನುಗ್ಗುತ್ತದೆ. ಅದನ್ನು ಪಡೆದೇ ತೀರಬೇಕೆಂದು ಹಟ ತೊಡುತ್ತದೆ. ಅದಕ್ಕಾಗಿ ಅನೇಕ ಬಾರಿ ಪೆಟ್ಟು ತಿನ್ನುತ್ತದೆ. ಹಕ್ಕಿಯ ಪರಿಸ್ಥಿತಿಯೇನೋ ತಿಳಿಯದು. ನಮಗೆ ಕಣ್ಣೊಂದೇ ಅಲ್ಲ, ಇನ್ನೂ ನಾಲ್ಕು ಇಂದ್ರಿಯಗಳು ಹೆಡೆಮುರಿಗೆ ಕಟ್ಟಿ ಎಳೆಯುತ್ತವೆ. ಅವುಗಳ ಅಪೇಕ್ಷೆಗಳನ್ನು ತೀರಿಸಲು ಜೀವ ಸಂಕಟಪಡುತ್ತದೆ. ಅಪಾಯಗಳಿಗೆ ಎದೆ ನೀಡುತ್ತದೆ. ಕಷ್ಟ ಬಂದಾಗ ಒದ್ದಾಡುತ್ತದೆ. ನಾವು ಏನನ್ನೋ ಯೋಚಿಸಿಕೊಂಡು ಕಾರ್ಯಮಾಡಲು ಮುಂದಾಗುತ್ತೇವೆ. ಮಧ್ಯದಲ್ಲಿ ಮತ್ತೇನೋ ನೆನಪಾಗಿ, ಹೊಸ ಚಿಂತನೆ ಬಂದು ಬದುಕಿನ ದಾರಿ ತಿರುಗುತ್ತದೆ. ಹೀಗೆ ಬಹುಪಾಲು, ಯಾವ ಗೊತ್ತುಗುರಿ ಇಲ್ಲದೆ ಜೀವನ ನಡೆದು ಹೋಗುತ್ತದೆ. ಹಾಗಾದರೆ ಮನುಷ್ಯನ ಬಾಳು ಹಕ್ಕಿಯಂತೆಯೇ? ಹಾಗಿದ್ದರೆ ಎಷ್ಟೋ ಚೆನ್ನಾಗಿತ್ತು ಎನ್ನಿಸುತ್ತದೆ. ಪಕ್ಷಿಗೆ ದುರಾಸೆ ಇಲ್ಲ. ಯಾರಿಗೂ ಮೋಸ ಮಾಡಲಾರದು. ಅಧರ್ಮದ ದಾರಿಯನ್ನು ಚಿಂತಿಸಲೂ ಆಗದು. ಯೋಜಿತವಲ್ಲದ ಪಕ್ಷಿಯ ಬದುಕು, ಯೋಜಿತವೆಂದು ಭಾವಿಸಿದ ಮನುಷ್ಯನ ಜೀವನಕ್ಕಿಂತ ಎಷ್ಟೋ ವಾಸಿ ಅಲ್ಲವೇ?

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 10, 2022

**ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಆಶ್ವಯುಜ ಕೃಷ್ಣಪ್ರತಿಪದ್ ಗಂ. 25-39 ನಕ್ಷತ್ರ: ರೇವತಿ ಗಂ. 16-02 ಯೋಗ: ವ್ಯಾಘಾತ ಗಂ. 16-42, ಕರಣ: ಬಾಲವ ಗಂ. 13-38, ಕನ್ಯಾ ಮಾಸದ 23 ನೇ ದಿನ.
**ರಾಹುಕಾಲ:** ಬೆಳಿಗ್ಗೆ 07-30–09:00
**ಸೂರ್ಯೋದಯ:** 06-24 ಸೂರ್ಯಾಸ್ತ: 06-11
**ಮುಸ್ಲಿಂ ದಿನಾಂಕ:** 13 ರಬಿಉಲ್ಲಾವಲ್
**ಅದೃಷ್ಟ ಸಂಖ್ಯೆ:** 2, 3

**ಮೇಷ:** ವ್ಯಾಪಾರ ವ್ಯವಹಾರದಲ್ಲಿ ನಿರೀಕ್ಷಿಸಿದ ಲಾಭ ಪಡೆಯಲು ಪರಿಶ್ರಮದ ಜೊತೆಯಲ್ಲಿ ಬುದ್ಧಿವಂತಿಕೆ ಬಹುಮುಖ್ಯವಾಗುವುದೆಂದು ತಿಳಿದುಬರುವುದು. ಗೆಳೆಯರ ಜೊತೆಗೂಡಿ ದೂರದ ಊರಿಗೆ ಪ್ರವಾಸಕ್ಕೆ ತೆರಳುವ ಮನಸ್ಸಾಗಲಿದೆ.

**ವೃಷಭ:** ದಿನಸಿ ವ್ಯವಹಾರಗಳಲ್ಲಿ ಹೆಚ್ಚಿನ ಹೂಡಿಕೆಯಿಂದ ಲಾಭವಾಗುವುದು. ಕಾರ್ಯರಂಗದಲ್ಲಿ ಪರಿವರ್ತನೆ ಕಂಡುಬರುವುದರಿಂದ ದುಡುಕದೆ ಕೆಲವೊಂದು ವಿಚಾರಗಳ ಬಗ್ಗೆ ಆಲೋಚನೆ ಮಾಡುವುದು ಉತ್ತಮ.

**ಮಿಥುನ:** ನಿಮ್ಮ ಒಳ್ಳೆಯ ಸ್ನೇಹಪರ ವರ್ತನೆಯಿಂದ ಅಕ್ಕ ಪಕ್ಕದವರಲ್ಲಿ ಬಾಂಧವ್ಯ ಬೆಳೆಯಲಿದೆ. ಸಹೋದ್ಯೋಗಿಗಳೊಂದಿಗೆ ಸಂಯಮದಿಂದ ವರ್ತಿಸಿ, ಅದರ ಫಲವಾಗಿ ಕೆಲಸ ಸಾಧಿಸಿಕೊಳ್ಳುವಿರಿ. ಷೇರು ಮಾರಾಟದಿಂದ ಲಾಭವಿದೆ.

**ಕರ್ಕಾಟಕ:** ತಾಂತ್ರಿಕ ಕ್ಷೇತ್ರದಲ್ಲಿನ ಕೆಲಸಗಾರರಿಗೆ ಹೆಚ್ಚಿನ ಒತ್ತಡ ಉಂಟಾಗುತ್ತದೆ. ಹಗಲು ರಾತ್ರಿಯ ವ್ಯತ್ಯಾಸವಿಲ್ಲದೇ ಶ್ರಮ ಪಡಬೇಕಾಗಲಿದೆ. ಕೋರ್ಟಿನ ವ್ಯವಹಾರಗಳು ಸಿಹಿ-ಕಹಿಯ ಮಿಶ್ರಫಲದಲ್ಲಿ ಇತ್ಯರ್ಥವಾಗಲಿದೆ.

**ಸಿಂಹ:** ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ವಿಶೇಷ ಗಮನ ಹರಿಸಬೇಕಾಗುತ್ತದೆ. ನಿಮ್ಮ ದೈನಂದಿನ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವ ಆಲೋಚನೆ ಕೈಗೂಡಲಿದೆ.

**ಕನ್ಯಾ:** ರಾಜಕೀಯ ರಂಗದವರೊಂದಿಗೆ ಸ್ನೇಹ ಸಂಪಾದನೆಯಾಗಲಿದೆ. ಕಾಫಿ, ಕಾಳುಮೆಣಸು ಹಾಗೂ ಏಲಕ್ಕಿ ಬೆಳೆಗಾರರು ಉತ್ತಮ ಫಸಲು ಎದುರು ನೋಡಬಹುದು. ಸಾಹಿತ್ಯ ಕ್ಷೇತ್ರದಲ್ಲಿ ಭಾಗಿಯಾಗಿ ಸಂತೋಷ ಪಡೆಯುವಿರಿ.

**ತುಲಾ:** ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಯ ದೂರಪಡಿಸಿಕೊಂಡು ಉತ್ತಮ ಕೆಲಸಗಳನ್ನು ಮಾಡುವಲ್ಲಿ ಮುಂದಾಗುವಿರಿ. ದೇವತಾನುಗ್ರದಿಂದ ಮಹಿಳೆಯರಿಗೆ ಉದ್ಯೋಗದಲ್ಲಿ ಅದೃಷ್ಟ ಬರಲಿದೆ.

**ವೃಶ್ಚಿಕ:** ನೀವು ಅನವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನ ಕೆಟ್ಟ ಆಲೋಚನೆಯನ್ನು ತೆಗೆದುಹಾಕಿ. ಆಂಜನೇಯ ಸಹಿತ ರಾಮಚಂದ್ರನನ್ನು ಮನಃಪೂರ್ವಕವಾಗಿ ಪೂಜಿಸಿಕೊಂಡು ಕೆಲಸ ಮುಂದುವರಿಸಿ.

**ಧನು:** ಉದ್ಯೋಗದಲ್ಲಿ ಅಧಿಕ ಲಾಭ ಮಾಡುವ ಉದ್ದೇಶದಲ್ಲಿ ಕೈ ಸುಡುವ ಕೆಲಸ ಮಾಡದಿರಿ. ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಿರಿ. ಸರಿ ತಪ್ಪುಗಳ ವಿಚಾರದಲ್ಲಿ ನೀವು ಈ ದಿನ ಯಾರಲ್ಲಿಯೂ ವಾದ ಮಾಡುವುದು ಸರಿಯಲ್ಲ.

**ಮಕರ:** ಸೃಜನಶೀಲ ಯೋಜನೆಗಳಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ಕ್ರಿಯಾಶೀಲರಾಗಿ ಮುಂದುವರಿದಲ್ಲಿ ವೈವಾಹಿಕ ಸಂಬಂಧಗಳು ಶುಭ ಸೂಚನೆ ತೋರಿ ಬರಲಿದೆ. ವೃತ್ತಿಯಲ್ಲಿ ಸಂಚಾರದಿಂದ ಅಧಿಕ ಲಾಭ.

**ಕುಂಭ:** ನಿಮ್ಮ ಅಗಾಧ ಅನುಭವ ಹಾಗೂ ಪ್ರಯತ್ನ ಬಲ, ಆತ್ಮವಿಶ್ವಾಸದಿಂದ ರಂಗಕಲೆಯಲ್ಲಿ ಹೆಸರು ಮಾಡುವಂತಾಗಲಿದೆ. ನಿಮ್ಮ ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂತಹ ಉತ್ತಮ ಅವಕಾಶಗಳು ಈ ದಿನ ಎದುರಾಗುವುವು.

**ಮೀನ:** ರೈತಾಪಿವರ್ಗದವರು ತಮ್ಮ ವೃತ್ತಿಯಲ್ಲಿ ಹೊಸ ಹೊಸತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರಿಂದ ಅಭಿವೃದ್ಧಿ ನೋಡಬಹುದು. ಫೋಟೋ ಸ್ಟುಡಿಯೋದವರಿಗೆ ಹೆಚ್ಚಿನ ಅವಕಾಶಗಳೊಂದಿಗೆ ಜನಪ್ರಿಯತೆ ಹೆಚ್ಚುವುದು.

## ಪದಬಂಧ 5104 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಚತುರತೆಯಿಂದಾಡುವ ಚೆಸ್ ಆಟ (4)
3.ದುಮುಗುಟ್ಟುತ್ತಿರುವ ಮದುವೆಯ ಗಂಡು (4)
5. ಅತಿಯಾದ ಉತ್ಸುಕತೆ (3)
6.ದಿನ ಬೆಳಗುವ ಸೂರ್ಯ (4)
8.ಯತಿಗೆ ಸಿಕ್ಕಿರುವ ರಿಬೇಟ್! (4)
10.ಕಸುವಿನಲ್ಲಿ ಆತುರಾತುರವಾಗಿ ನುಂಗು (4)
12.ಅವರು ತೋರುತ್ತಿರುವ ಆತುರ! (4)
14.ದಡಿ ಹಿಡಿದಿರುವ ದಾಂಡಿಗ! (3)
15.ಬಾಳೆಹಣ್ಣು ಬೆಲ್ಲದ ರಸವತ್ತಾದ ಮಿಶ್ರಣ (4)
16.ತರತರದ ಕಾಯಿಪಲ್ಲೆ(4)

**ಮೇಲಿಂದ ಕೆಳಕ್ಕೆ**
1.ನಾಲ್ಕು ಪಾದಗಳುಳ್ಳದ್ದು (4)
2. ಬೇರೆಯ ಉಪಾಯವು ಗರದೊಳಗಿದೆ(4)
3.ಮರದಲ್ಲಿ ಮಧುವನ್ನರಸುವ ಹೆಣ್ಣುತುಂಬಿ(4)
4.ಗಣದ ಮುಂದೆ ಪ್ರತ್ಯಕ್ಷನಾಗಿರುವ ವಿನಾಯಕ(4)
7.ಭವನದ ಹತ್ತಿರವಿರುವ ಮುಸಲ್ಮಾನ ದೊರೆ(3)
9.ಉಲ್ಟಾ ನಿಂತು ನೋಡಿರುವ ವೇಳೆ (3)
10.ಕಳೆಯಿದ್ದ ಜಾಗದಲ್ಲಿ ಕಾಣಿಸಿದ ಹಣ(4)
11. ವಿಷ್ಣುವಿನ ಕೈಯ್ಯಲ್ಲಿರುವ ಚಕ್ರಾಯುಧ(4)
12.ಆಯಸ್ಕಾಂತದ ಸೂಜಿಗಲ್ಲು (4)
13.ದಾರಿಯಲ್ಲಿ ಪಡೆದಿರುವ ಅಪ್ಪಣೆ ಚೀಟಿ(4)

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | | 4 |
| | ■ | ■ | | ■ | | ■ | ■ | |
| | ■ | ■ | 5 | | | ■ | ■ | |
| 6 | 7 | | | ■ | 8 | | 9 | |
| ■ | | ■ | ■ | ■ | ■ | ■ | | ■ |
| 10 | | | 11 | ■ | 12 | | | 13 |
| | ■ | ■ | 14 | | | ■ | ■ | |
| | ■ | ■ | | ■ | | ■ | ■ | |
| 15 | | | | ■ | 16 | | | |

### 5103ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಆಪಾದನೆ 3.ಪತ್ತೇದಾರ
5.ಸಿತಾರ 7.ಪರಧನ
9.ಡಪುಂ 10.ವರ್ಣ
11.ಜನಿವಾರ 14.ಸಂಗತಿ
16.ತರಂಗ 17.ಅತಿರೇಕ

**ಮೇಲಿಂದ ಕೆಳಕ್ಕೆ:**
1.ಆಲಸಿ 2.ದಸರ
3.ಪರಿಹಾರ 4.ರಜನಿ
6.ತಾರಾಪುಂಜ
7.ಪದರ 8.ನವನೀತ
12.ವಾಚಸ್ಪತಿ 13.ಪಂಡಿತ
14.ಸಂಗತಿ 15.ತಿರುಕ

## ಸುಡೊಕು 5490

| | | | | | | | | |
|---|---|---|---|---|---|---|---|---|
| | | 1 | | 7 | | 6 | | 2 |
| | | | 2 | | 9 | | | |
| 2 | 8 | | | 1 | | | 9 | 5 |
| | 5 | | 7 | | 4 | 8 | | |
| | | | | 8 | | 5 | | 9 |
| 8 | | 6 | 5 | | | | | 4 |
| 6 | | | | 5 | | 9 | | 7 |
| | 7 | | 1 | 3 | | | 5 | |
| 5 | | 3 | | 6 | | 1 | | 8 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5489 ಸುಡೊಕು

| | | | | | | | | |
|---|---|---|---|---|---|---|---|---|
| 9 | 2 | 1 | 6 | 5 | 7 | 8 | 4 | 3 |
| 8 | 5 | 7 | 3 | 4 | 9 | 6 | 2 | 1 |
| 6 | 4 | 3 | 2 | 1 | 8 | 9 | 5 | 7 |
| 1 | 3 | 2 | 5 | 9 | 4 | 7 | 8 | 6 |
| 5 | 8 | 6 | 1 | 7 | 2 | 3 | 9 | 4 |
| 7 | 9 | 4 | 8 | 3 | 6 | 2 | 1 | 5 |
| 3 | 1 | 8 | 9 | 6 | 5 | 4 | 7 | 2 |
| 2 | 7 | 5 | 4 | 8 | 3 | 1 | 6 | 9 |
| 4 | 6 | 9 | 7 | 2 | 1 | 5 | 3 | 8 |

# ಹಿಂದುಳಿದವರ ಉನ್ನತಿಗೆ ಮನಃಸ್ಥಿತಿ ಬದಲಾಗಬೇಕು: ಭಾಗವತ್

ಕಾನ್ಪುರ (ಪಿಟಿಐ): ಹಿಂದುಳಿದ ಸಮುದಾಯಗಳ ನೆರವಿಗೆ ಕೇವಲ ಕಾನೂನುಗಳನ್ನು ರೂಪಿಸಿದರಷ್ಟೇ ಸಾಲದು, ಅವರನ್ನು ಮೇಲೆತ್ತುವುದಕ್ಕಾಗಿ ನಮ್ಮ ಮಾನಸಿಕತೆಯಲ್ಲಿ ಬದಲಾವಣೆಯಾಗಬೇಕಿದೆ ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದರು.

ಇಲ್ಲಿನ ನಾನಾರಾವ್ ಉದ್ಯಾನದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಾಲ್ಮೀಕಿ ಸಮುದಾಯವು ತುಂಬಾ ಹಿಂದುಳಿದಿದ್ದು, ದುರ್ಬಲವಾಗಿದೆ. ಈ ಸಮುದಾಯ ಮುಂದುವರಿಯಬೇಕು. ದಲಿತರನ್ನು, ಪರಿಶಿಷ್ಟರನ್ನು ಮೇಲೆತ್ತಲು ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನದಲ್ಲಿ ಅವಕಾಶ ಕಲ್ಪಿಸಿದ್ದಾರೆ. ಇಂದು ಅವರಿಗೆ ರಾಜಕೀಯ, ಆರ್ಥಿಕ ಸ್ವಾತಂತ್ರ್ಯ ಸಿಕ್ಕಿದೆ. ಹಾಗೆಯೇ ಸಾಮಾಜಿಕ ಸ್ವಾತಂತ್ರ್ಯವೂ ಸಿಗಬೇಕು. ಅದಕ್ಕಾಗಿ ಸರ್ಕಾರವು ಕಾನೂನುಗಳನ್ನು ಜಾರಿಗೊಳಿಸಿದೆ. ಇದಷ್ಟೇ ಸಾಲದು, ನಿಜವಾದ ಸಮಾನತೆ, ಸಾಮಾಜಿಕ ಸ್ವಾತಂತ್ರ್ಯ ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲುವಂತೆ ಮಾಡಲು ಮನಸ್ಥಿತಿಗಳೂ ಬದಲಾಗಬೇಕು. ಇಲ್ಲದಿದ್ದರೆ ಕಾನೂನುಗಳಿಗೆ ಅರ್ಥವೇ ಇರುವುದಿಲ್ಲ' ಎಂದರು.

ವಾಲ್ಮೀಕಿ ಸಮುದಾಯದವರು ಆರೆಸ್ಸೆಸ್ ಶಾಖೆಗಳಿಗೆ ಭೇಟಿ ನೀಡಿ, ಸ್ವಯಂಸೇವಕರೊಂದಿಗೆ ಸಂವಾದ ನಡೆಸಬೇಕು ಎಂದು ಅವರು ಸಲಹೆ ನೀಡಿದರು.

### ಮೋಧೆರಾ: ಪ್ರಧಾನಿ ನರೇಂದ್ರ ಮೋದಿ ಘೋಷಣೆ– ₹14,600 ಕೋಟಿ ಯೋಜನೆಗಳಿಗೆ ಚಾಲನೆ

# ಮೊದಲ 24x7 ಸೌರಶಕ್ತಿ ಚಾಲಿತ ಗ್ರಾಮ

ಮೋಧೆರಾ (ಗುಜರಾತ್) (ಪಿಟಿಐ): ಮೆಹಸಾಣ ಜಿಲ್ಲೆಯ ಮೋಧೆರಾವನ್ನು ದೇಶದ ಮೊದಲ 24x7 ಸೌರಶಕ್ತಿ ಚಾಲಿತ ಗ್ರಾಮವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಘೋಷಿಸಿದರು.

ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಬೆನ್ನಲ್ಲೇ ಮೋದಿ ಅವರು ರಾಜ್ಯದಲ್ಲಿ ಮೂರು ದಿನಗಳ ಪ್ರವಾಸ ಕೈಗೊಂಡಿದ್ದು, 24x7 ಸೌರಶಕ್ತಿ ಚಾಲಿತ ಗ್ರಾಮ ಘೋಷಣೆ ಸಮಾರಂಭದಲ್ಲಿ ಪಾಲ್ಗೊಂಡರು.

ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಸೂರ್ಯ ದೇವಾಲಯದಿಂದ ಮೋಧೆರಾ ಪ್ರಸಿದ್ಧವಾಗಿತ್ತು. ಈಗ ಇದುಸೌರಶಕ್ತಿ ಚಾಲಿತ ಗ್ರಾಮವಾಗಿಯೂ ಹೆಸರು ಪಡೆಯಿತು ಎಂದರು.

ಮೋಧೆರಾದಲ್ಲಿ ದಿನದ 24 ತಾಸೂ ಸೌರ ವಿದ್ಯುತ್ ದೊರೆಯಲಿದೆ. ಗ್ರಾಮದಲ್ಲಿ ಸೌರ ವಿದ್ಯುತ್ ಸ್ಥಾವರ ಅಭಿವೃದ್ಧಿಪಡಿಸಲಾಗುತ್ತಿದೆ. ವಸತಿ, ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಯಲ್ಲಿ 1,300ಕ್ಕೂ ಹೆಚ್ಚು ಸೌರಫಲಕ ಅಳವಡಿಸಲಾಗಿದೆ ಎಂದು ಸರ್ಕಾರ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದೆ.

> ಗುಜರಾತ್‌ನ ಜನತೆ ನನ್ನ ಜಾತಿ, ರಾಜಕೀಯ ಹಿನ್ನೆಲೆ ನೋಡದೆ ಚುನಾವಣೆಯಲ್ಲಿ ಗೆಲ್ಲಿಸಿದರು
> **ನರೇಂದ್ರ ಮೋದಿ,** ಪ್ರಧಾನಿ

**ಜಾತಿ ನೋಡದೆ ಆಶೀರ್ವಾದ:** ಕಳೆದೆರಡು ದಶಕಗಳಿಂದ ರಾಜ್ಯದ ಜನರು ನನ್ನ ಜಾತಿ ನೋಡದೆ ಆಶೀರ್ವದಿಸಿದ್ದಾರೆ ಎಂದು ಮೋದಿ ಹೇಳಿದರು.

ಎರಡು ದಶಕಗಳ ಹಿಂದೆ ರಾಜ್ಯದಲ್ಲಿ ಒಂದು ಬೈಸಿಕಲ್ ಕೂಡ ತಯಾರಿಸಲಾಗದ ಪರಿಸ್ಥಿತಿ ಇದ್ದಿದ್ದನ್ನು, ವಿದ್ಯುತ್ ಮತ್ತು ನೀರಿನ ಅಭಾವ ಹಾಗೂ ಪದೇ ಪದೇ ವಿಧಿಸುತ್ತಿದ್ದ ಕರ್ಫ್ಯೂ ದಿನಗಳನ್ನು ಗುಜರಾತಿಗರು ಖಂಡಿತಾ ನೆನಪಿಸಿಕೊಳ್ಳುತ್ತಾರೆ. ಈಗ ರಾಜ್ಯದಲ್ಲಿ ಜಪಾನಿನ ಕಾರುಗಳು ತಯಾರಾಗುತ್ತಿವೆ. ಮುಂದಿನ ದಿನಗಳಲ್ಲಿ ವಿಮಾನಗಳ ನಿರ್ಮಾಣವೂ ಆರಂಭವಾಗಲಿದೆ ಎಂದು ಹೇಳಿದರು.

ನವ ಪೀಳಿಗೆಗಾಗಿ ರಾಜ್ಯವನ್ನು ಇನ್ನಷ್ಟು ಅಭಿವೃದ್ಧಿಪಡಿಸಲು 'ನರೇಂದ್ರ ಮತ್ತು ಭೂಪೇಂದ್ರ ತಂಡ'ವನ್ನು ಆಶೀರ್ವದಿಸಿ ಎಂದು ಅವರು ಜನರಿಗೆ ಮನವಿ ಮಾಡಿದರು.

ಪ್ರಧಾನಿ ಹುದ್ದೆಗೇರುವ ಮೊದಲು ಮೋದಿ ಅವರು 2001ರಿಂದ 2014ರವರೆಗೆ ಗುಜರಾತ್ ಮುಖ್ಯಮಂತ್ರಿ ಆಗಿದ್ದರು. ಮುಂಬರುವ ಗುಜರಾತ್ ವಿಧಾನಸಭೆ ಚುನಾವಣೆ ಆಡಳಿತರೂಢ ಬಿಜೆಪಿ ಪಾಲಿಗೆ ನಿರ್ಣಾಯಕ ಎನಿಸಿದೆ.

**ಕಾಮಗಾರಿಗೆ ಚಾಲನೆ:** ರಾಜ್ಯ ಪ್ರವಾಸದಲ್ಲಿ ಮೋದಿ ಅವರು ₹14,600 ಕೋಟಿಗೂ ಹೆಚ್ಚು ಮೊತ್ತದ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಸೋಮವಾರ ಭರೂಚ್ ಜಿಲ್ಲೆಯ ಅಮೋದ್‌ನಲ್ಲಿ ₹8,000 ಕೋಟಿಗೂ ಹೆಚ್ಚು ಮೌಲ್ಯದ ವಿವಿಧ ಯೋಜನೆಗಳನ್ನು ದೇಶಕ್ಕೆ ಸಮರ್ಪಿಸಲಿದ್ದಾರೆ.



ಗುಜರಾತ್‌ನ ಮೆಹಸಾಣ ಜಿಲ್ಲೆಯ ಮೋಧೆರಾದಲ್ಲಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮೊದಲ 24x7 ಸೌರಶಕ್ತಿ ಚಾಲಿತ ಗ್ರಾಮ ಘೋಷಣೆಯ ಜತೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು. ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಇದ್ದರು – ಪಿಟಿಐ ಚಿತ್ರ

## ವಿದ್ಯುತ್ ಸ್ಪರ್ಶ–ಆರು ಮಂದಿ ಸಾವು

ಬಹ್ರೈಚ್, ಉತ್ತರಪ್ರದೇಶ (ಪಿಟಿಐ): ಬಹ್ರೈಚ್ ಜಿಲ್ಲೆಯ ಮಸುಪುರ್ ಗ್ರಾಮದಲ್ಲಿ ಭಾನುವಾರ ನಸುಕಿನಲ್ಲಿ ಮೆರವಣಿಗೆ ನಡೆಯುತ್ತಿದ್ದ ವೇಳೆ ಗಾಡಿಯಲ್ಲಿದ್ದ ಕಬ್ಬಿಣದ ಸರಳೊಂದು ಹೈಟೆನ್ಶನ್ ತಂತಿಗೆ ಸ್ಪರ್ಶಿಸಿದ್ದರಿಂದ ಐವರು ಮಕ್ಕಳ ಸಹಿತ ಆರು ಮಂದಿ ಮೃತಪಟ್ಟಿದ್ದಾರೆ.

'ವೈರ್ ಸ್ಪರ್ಶಿಸುತ್ತಿದ್ದಂತೆ ಸ್ಥಳದಲ್ಲೇ ನಾಲ್ವರು ಮೃತಪಟ್ಟಿದ್ದಾರೆ.ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ್ದಾಗ ಇನ್ನೂ ಇಬ್ಬರು ಮೃತಪಟ್ಟಿದ್ದಾರೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮೀಣ) ಮಾಹಿತಿ ನೀಡಿದರು.

# ಆಯೋಗಕ್ಕೆ 3 ಚಿಹ್ನೆ ಸಲ್ಲಿಸಿದ ಉದ್ಧವ್ ಬಣ

ಮುಂಬೈ (ಪಿಟಿಐ): ತನ್ನ ಬಣಕ್ಕೆ ಚುನಾವಣಾ ಚಿಹ್ನೆಯಾಗಿ ನೀಡಲು ತ್ರಿಶೂಲ, ಉದಯ ಸೂರ್ಯ ಅಥವಾ ಉರಿಯುತ್ತಿರುವ ಟಾರ್ಚ್‌ನ ಪಟ್ಟಿಯನ್ನು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣವು ಚುನಾವಣಾ ಆಯೋಗಕ್ಕೆ ಸಲ್ಲಿಸಿದೆ ಎಂದು ಮೂಲಗಳು ಭಾನುವಾರ ಹೇಳಿವೆ.

ಅಂಧೇರಿ ಪೂರ್ವ ವಿಧಾನಸಭಾ ಕ್ಷೇತ್ರಕ್ಕೆ ನವೆಂಬರ್ 3ರಂದು ಉಪಚುನಾವಣೆ ನಡೆಯಲಿದೆ. ಶಿವಸೇನಾದ ಉದ್ಧವ್ ನೇತೃತ್ವದ ಬಣ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಣಗಳು ಶಿವಸೇನಾದ ಹೆಸರು ಅಥವಾ ಚಿಹ್ನೆಯಾದ ಬಿಲ್ಲು–ಬಾಣವನ್ನು ಉಪಯೋಗಿಸುವಂತಿಲ್ಲ ಎಂದು ಚುನಾವಣಾ ಆಯೋಗವು ಶನಿವಾರ ಆದೇಶಿಸಿದೆ. ಹೀಗಾಗಿ, ಉದ್ಧವ್ ಠಾಕ್ರೆ ಬಣವು ಹೊಸ ಚಿಹ್ನೆಗಳನ್ನು ಆಯೋಗಕ್ಕೆ ಸಲ್ಲಿಸಿದೆ.

> ಚುನಾವಣಾ ಆಯೋಗವು ಏಕನಾಥ ಶಿಂದೆ ಬೇಡಿಕೆಯ ಕುರಿತು ಅಂತಿಮ ತೀರ್ಪು ನೀಡುವಾಗ ಶಿಂದೆ ಅವರಿಗೇ ಜಯ ದೊರೆಯಲಿದೆ ಎಂಬುದು ನನ್ನ ಭಾವನೆ
> **ದೇವೇಂದ್ರ ಫಡಣವೀಸ್,** ಉಪಮುಖ್ಯಮಂತ್ರಿ, ಮಹಾರಾಷ್ಟ್ರ

ಹೆಸರು ಮತ್ತು ಚಿಹ್ನೆ ತಮಗೇ ಸೇರಿದ್ದು ಎಂದು ಎರಡೂ ಬಣಗಳ ನಡುವೆ ವಿವಾದ ಏರ್ಪಟ್ಟಿತ್ತು. ಹಾಗಾಗಿ, ಭಿನ್ನ ಚಿಹ್ನೆಗಳನ್ನು ಸೋಮವಾರದ ಒಳಗೆ ಸಲ್ಲಿಸುವಂತೆ ಆಯೋಗವು ಸೂಚಿಸಿತ್ತು.

ಉದ್ಧವ್ ಬಣವು ಪರ್ಯಾಯ ಹೆಸರನ್ನೂ ಸಲ್ಲಿಸಿದೆ ಎಂದು ಹೇಳಲಾಗಿದೆ. ಆದರೆ ಈ ಕುರಿತು ಹೆಚ್ಚಿನ ವಿವರಗಳನ್ನು ಮೂಲಗಳು ನೀಡಿಲ್ಲ.

### 'ಆಪರೇಷನ್ ವಿಭಜಿಸಿ ಆಳು'

ಮಹಾರಾಷ್ಟ್ರದಲ್ಲಿ ಬಿಜೆಪಿ ಮಾಡಿದ್ದು 'ಆಪರೇಷನ್ ಕಮಲ' ಅಲ್ಲ, ಬದಲಿಗೆ 'ಆಪರೇಷನ್ ವಿಭಜಿಸಿ ಆಳು' ಎಂದು ಎನ್‌ಸಿಪಿ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ಹೇಳಿದ್ದಾರೆ. ಬಾಳಾ ಸಾಹೇಬ್ ಠಾಕ್ರೆ ಅವರ ಶಿವಸೇನಾದ ಹೆಸರು ಮತ್ತು ಚಿಹ್ನೆಯನ್ನು ಬ್ರಿಟಿಷ್ ನೀತಿಯನ್ನು ಅನುಸರಿಸಿ ಸ್ಥಗಿತಗೊಳಿಸಲಾಗಿದೆ. ಈಗ ಮಾಡಿರುವ ತಂತ್ರವು ಬಿಜೆಪಿಗೆ ಮುಂದೊಂದು ದಿನ ತಿರುಗುಬಾಣವಾಗಬಹುದು ಎಂದೂ ಹೇಳಿದ್ದಾರೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಉದ್ಧವ್ ಅವರ ಪಕ್ಷವನ್ನು ಬೆಂಬಲಿಸಿ ಮಾತನಾಡಿದ್ದಾರೆ.

'ಹೊಸ ಚಿಹ್ನೆಯನ್ನು ಬಳಸಿಕೊಂಡು ಚುನಾವಣೆಯಲ್ಲಿ ಸ್ಪರ್ಧಿಸುವುದು ಶಿವಸೇನಾಕ್ಕೆ ಅನಿವಾರ್ಯ. ಯಾವ ಚಿಹ್ನೆಯಲ್ಲಿ ಸ್ಪರ್ಧಿಸಲಾಗುತ್ತಿದೆ ಎಂಬುದು ಮುಖ್ಯವಲ್ಲ. ಯಾರಿಗೆ ಬೆಂಬಲ ನೀಡಬೇಕು ಎಂಬುದನ್ನು ಜನರು ನಿರ್ಧರಿಸುತ್ತಾರೆ' ಎಂದು ಪವಾರ್ ಹೇಳಿದ್ದಾರೆ.

ಶಿವಸೇನಾ ಶಾಸಕ ರಮೇಶ್ ಲಟ್ಕೆ ನಿಧನದಿಂದಾಗಿ ಅಂಧೇರಿ ಪೂರ್ವ ವಿಧಾನಸಭಾ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದೆ. ಲಟ್ಕೆ ಅವರ ಹೆಂಡತಿ ರುಜುತಾ ಲಟ್ಕೆ ಅವರನ್ನು ಉದ್ಧವ್ ಬಣವು ಕಣಕ್ಕೆ ಇಳಿಸಿದೆ. ಕಾಂಗ್ರೆಸ್ ಮತ್ತು ಎನ್‌ಸಿಪಿ ಕೂಡ ಅವರಿಗೆ ಬೆಂಬಲ ಘೋಷಿಸಿವೆ.

## ಡಿಎಂಕೆ ಅಧ್ಯಕ್ಷ: ಸ್ಟಾಲಿನ್ ಮರು ಆಯ್ಕೆ

ಚೆನ್ನೈ (ಪಿಟಿಐ): ತಮಿಳುನಾಡಿನ ಆಡಳಿತರೂಢ ಡಿಎಂಕೆ ಪಕ್ಷದ ಅಧ್ಯಕ್ಷರಾಗಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಅವಿರೋಧವಾಗಿ ಮರು ಆಯ್ಕೆಗೊಂಡಿದ್ದಾರೆ.

ಭಾನುವಾರ ಇಲ್ಲಿ ನಡೆದ ಸಾಮಾನ್ಯ ಕೌನ್ಸಿಲ್ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ಪಕ್ಷದ ನಾಯಕರಾದ ದುರೈ ಮುರುಗನ್ ಅವರು ಮುಖ್ಯ ಕಾರ್ಯದರ್ಶಿಯಾಗಿ ಮತ್ತು ಟಿ.ಆರ್. ಬಾಲು ಅವರು ಖಜಾಂಚಿಯಾಗಿ ಅವಿರೋಧವಾಗಿ ಆಯ್ಕೆಗೊಂಡರು. ಇದರೊಂದಿಗೆ ಸ್ಟಾಲಿನ್ ಸೇರಿ ಮೂವರು ಎರಡನೇ ಬಾರಿಗೆ ಪಕ್ಷದ ಉನ್ನತ ಸ್ಥಾನಗಳಿಗೆ ಆಯ್ಕೆಗೊಂಡಂತಾಗಿದೆ.

### ಪೂಜಾ ಸ್ಥಳಗಳ ಕಾಯ್ದೆಯ ನಿಬಂಧನೆಗಳ ಸಿಂಧುತ್ವ

# ಎಐಎಂಪಿಎಲ್‌ಬಿನಿಂದ 'ಸುಪ್ರೀಂ'ಗೆ ಮಧ್ಯಂತರ ಅರ್ಜಿ

ನವದೆಹಲಿ (ಪಿಟಿಐ): 1991ರ ಪೂಜಾ ಸ್ಥಳಗಳ ಕಾಯ್ದೆಯ ಕೆಲ ನಿಬಂಧನೆಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಹಲವು ಅರ್ಜಿಗಳಿಗೆ ವಿರೋಧ ವ್ಯಕ್ತಪಡಿಸಿರುವ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು (ಎಐಎಂಪಿಎಲ್‌ಬಿ) ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದೆ.

ಯಾವುದೇ ಪೂಜಾ ಸ್ಥಳದ ಧಾರ್ಮಿಕ ಸ್ವರೂಪವು 1947ರ ಆಗಸ್ಟ್ 15ರಂದು ಹೇಗಿತ್ತೋ ಆ ರೀತಿಯಲ್ಲಿಯೇ ಅದನ್ನು ಕಾಯ್ದುಕೊಂಡು ಹೋಗುವ ಉದ್ದೇಶವನ್ನು ಈ ಕಾಯ್ದೆ ಹೊಂದಿದ್ದು, ಇದರ ಕೆಲ ನಿಬಂಧನೆಗಳು ಪೂಜಾ ಸ್ಥಳವನ್ನು ಮರಳಿ ಪಡೆಯುವುದಕ್ಕಾಗಿ ಮೊಕದ್ದಮೆ ಹೂಡುವ ಅವಕಾಶವನ್ನು ನಿರಾಕರಿಸುತ್ತದೆ.

'1991ರ ಪೂಜಾ ಸ್ಥಳಗಳ ಕಾಯ್ದೆಯು 'ಪ್ರಗತಿಪರ ಶಾಸನ'ವಾಗಿದೆ. ಜಾತ್ಯತೀತ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ. ಸಾಮರಸ್ಯ, ಸಾರ್ವಜನಿಕ ನೆಮ್ಮದಿಯನ್ನು ಉತ್ತೇಜಿಸುತ್ತದೆ. ವಿವಿಧ ವರ್ಗಗಳ ಜನರ ನಡುವೆ ಶಾಂತಿ ನೆಲೆಗೊಳ್ಳುವಂತೆ ಮಾಡುತ್ತದೆ' ಎಂದು ಎಐಎಂಪಿಎಲ್‌ಬಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಮಧ್ಯಂತರ ಅರ್ಜಿಯಲ್ಲಿ ತಿಳಿಸಿದೆ.

'ಈ ಕಾಯ್ದೆಯು ಸಂವಿಧಾನದ ಮೂಲಭೂತ ಲಕ್ಷಣಗಳ ಆಧಾರದ ಮೇಲೆ ರಚಿತವಾಗಿದೆ. ಇದು ಯಾವುದೇ ಬಗೆಯ ಸಾಂಸ್ಕೃತಿಕ ಹಕ್ಕುಗಳನ್ನೂ ಉಲ್ಲಂಘಿಸುವುದಿಲ್ಲ. ಹೀಗಾಗಿ ಸಂಬಂಧಿತ ಕಾಯ್ದೆಯ ಕೆಲ ನಿಬಂಧನೆಗಳನ್ನು ರದ್ದುಪಡಿಸುವ ಅಥವಾ ಅವುಗಳಿಗೆ ತಿದ್ದುಪಡಿ ಮಾಡುವ ಪ್ರಯತ್ನಕ್ಕೆ ಕೈಹಾಕಬಾರದು. ಹಾಗೆ ಮಾಡುವುದು ಅಸಾಂವಿಧಾನಿಕವೆನಿಸುತ್ತದೆ' ಎಂದು ಹೇಳಿದೆ.

'ವಿಶ್ವ ಭದ್ರಾ ಪೂಜಾರಿ ಪುರೋಹಿತ ಮಹಾಸಂಘ' ಹಾಗೂ ಇತರರು ಸಲ್ಲಿಸಿರುವ ಅರ್ಜಿಗಳು ರಾಜಕೀಯ ದುರುದ್ದೇಶಗಳನ್ನು ಒಳಗೊಂಡಿವೆ. ಈ ಅರ್ಜಿಗಳ ವಿಚಾರಣೆಯು ಹಲವು ಸಮಸ್ಯೆಗಳಿಗೆ ದಾರಿ ಮಾಡಿಕೊಡುತ್ತದೆ' ಎಂದೂ ಅರ್ಜಿಯಲ್ಲಿ ಉಲ್ಲೇಖಿಸಿದೆ.

ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ನ್ಯಾಯಪೀಠವು ಕಾಯ್ದೆಯ ಕೆಲ ನಿಬಂಧನೆಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಇದೇ 11 ರಂದು ನಡೆಸುವ ಸಾಧ್ಯತೆ ಇದೆ.

## ತರೂರ್ ಜತೆ ಸ್ಪರ್ಧೆ: ಕಾಂಗ್ರೆಸ್ ಅಭಿವೃದ್ಧಿಗೆ ಪೂರಕ– ಖರ್ಗೆ

ಶ್ರೀನಗರ (ಪಿಟಿಐ): ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಶಶಿ ತರೂರ್ ಅವರೊಂದಿಗಿನ ತಮ್ಮ ಸ್ಪರ್ಧೆ ದೇಶ ಮತ್ತು ಪಕ್ಷದ ಒಳಿತಿಗೆ ಮತ್ತೊಂದು ಆಯಾಮ ನೀಡಲಿದೆ ಎಂದು ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದ್ದಾರೆ.

ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ನಡೆದ ಪಕ್ಷದ ಕಾರ್ಯಕರ್ತರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಇದೊಂದು ಆಂತರಿಕ ಚುನಾವಣೆ. ಮನೆಯಲ್ಲಿನ ಇಬ್ಬರು ಸಹೋದರರು ಕಿತ್ತಾಡದೆ, ಅವರ ದೃಷ್ಟಿಕೋನವನ್ನು ಇಟ್ಟುಕೊಂಡು ಪರಸ್ಪರ ಮನವೊಲಿಸಲು ಪ್ರಯತ್ನಿಸುವಂತಹ ಸನ್ನಿವೇಶ ಇಲ್ಲಿ ಇದೆ' ಎಂದರು.

ಈ ಚುನಾವಣೆ ಪ್ರಚಾರ ವ್ಯಕ್ತಿಯೊಬ್ಬ ಪಕ್ಷದ ಅಧ್ಯಕ್ಷರಾದರೆ ಏನು ಮಾಡುತ್ತಾರೆ ಎಂಬುದರ ಬಗ್ಗೆ ಅಲ್ಲ. ಬದಲಿಗೆ ಒಟ್ಟಾಗಿ ಏನು ಮಾಡಬಹುದು. ಪಕ್ಷ ಮತ್ತು ದೇಶಕ್ಕಾಗಿ ನಾವೆಲ್ಲ ಒಟ್ಟಾಗಿ ಏನು ಮಾಡುತ್ತೇವೆ ಎಂಬುದು ಮಹತ್ವದ್ದು ಎಂದು ಖರ್ಗೆ ಅಭಿಪ್ರಾಯಪಟ್ಟರು.

**ಗಾಂಧಿ ಕುಟುಂಬದ ಆಶೀರ್ವಾದ (ಮುಂಬೈ ವರದಿ):** 'ಗಾಂಧಿ ಪರಿವಾರದ ಆಶೀರ್ವಾದ ನನಗೂ ಮತ್ತು ನನ್ನ ಪ್ರತಿಸ್ಪರ್ಧಿ ಅಭ್ಯರ್ಥಿ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಇದೆ. ಈ ವಿಚಾರದಲ್ಲಿ ಗಾಂಧಿ ಕುಟುಂಬ ಯಾವುದೇ ಪಕ್ಷಪಾತ ಮಾಡುತ್ತಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯ ಅಭ್ಯರ್ಥಿ, ಸಂಸದ ಶಶಿ ತರೂರ್ ಭಾನುವಾರ ಹೇಳಿದ್ದಾರೆ.

ಮುಂಬೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2024ರ ಚುನಾವಣೆಗೆ ಮುನ್ನ ಪಕ್ಷವನ್ನು ಬಲಪಡಿಸುವುದು ನಮ್ಮ ಉದ್ದೇಶ ಎಂದರು.

### ಬೌದ್ಧ ಧರ್ಮ ದೀಕ್ಷೆಯಲ್ಲಿ ಭಾಗಿ: ಪ್ರತಿಭಟಿಸಿದ ಬಿಜೆಪಿ

# ಎಎಪಿ ಸಚಿವ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಸರ್ಕಾರದ ಸಮಾಜ ಕಲ್ಯಾಣ ಸಚಿವ ರಾಜೇಂದ್ರ ಪಾಲ್ ಗೌತಮ್ ಅವರು ತಮ್ಮ ಸ್ಥಾನಕ್ಕೆ ಭಾನುವಾರ ರಾಜೀನಾಮೆ ನೀಡಿದ್ದಾರೆ. ಶುಕ್ರವಾರ ನಡೆದಿದ್ದ ಬೌದ್ಧ ಧರ್ಮಕ್ಕೆ ಮತಾಂತರ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸಿತ್ತು. 'ನಾನು ಕಾರ್ಯಕ್ರಮದಲ್ಲಿ ಭಾಗಿಯಾದ ಕಾರಣಕ್ಕೆ, ನಮ್ಮ ನಾಯಕ ಅರವಿಂದ ಕೇಜ್ರಿವಾಲ್ ಮತ್ತು ಎಎಪಿ ಸರ್ಕಾರಕ್ಕೆ ತೊಂದರೆ ಆಗಬಾರದು ಎಂದು ರಾಜೀನಾಮೆ ನೀಡುತ್ತಿದ್ದೇನೆ' ಎಂದು ಹೇಳಿದ್ದಾರೆ.

ದೆಹಲಿಯ ಅಂಬೇಡ್ಕರ್ ಭವನದಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ 10,000ಕ್ಕೂ ಹೆಚ್ಚು ಜನರು ಭಾಗಿಯಾಗಿದ್ದರು. ಅಲ್ಲಿ ಬೌದ್ಧ ಧರ್ಮ ದೀಕ್ಷೆಯನ್ನು ಬೋಧಿಸಲಾಗಿತ್ತು. ರಾಜೇಂದ್ರ ಪಾಲ್ ಸಹ ಕಾರ್ಯಕ್ರಮದ ವೇದಿಕೆಯಲ್ಲಿದ್ದರು. ಅವರ ವಿರುದ್ಧ ಬಿಜೆಪಿ ಹರಿಹಾಯ್ದಿತ್ತು. ರಾಜೇಂದ್ರ ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಬೆದರಿಕೆ ಸಹ ಹಾಕಲಾಗಿತ್ತು.

> ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಅವರ 22 ಪ್ರತಿಜ್ಞೆಗಳನ್ನು ಬಿಜೆಪಿ ಸದಾ ವಿರೋಧಿಸುತ್ತದೆ. ಹೀಗಾಗಿಯೇ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದು
> **ರಾಜೇಂದ್ರ ಪಾಲ್ ಸಿಂಗ್,** ಎಎಪಿ ಶಾಸಕ

ರಾಜೀನಾಮೆ ನೀಡಿದ ನಂತರ ರಾಜೇಂದ್ರ ಅವರು 'ನಾನೀಗ ಸ್ವತಂತ್ರನಾಗಿದ್ದೇನೆ' ಎಂದು ಟ್ವೀಟ್ ಮಾಡಿದ್ದಾರೆ. 'ಇಂದು ನಾನು ಸಂಕೋಲೆಗಳನ್ನು ತೆಗೆದುಹಾಕಿದ್ದೇನೆ. ಇದು ನನಗೆ ಹೊಸಹುಟ್ಟು. ಈಗ ಯಾವುದೇ ಸಂಕೋಲೆಗಳಿಲ್ಲದೆ ನಾನು ಜನರ ಹಕ್ಕುಗಳಿಗಾಗಿ ಮತ್ತು ಅವರ ಮೇಲಿನ ದೌರ್ಜನ್ಯದ ವಿರುದ್ಧ ಹೋರಾಡುತ್ತೇನೆ' ಎಂದು ಅವರು ಟ್ವೀಟ್ ಮಾಡಿದ್ದಾನೆ.

> ರಾಜೇಂದ್ರ ಪಾಲ್ ಅವರ ರಾಜೀನಾಮೆಯಿಂದ ಯಾವ ಬದಲಾವಣೆಯೂ ಆಗುವುದಿಲ್ಲ. ಅದರಿಂದ ಕೇಜ್ರಿವಾಲ್ ಅವರ ಸಿದ್ಧಾಂತಗಳೇನು ಬದಲಾಗುವುದಿಲ್ಲ
> **ರಾಮವೀರ್ ಸಿಂಗ್ ಬಿಧೂರಿ** ಬಿಜೆಪಿ ಮುಖಂಡ

**ಭಯದಿಂದ ರಾಜೀನಾಮೆ:** ಅರವಿಂದ ಕೇಜ್ರಿವಾಲ್ ಮತ್ತು ಎಎಪಿಯು ಹಿಂದೂ ವಿರೋಧಿ. ಗುಜರಾತ್ ಚುನಾವಣೆಯಲ್ಲಿ ಮುಳುವಾಗುತ್ತದೆ ಎಂದು ಹೆದರಿ, ರಾಜೇಂದ್ರ ಅವರ ರಾಜೀನಾಮೆ ಪಡೆಯಲಾಗಿದೆ ಎಂದು ದೆಹಲಿ ಬಿಜೆಪಿ ಘಟಕ ಆರೋಪಿಸಿದೆ.

## ಮತಾಂತರಗೊಂಡ ದಲಿತರಿಗೆ ಎಸ್‌ಸಿ ಸ್ಥಾನಮಾನ: ವಿರೋಧ

ನವದೆಹಲಿ: ಮುಸ್ಲಿಂ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿರುವ ದಲಿತರಿಗೆ ಪರಿಶಿಷ್ಟ ಜಾತಿ (ಎಸ್‌ಸಿ) ಸ್ಥಾನಮಾನ ನೀಡುವುದನ್ನು ವಿರೋಧಿಸಿ ದಲಿತ ಸಂಘಟನೆಗಳು ಭಾನುವಾರ ಅಭಿಯಾನ ಆರಂಭಿಸಿವೆ.

ಮತಾಂತರಗೊಂಡಿರುವ ದಲಿತರಿಗೆ ಎಸ್‌ಸಿ ಸ್ಥಾನಮಾನ ನೀಡಬೇಕೊ ಬೇಡವೊ ಎಂಬುದರ ಕುರಿತು ಪರಾಮರ್ಶೆ ನಡೆಸುವುದಕ್ಕಾಗಿ ಕೇಂದ್ರ ಸರ್ಕಾರವು ಆಯೋಗವೊಂದನ್ನು ರಚಿಸಿತ್ತು. ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣ ಅವರನ್ನು ಇದರ ಮುಖ್ಯಸ್ಥರನ್ನಾಗಿ ನೇಮಿಸಿತ್ತು. ಇದನ್ನು ವಿರೋಧಿಸಿ ನ್ಯಾಷನಲ್ ಕಾನ್ಫೆಡರೇಷನ್ ಆಫ್ ದಲಿತ್ ಆ್ಯಂಡ್ ಆದಿವಾಸಿ ಆರ್ಗನೈಸೇಷನ್ (ಎನ್‌ಎಸಿಡಿಎಒಆರ್) ಅಭಿಯಾನ ಕೈಗೊಂಡಿದೆ.

'ಮತಾಂತರಗೊಂಡಿರುವ ದಲಿತರನ್ನು ಪರಿಶಿಷ್ಟ ಜಾತಿಗೆ ಸೇರಿಸುವುದು 1932ರ ಪೂನಾ ಒಪ್ಪಂದಕ್ಕೆ ವಿರುದ್ಧವಾಗಿದೆ. ಪೂನಾ ಒಪ್ಪಂದವು ಮಹಾತ್ಮ ಗಾಂಧೀಜಿ, ಡಾ. ಬಿ.ಆರ್.ಅಂಬೇಡ್ಕರ್ ನಡುವೆ ನಡೆದಿತ್ತು. ಅದರಲ್ಲಿ ಮುಸ್ಲಿಮರು ಹಾಗೂ ಕ್ರಿಶ್ಚಿಯನ್ನರು ಪಾಲ್ಗೊಂಡಿರಲಿಲ್ಲ' ಎಂದು ಎನ್‌ಎಸಿಡಿಎಒಆರ್‌ನ ಮುಖ್ಯಸ್ಥ ಅಶೋಕ್ ಭಾರ್ತಿ ತಿಳಿಸಿದ್ದಾರೆ.

## ಸಂಕ್ಷಿಪ್ತ ಸುದ್ದಿ

### ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಜೆ.ಪಿ. ನಡ್ಡಾ ಮುಂದುವರಿಕೆ?

ನವದೆಹಲಿ (ಪಿಟಿಐ): ಜೆ.ಪಿ.ನಡ್ಡಾ ಅವರನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರನ್ನಾಗಿ 2024ರ ಲೋಕಸಭಾ ಚುನಾವಣೆವರೆಗೂ ಮುಂದುವರಿಸುವ ಸಾಧ್ಯತೆ ಇದೆ.

'ನಡ್ಡಾ (61) ಅವರ 3 ವರ್ಷಗಳ ಅಧಿಕಾರಾವಧಿ ಮುಂದಿನ ವರ್ಷದ ಜನವರಿಯಲ್ಲಿ ಕೊನೆಗೊಳ್ಳಲಿದೆ. ಅದಕ್ಕೂ ಮುನ್ನವೇ ಬಿಜೆಪಿ ಸಂಸದೀಯ ಮಂಡಳಿಯು ನಡ್ಡಾ ಅವರನ್ನು ಈ ಹುದ್ದೆಯಲ್ಲಿ ಮುಂದುವರಿಸುವ ಕುರಿತ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ. 'ರಾಷ್ಟ್ರೀಯ ಅಧ್ಯಕ್ಷ ಸ್ಥಾನದ ಚುನಾವಣೆಗೂ ಮುನ್ನ ಕನಿಷ್ಠ ಅರ್ಧದಷ್ಟು ರಾಜ್ಯ ಘಟಕಗಳ ಚುನಾವಣೆ ಮುಕ್ತಾಯಗೊಳ್ಳಬೇಕು ಎಂಬ ನಿಯಮವಿದೆ. ಆದರೆ ರಾಜ್ಯ ಘಟಕಗಳ ಚುನಾವಣಾ ಪ್ರಕ್ರಿಯೆ ಇನ್ನೂ ಶುರುವಾಗಿಲ್ಲ. ಹೀಗಾಗಿ ನಡ್ಡಾ ಅವರ ಮುಂದುವರಿಕೆ ಹಾದಿ ಸುಗಮವಾಗಿದೆ' ಎಂದು ಹೇಳಿವೆ.

### 'ಬಿಜೆಪಿ ಸೋಲನ್ನು ಅವರ ನಾಯಕರೇ ಬಯಸಿದ್ದಾರೆ'

ಧರ್ಮ್‌ಪುರ (ಗುಜರಾತ್) (ಪಿಟಿಐ): 'ಬಿಜೆಪಿಯ ಹಲವು ನಾಯಕರು, ಕಾರ್ಯಕರ್ತರು ನಮ್ಮ ಪಕ್ಷವನ್ನು ರಹಸ್ಯವಾಗಿ ಬೆಂಬಲಿಸುತ್ತಿದ್ದಾರೆ. ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಬೇಕು ಎಂದು ಅದೇ ಪಕ್ಷದ ಕಾರ್ಯಕರ್ತರು ಬಯಸುತ್ತಿದ್ದಾರೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದರು.

ವಲ್ಸದ್ ಜಿಲ್ಲೆಯಲ್ಲಿ ಭಾನುವಾರ ನಡೆದ ರ್‍ಯಾಲಿಯಲ್ಲಿ ಅವರು ಮಾತನಾಡಿದರು. 'ಯಾವೆಲ್ಲಾ ನಾಯಕರು, ಕಾರ್ಯಕರ್ತರು ಬಿಜೆಪಿ ಸೋಲಬೇಕು ಎಂದು ಬಯಸಿದ್ದೀರೋ, ನೀವೆಲ್ಲಾ ರಹಸ್ಯವಾಗಿ ನಮ್ಮ ಪಕ್ಷದ ಪರ ಕೆಲಸ ಮಾಡಿ' ಎಂದು ಹೇಳಿದರು.

### ಮುಸ್ಲಿಮರು ಕಾಂಡೋಮ್ ಹೆಚ್ಚು ಬಳಸುತ್ತಾರೆ, ಜನಸಂಖ್ಯೆ ಕ್ಷೀಣಿಸುತ್ತಿದೆ: ಒವೈಸಿ

ಹೈದರಾಬಾದ್ (ಪಿಟಿಐ): ಎರಡು ಮಕ್ಕಳ ನಡುವಿನ ಅಂತರ ಕಾಯ್ದುಕೊಳ್ಳಲು ಮುಸ್ಲಿಂ ಸಮುದಾಯದವರು ಕುಟುಂಬ ಯೋಜನಾ ಸಾಧನ ಕಾಂಡೋಮ್ ಅನ್ನು ಹೆಚ್ಚು ಬಳಸುತ್ತಾರೆ ಎಂದು ಆಲ್ ಇಂಡಿಯಾ ಮಜಿಲಿಸ್-ಇ-ಇತ್ತೇದುಲ್ ಮುಸ್ಲಿಮೀನ್ (ಎಐಎಂಐಎಂ) ಪಕ್ಷದ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಹೇಳಿದ್ದಾರೆ.

ಜನಸಂಖ್ಯೆ ಅಸಮತೋಲನದ ಬಗ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಇತ್ತೀಚೆಗೆ ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ಭಾನುವಾರ ಇಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, 'ಜನಸಂಖ್ಯೆ ಬೆಳವಣಿಗೆ ಚರ್ಚಿಸುವ ಮೊದಲು ಭಾಗವತ್ ಅಂಕಿ ಅಂಶ ಮುಂದಿಡಬೇಕು. ಮುಸ್ಲಿಮರ ಜನಸಂಖ್ಯೆ ಹೆಚ್ಚುತ್ತಿಲ್ಲ. ಆ ಬಗ್ಗೆ ಯಾವುದೇ ಆತಂಕ ಬೇಡ. ನಮ್ಮ ಜನಸಂಖ್ಯೆ ಕ್ಷೀಣಿಸುತ್ತಿದೆ' ಎಂದರು.

'ಇಬ್ಬರು ಮಕ್ಕಳ ನಡುವೆ ಹೆಚ್ಚು ಅಂತರ ಕಾಯ್ದುಕೊಳ್ಳುವವರು ಯಾರು ಗೊತ್ತಾ? ಮುಸ್ಲಿಮರೇ ಹೆಚ್ಚು ಅಂತರ ಕಾಯ್ದುಕೊಳ್ಳುತ್ತಾರೆ. ಕಾಂಡೋಮ್‌ಗಳನ್ನು ಯಾರು ಹೆಚ್ಚು ಬಳಸುತ್ತಾರೆ? ನಮ್ಮವರೇ ಹೆಚ್ಚು ಬಳಸುತ್ತಾರೆ. ಭಾಗವತ್ ಈ ಬಗ್ಗೆ ಮಾತನಾಡುವುದಿಲ್ಲ' ಎಂದು ಹೇಳಿದರು.

ನಾಗ್ಪುರದಲ್ಲಿ ದಸರಾ ವೇಳೆ ಹೇಳಿಕೆ ನೀಡಿದ್ದ ಭಾಗವತ್, ದೇಶದಲ್ಲಿ ಸಮುದಾಯ ಆಧಾರಿತ ಜನಸಂಖ್ಯಾ ಅಸಮತೋಲನ ಕಡೆಗಣಿಸುವಂತಿಲ್ಲ. ದೇಶದಲ್ಲಿ ಎಲ್ಲ ಧಾರ್ಮಿಕ ಸಮುದಾಯಗಳಿಗೆ ಅನ್ವಯವಾಗುವಂತೆ ಜನಸಂಖ್ಯಾ ನೀತಿಯನ್ನು ಜಾರಿಗೆ ತರಬೇಕು ಎಂದಿದ್ದರು.

### ಕೊಳದಲ್ಲಿ ಮುಳುಗಿ ಆರು ಮಕ್ಕಳು ಸಾವು

ಗುರುಗ್ರಾಮ (ಪಿಟಿಐ): ಹರಿಯಾಣದ ಗುರುಗ್ರಾಮದಲ್ಲಿ ಮಳೆನೀರು ತುಂಬಿದ್ದ ಕೊಳದಲ್ಲಿ ಸ್ನಾನ ಮಾಡಲು ಭಾನುವಾರ ಮಧ್ಯಾಹ್ನ ಇಳಿದಿದ್ದ ಆರು ಮಕ್ಕಳು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮೃತಪಟ್ಟವರು 8ರಿಂದ 13 ವರ್ಷದೊಳಗಿನ ಬಾಲಕರು ಎಂದು ಪೊಲೀಸರು ತಿಳಿಸಿದ್ದಾರೆ.

# ಎಸ್‌ಐಪಿ ಯಾವಾಗ ನಿಲ್ಲಿಸಬೇಕು?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

**ಷೇರು** ಅಥವಾ ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು ಹಿಂಪಡೆಯಲು (ನಗದೀಕರಿಸಲು) ಸೂಕ್ತ ಸಮಯ ಯಾವುದು? ಈಗ ಹಿಂಪಡೆದರೆ ಒಳಿತಾ? ಇನ್ನೂ ಲಾಭಗಳಿಕೆಯ ಸಾಧ್ಯತೆ ಇದೆಯಾ?

ಷೇರು ಮಾರುಕಟ್ಟೆ ಸೂಚ್ಯಂಕಗಳು ದೊಡ್ಡ ಏರಿಕೆ ಕಂಡಾಗ ಅಥವಾ ಹೆಚ್ಚು ಕುಸಿತ ದಾಖಲಿಸಿದಾಗ ಹೂಡಿಕೆದಾರರಿಗೆ ಸಾಮಾನ್ಯವಾಗಿ ಎದುರಾಗುವ ಪ್ರಶ್ನೆ ಇದು. ಬಹುಪಾಲು ಹೂಡಿಕೆದಾರರು ಕೇಳುವ ಈ ಮಿಲಿಯನ್ ಡಾಲರ್ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡೋಣ.

**ಜೋ ಕೆನಡಿ ಘಟನೆ:** ಅಮೆರಿಕದ ಅಧ್ಯಕ್ಷ ಜಾನ್ ಎಫ್. ಕೆನಡಿ ಅವರ ತಂದೆ ಜೋ ಕೆನಡಿ, ವಾಲ್ ಸ್ಟ್ರೀಟ್‌ನಲ್ಲಿ 1929ರಲ್ಲಿ ಹೂಡಿಕೆ ಸಂಸ್ಥೆಯೊಂದನ್ನು ನಡೆಸುತ್ತಿದ್ದರು. ಆ ಸಂದರ್ಭದಲ್ಲಿ ಜೋ ಕೆನಡಿಯವರ ಬೂಟ್ ಪಾಲಿಶ್ ಮಾಡುತ್ತಿದ್ದ ವ್ಯಕ್ತಿಯೊಬ್ಬ ಷೇರುಗಳ ಬಗ್ಗೆ ಟಿಪ್ಸ್ ಕೊಡಲು ಶುರು ಮಾಡಿದ. ಆ ಕ್ಷಣದಲ್ಲಿ ಜೋ ಕೆನಡಿ ಅವರಿಗೆ, 'ಮಾರುಕಟ್ಟೆಯಲ್ಲಿ ತಲೆಬುಡವಿಲ್ಲದ ತರ್ಕರಹಿತ ಲೆಕ್ಕಾಚಾರಗಳು ಆರಂಭವಾಗಿದ್ದು, ಹೂಡಿಕೆ ಬಗ್ಗೆ ಒಂದು ಸಮೂಹಸನ್ನಿಯ ಸಂದರ್ಭ ನಿರ್ಮಾಣವಾಗಿದೆ' ಅನಿಸತೊಡಗಿತು. ಪೇಟೆಯಲ್ಲಿನ ಗೂಳಿ ಓಟ ಕೊನೆಗೊಳ್ಳಬಹುದು ಎಂಬ ಅಂದಾಜಾಯಿತು. ಹೀಗೆ ಅಂದಾಜು ಮಾಡಿದ ಜೋ ಕೆನಡಿ, ಕೂಡಲೇ ತಮ್ಮ ಷೇರುಗಳನ್ನು ಮಾರಾಟ ಮಾಡಿ ಲಾಭ ಗಳಿಸಿಕೊಳ್ಳಲು ಮುಂದಾದರು.

1929ರ ಆರ್ಥಿಕ ಕುಸಿತ ಆರಂಭವಾಗುವ ವೇಳೆಗೆ ಜೋ ಕೆನಡಿ ಬಹುತೇಕ ಹೂಡಿಕೆಗಳನ್ನು ಹಿಂಪಡೆದು ಲಾಭ ಗಳಿಸಿಕೊಂಡಿದ್ದರು. ಈ ಘಟನೆಯು ಹೂಡಿಕೆಗಳನ್ನು ಸರಿಯಾದ ಸಮಯಕ್ಕೆ ಹಿಂಪಡೆದು ಲಾಭ ಮಾಡಿಕೊಳ್ಳುವುದು ಎಷ್ಟು ಮುಖ್ಯ ಎನ್ನುವುದನ್ನು ತಿಳಿಸಿಕೊಡುತ್ತದೆ.

**ಕುಸಿತದ ಮುನ್ಸೂಚನೆ ಮತ್ತು ನಗದೀಕರಣ:** ಕಂಪನಿ ಎಷ್ಟು ಗಳಿಕೆ ಮಾಡಿದೆ ಎನ್ನುವುದನ್ನು ತಿಳಿಸುವ ಬದಲು ಕಂಪನಿ ಬೆಳವಣಿಗೆ ಸಾಧಿಸಿದೆ ಎಂದಷ್ಟೇ ಹೇಳುವ ಸಂದರ್ಭ ಬಂದರೆ ಅದು ಮಾರುಕಟ್ಟೆ ಮುಗ್ಗರಿಸುವ ಸೂಚನೆ ಎಂದುಕೊಳ್ಳಬಹುದು. ಕೆಲವು ಷೇರುಗಳು ಕಾರಣವಿಲ್ಲದೆ ಏರಿಕೆ ಕಂಡರೆ ಅದು ಮಾರುಕಟ್ಟೆ ತಳಮಳದ ಮುನ್ಸೂಚನೆ. ಕೆಲವು ಸಣ್ಣ ಕಂಪನಿಗಳ ಷೇರು ಬೆಲೆಯ ಗಣನೀಯ ಏರಿಕೆ ಕೂಡ ಮಾರುಕಟ್ಟೆ ನೆಲಕಚ್ಚುವುದರ ಒಂದು ಲಕ್ಷಣ. ಐಪಿಒಗಳಲ್ಲಿ ಜನ ಅತಿಯಾಗಿ ಹೂಡಿಕೆ ಮಾಡಲು ಮುಂದಾಗುತ್ತಿದ್ದರೆ, ಮಾರುಕಟ್ಟೆ ಕುಸಿತದ ಸಾಧ್ಯತೆಯಿದೆ ಎಂದು ಹೂಡಿಕೆದಾರ ಜಾಗೃತನಾಗಬೇಕು.

ಕಂಪನಿಗಳ ಮೌಲ್ಯ ಮಾಪನದಲ್ಲಿ ಅತಿಯಾದ ಹೆಚ್ಚಳವೂ, ಮಾರುಕಟ್ಟೆ ಇಳಿಕೆಯತ್ತ ಸಾಗಿದೆ ಎನ್ನುವುದರ ಸೂಚಕ. ಇಂತಹ ಸಂದರ್ಭಗಳಲ್ಲಿ ಹೂಡಿಕೆಯ ಒಂದಷ್ಟು ಮೊತ್ತವನ್ನು ನಗದೀಕರಿಸುವುದು ಸೂಕ್ತ. ಎಸ್‌ಐಪಿ (ಅಂದರೆ ವ್ಯವಸ್ಥಿತ ಹೂಡಿಕೆ ಯೋಜನೆ) ಮಾಡುವಾಗ ಹೇಗೆ ನಿಮಗೆ ಸರಾಸರಿ ಲಾಭವಾಗುತ್ತದೋ ಅದೇ ರೀತಿಯಲ್ಲಿ ಹೂಡಿಕೆಗಳ ನಗದೀಕರಣ ಮಾಡುವಾಗಲೂ ಹಂತ ಹಂತವಾಗಿ ಹೂಡಿಕೆ ಹಿಂಪಡೆದರೆ ಸರಾಸರಿಯ ಲಾಭ ದೊರಕುತ್ತದೆ.

ಷೇರು, ಮ್ಯೂಚುವಲ್ ಫಂಡ್ ನಗದೀಕರಣ ಮಾಡುವಾಗ ಅದರ ಮರು ಹೂಡಿಕೆ ಯೋಜನೆಯೂ ನಿಮ್ಮಲ್ಲಿರಬೇಕು. ನಗದೀಕರಣ ಮಾಡಿದ ಮೊತ್ತವನ್ನು ನಿಶ್ಚಿತ ಠೇವಣಿ (ಎಫ್.ಡಿ), ಚಿನ್ನ, ಅಲ್ಪಾವಧಿ ಡೆಟ್ ಫಂಡ್‌ಗಳಂತಹ ಸುರಕ್ಷಿತ ಹೂಡಿಕೆಗಳಲ್ಲಿ ತೊಡಗಿಸುವ ಯೋಜನೆ ಹಾಕಿಕೊಳ್ಳಬೇಕು.

**ಗುರಿ ತಲುಪುವಿಕೆ ಮತ್ತು ನಗದೀಕರಣ:** ಹೂಡಿಕೆ ಮಾಡುವಾಗ ನಮಗೆ ನಿರ್ದಿಷ್ಟ ಗುರಿ ಇರುತ್ತದೆ. ಅದು ಲ್ಯಾಪ್‌ಟಾಪ್ ಖರೀದಿ, ಶಾಲೆ ಶುಲ್ಕ ಪಾವತಿಯಂತಹ ಅಲ್ಪಾವಧಿ ಗುರಿ ಇರಬಹುದು ಅಥವಾ ಮನೆ ಖರೀದಿ, ಕಾರು ಖರೀದಿಯಂತಹ ದೀರ್ಘಾವಧಿ ಗುರಿ ಇರಬಹುದು. ನಿಮ್ಮ ನಿರ್ದಿಷ್ಟ ಹಣಕಾಸಿನ ಗುರಿ ತಲುಪಿದಾಗ ಎಸ್‌ಐಪಿ ಹೂಡಿಕೆಗಳ ನಗದೀಕರಣಕ್ಕೆ ಮುಂದಾಗಬಹುದು. ದೀರ್ಘಾವಧಿ ಹೂಡಿಕೆಗಳ ವಿಚಾರಕ್ಕೆ ಬಂದಾಗ ನಿಮ್ಮ ನಿರ್ದಿಷ್ಟ ಹಣಕಾಸಿನ ಗುರಿ ತಲುಪುವ ಮುನ್ನವೇ ಹೂಡಿಕೆ ನಗದೀಕರಣ ಯೋಜನೆ ಜಾರಿಗೆ ತರಬೇಕು.

## ಚೇತರಿಕೆ ಕಂಡ ಷೇರುಪೇಟೆ ಸೂಚ್ಯಂಕಗಳು




**ಅಕ್ಟೋಬರ್ 7ಕ್ಕೆ** ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಚೇತರಿಕೆ ಕಂಡಿವೆ. 58,191 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.33ರಷ್ಟು ಗಳಿಸಿಕೊಂಡಿದೆ. 17,314 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ಶೇ 1.28ರಷ್ಟು ಗಳಿಕೆ ದಾಖಲಿಸಿದೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಖರೀದಿ ಭರಾಟೆ, ಜಿಎಸ್‌ಟಿ ಸಂಗ್ರಹ ಹೆಚ್ಚಳ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಿಶ್ರ ಪ್ರತಿಕ್ರಿಯೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ರೂಪಾಯಿ ಮೌಲ್ಯ ಕುಸಿತ ಮಾರುಕಟ್ಟೆ ಮೇಲೆ ಅಷ್ಟಾಗಿ ಪರಿಣಾಮ ಬೀರಿಲ್ಲ. ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಲೋಹ ವಲಯ ಶೇ 5.7ರಷ್ಟು ಜಿಗಿದಿದೆ. ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕ ಶೇ 3.6ರಷ್ಟು, ರಿಯಾಲ್ಟಿ ಸೂಚ್ಯಂಕ ಶೇ 3.4ರಷ್ಟು ಹೆಚ್ಚಳ ಕಂಡಿವೆ. ಎಫ್‌ಎಂಸಿಜಿ ಸೂಚ್ಯಂಕ ಶೇ 1ರಷ್ಟು ಇಳಿಕೆಯಾಗಿದೆ. ದೇಶಿ ಹೂಡಿಕೆದಾರರು ಕಳೆದ ವಾರ ₹ 1,024.09 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಜಿಗಿದಿದ್ದು ಜೊಮ್ಯಾಟೊ, ಪೇಟಿಎಂ, ಜೈಡಸ್ ಲೈಫ್ ಸೈನ್ಸಸ್, ಕೋಲ್ ಇಂಡಿಯಾ, ವೇದಾಂತ, ಹಿಂದೂಸ್ಥಾನ್ ಜಿಂಕ್ ಮತ್ತು ಎನ್‌ಎಂಡಿಸಿ ಗಳಿಕೆ ದಾಖಲಿಸಿವೆ. ಮಿಡ್ ಕ್ಯಾಪ್ ಸೂಚ್ಯಂಕ ಶೇ 2ರಷ್ಟು ಹೆಚ್ಚಳ ದಾಖಲಿಸಿದ್ದು ಜೆಎಸ್‌ಡಬ್ಲ್ಯು ಎನರ್ಜಿ, ಭಾರತ್ ಫೋರ್ಜ್, ಜೀ ಎಂಟರ್‌ಟೇನ್ಮೆಂಟ್ ಎಂಟರ್‌ಪ್ರೈಸಸ್, ಮಹಿಂದ್ರ ಆ್ಯಂಡ್ ಮಹಿಂದ್ರ ಫೈನಾನ್ಶಿಯಲ್ ಸರ್ವಿಸಸ್, ದೀಪಕ್ ನೈಟ್ರೇಟ್, ಆಯಿಲ್ ಇಂಡಿಯಾ ಮತ್ತು ಪರ್ಸಿಸ್ಟೆಂಟ್ ಸಿಸ್ಟಮ್ಸ್ ಗಳಿಸಿಕೊಂಡಿವೆ. ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 2.5ರಷ್ಟು ಗಳಿಸಿಕೊಂಡಿದ್ದು ಮ್ಯಾಕ್ಸ್ ವೆಂಚರ್ಸ್ ಆ್ಯಂಡ್ ಇಂಡಸ್ಟ್ರೀಸ್, ಜಯಪ್ರಕಾಶ್ ಅಸೋಸಿಯೇಟ್ಸ್, ದೀಪ್ ಇಂಡಸ್ಟ್ರೀಸ್, ಗಾಯತ್ರಿ ಪ್ರಾಜೆಕ್ಟ್ಸ್, ಎಚ್‌ಬಿಎಲ್ ಪವರ್ ಸಿಸ್ಟಮ್ಸ್ ಗಳಿಕೆ ದಾಖಲಿಸಿವೆ.

**ಮುನ್ನೋಟ:** ಈ ವಾರ ಟಿಸಿಎಸ್, ಎಚ್‌ಸಿಎಲ್ ಟೆಕ್, ವಿಪ್ರೊ, ಇನ್ಫೊಸಿಸ್, ಮೈಂಡ್ ಟ್ರೀ, ಬಜಾಜ್ ಆಟೊ, ಡೆಲ್ಟಾ ಕಾರ್ಪ್, ಫೆಡರಲ್ ಬ್ಯಾಂಕ್ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ಮತ್ತು ದೇಶಿ ವಿದ್ಯಮಾನಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಉದಾಹರಣೆಗೆ, ನೀವು ₹ 50 ಲಕ್ಷ ಮೌಲ್ಯದ ಫ್ಲ್ಯಾಟ್ ಖರೀದಿ ಉದ್ದೇಶಕ್ಕಾಗಿ ಈಕ್ವಿಟಿ ಮ್ಯೂಚುವಲ್ ಫಂಡ್‌ನಲ್ಲಿ ಹಲವು ವರ್ಷಗಳಿಂದ ಹೂಡಿಕೆ ಮಾಡುತ್ತಾ ಬಂದಿದ್ದು, ₹ 40 ಲಕ್ಷ ಮೊತ್ತದ ಗುರಿಯನ್ನು ಮ್ಯೂಚುವಲ್ ಫಂಡ್ ಹೂಡಿಕೆ ಮೂಲಕ ಸಾಧಿಸಿದ್ದೀರಿ ಎಂದಿಟ್ಟುಕೊಳ್ಳಿ. ಈ ಹಂತದಲ್ಲಿ ಮಾರುಕಟ್ಟೆಯಲ್ಲಿ ದಿಢೀರ್ ಕುಸಿತ ಉಂಟಾಗಿ, ನಿಮ್ಮ ₹ 40 ಲಕ್ಷವು ಇದ್ದಕ್ಕಿದ್ದಂತೆ ₹ 30 ಲಕ್ಷಕ್ಕೆ ಕುಸಿದುಬಿಡುತ್ತದೆ ಎಂದು ಭಾವಿಸಿ. ಹೀಗಾಗಲು ಬಿಡುವುದು ಸರಿಯೇ?


ಖಂಡಿತ ಇಲ್ಲ. ಇಂತಹ ಇಕ್ಕಟ್ಟಿನ ಸಂದರ್ಭ ಎದುರಾಗದಂತೆ ನೋಡಿಕೊಳ್ಳಲು ನೀವು ಗುರಿ ತುಲುಪುವ ಹಂತದಲ್ಲಿರುವಾಗಲೇ ಕ್ರಮಬದ್ಧವಾಗಿ ಹೂಡಿಕೆ ನಗದೀಕರಣಕ್ಕೆ ಮುಂದಾಗಬೇಕು. ಹೆಚ್ಚು ರಿಸ್ಕ್ ಇರುವ ಈಕ್ವಿಟಿ ಮ್ಯೂಚುವಲ್ ಫಂಡ್‌ನಿಂದ ನಿಶ್ಚಿತ ಠೇವಣಿಯಂತಹ ಸುರಕ್ಷಿತ ಹೂಡಿಕೆಗಳಿಗೆ ಹಣ ವರ್ಗಾಯಿಸಿಕೊಳ್ಳಬೇಕು. ಫಂಡ್‌ನಿಂದ ಸಿಗುವ ಲಾಭ ಕಳಪೆ ಆಗಿದ್ದರೆ ಆ ಫಂಡ್‌ನಿಂದ ಹೊರಬರುವ ಆಲೋಚನೆ ಮಾಡಬಹುದು. ಹೀಗೆ ಮಾಡಿದಾಗ ನಿಮಗೆ ಉಂಟಾಗುವ ಸಂಭಾವ್ಯ ನಷ್ಟವನ್ನು ತಗ್ಗಿಸಬಹುದು.

**ಪೋರ್ಟ್‌ಫೋಲಿಯೊ ಪರಿಷ್ಕರಣೆಗೆ:** ಸಾಮಾನ್ಯವಾಗಿ, ಉಳಿತಾಯದ ಶೇಕಡ 60ರಷ್ಟು ಹಣವನ್ನು ಷೇರುಪೇಟೆಯಲ್ಲಿ ಹಾಗೂ ಶೇ 40ರಷ್ಟು ಹಣವನ್ನು ಸುರಕ್ಷಿತ ಹೂಡಿಕೆಗಳಲ್ಲಿ ತೊಡಗಿಸಬೇಕೆಂದು ನೀವು ತೀರ್ಮಾನಿಸಿರುತ್ತೀರಿ. ಆದರೆ ಮಾರುಕಟ್ಟೆ ಏರಿಳಿತದ ಕಾರಣದಿಂದ ಪೋರ್ಟ್‌ಫೋಲಿಯೊದಲ್ಲಿ ಈ ಮಾನದಂಡದಲ್ಲಿ ವ್ಯತ್ಯಾಸವಾದಾಗ ಅದನ್ನು ಸರಿಪಡಿಸಿಕೊಳ್ಳಲು ಹೂಡಿಕೆಯ ಕೆಲವು ಭಾಗವನ್ನು ನಗದೀಕರಿಸಬೇಕಾಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

### ಕೇಂದ್ರ ಹಣಕಾಸು ಸಚಿವಾಲಯದಿಂದ ಪರಿಶೀಲನೆ

# ಚೆಕ್ ಬೌನ್ಸ್ ನಿಗ್ರಹಕ್ಕೆ ಅಸ್ತ್ರ?



ನವದೆಹಲಿ (ಪಿಟಿಐ): ಚೆಕ್ ಬೌನ್ಸ್ ಆದಾಗ, ಚೆಕ್ ನೀಡಿದ ವ್ಯಕ್ತಿಯ ಬೇರೆ ಖಾತೆಗಳಿಂದ ಹಣ ಕಡಿತ ಮಾಡುವ ಹಾಗೂ ಮುಂದೆ ಆ ವ್ಯಕ್ತಿ ಹೊಸ ಖಾತೆ ತೆರೆಯುವುದನ್ನು ನಿರ್ಬಂಧಿಸುವ ಸಾಧ್ಯತೆಗಳ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸಿದೆ.

ನ್ಯಾಯಾಂಗ ವ್ಯವಸ್ಥೆಗೆ ಹೊರೆಯಾಗಿ ಪರಿಣಮಿಸಿರುವ ಚೆಕ್ ಬೌನ್ಸ್ ಪ್ರಕರಣಗಳನ್ನು ಕಡಿಮೆ ಮಾಡುವ ಉದ್ದೇಶ ಸಚಿವಾಲಯದ ಈ ಕ್ರಮದ ಹಿಂದೆ ಇದೆ. ಚೆಕ್ ಬೌನ್ಸ್ ಪ್ರಕರಣಗಳು ಹೆಚ್ಚಾಗುತ್ತಿರುವುದರ ಬಗ್ಗೆ ಚರ್ಚಿಸಲು ಸಚಿವಾಲಯ ಈಚೆಗೆ ನಡೆಸಿದ ಸಭೆಯಲ್ಲಿ ಈ ಕ್ರಮಗಳು ಮಾತ್ರವಲ್ಲದೆ, ಇನ್ನೂ ಹಲವು ಸಲಹೆಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ವ್ಯಕ್ತಿಯೊಬ್ಬ ನೀಡಿದ ಚೆಕ್ ಬೌನ್ಸ್ ಆದ ಸಂದರ್ಭದಲ್ಲಿ, ಆತನ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವ ಮೊದಲು ಆತನ ಬೇರೆ ಬ್ಯಾಂಕ್ ಖಾತೆಗಳಿಂದ ಹಣ ಕಡಿತ ಮಾಡಿ, ಅದನ್ನು ಚೆಕ್ ಮೊತ್ತಕ್ಕೆ ಸರಿಹೊಂದಿಸಲು ಯತ್ನಿಸುವ ಸಲಹೆ ಕೂಡ ಬಂದಿದೆ.

ಚೆಕ್ ಬೌನ್ಸ್ ಆದಾಗ ಅದನ್ನು ಸಾಲ ಮರುಪಾವತಿಗೆ ವಿಫಲವಾಗುವುದಕ್ಕೆ ಸಮ ಎಂದು ಪರಿಗಣಿಸಿ, ಆ ಬಗ್ಗೆ ಸಾಲದ ಮಾಹಿತಿ ದಾಖಲಿಸುವ ಕಂಪನಿಗಳಿಗೆ ತಿಳಿಸುವುದು. ಹೀಗೆ ಮಾಹಿತಿ ನೀಡಿ, ವ್ಯಕ್ತಿಯ ಕ್ರೆಡಿಟ್ ಸ್ಕೋರ್ ಕಡಿಮೆ ಆಗುವಂತೆ ಮಾಡುವ ಸಲಹೆ ಕೂಡ ಸಭೆಯಲ್ಲಿ ಬಂದಿದೆ ಎಂದು ಗೊತ್ತಾಗಿದೆ. ಈ ಸಲಹೆಗಳನ್ನು ಒಪ್ಪಿಕೊಳ್ಳುವ ಮೊದಲು ಕಾನೂನಿನ ಅಡಿ ಇವು ಎಷ್ಟು ಸರಿ ಎಂಬುದನ್ನು ಪರಿಶೀಲಿಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕ್ರಮಗಳು ದೇಶದಲ್ಲಿ ವಾಣಿಜ್ಯ ವಹಿವಾಟು ನಡೆಸುವುದನ್ನು ಕೂಡ ಇನ್ನಷ್ಟು ಸುಲಲಿತ ಆಗಿಸಲಿವೆ ಎಂದು ಹೇಳಲಾಗಿದೆ. ಅಲ್ಲದೆ, ಖಾತೆಯಲ್ಲಿ ಕಡಿಮೆ ಹಣ ಇದ್ದಾಗಲೂ, ಉದ್ದೇಶಪೂರ್ವಕವಾಗಿ ಹೆಚ್ಚಿನ ಮೊತ್ತಕ್ಕೆ ಚೆಕ್ ನೀಡುವ ಪರಿಪಾಠಕ್ಕೆ ಕಡಿವಾಣ ಬೀಳುತ್ತದೆ ಎಂಬ ನಿರೀಕ್ಷೆ ಇದೆ.

ದೇಶದ ಎಲ್ಲ ಬ್ಯಾಂಕ್‌ಗಳಲ್ಲಿನ ದತ್ತಾಂಶವನ್ನು ಒಂದೆಡೆ ಕ್ರೋಢೀಕರಿಸಿ ಈ ಕೆಲಸ ಮಾಡಲು ಸಾಧ್ಯವಿದೆ ಎಂದು ಮೂಲಗಳು ವಿವರಿಸಿವೆ.

**ಕೋರ್ಟ್ ಅಸಮಾಧಾನ:** ಚೆಕ್ ಬೌನ್ಸ್‌ಗೆ ಸಂಬಂಧಿಸಿದ ಪ್ರಕರಣಗಳು ದೊಡ್ಡ ಸಂಖ್ಯೆಯಲ್ಲಿ ಬಾಕಿ ಇದ್ದಿದ್ದನ್ನು ಗಮನಿಸಿ ಅಸಮಾಧಾನ ವ್ಯಕ್ತಪಡಿಸಿದ್ದ ಸುಪ್ರೀಂ ಕೋರ್ಟ್, ದೇಶದಾದ್ಯಂತ ಬಾಕಿ ಇರುವ ಅಂದಾಜು 35 ಲಕ್ಷ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಕ್ರಮಗಳನ್ನು ಸೂಚಿಸಲು ಸಮಿತಿಯೊಂದನ್ನು ರಚಿಸಿತ್ತು.

ಚೆಕ್ ಬೌನ್ಸ್ ಪ್ರಕರಣಗಳ ವಿಚಾರಣೆಗೆ ಹೆಚ್ಚುವರಿ ನ್ಯಾಯಾಲಯಗಳ ಅಗತ್ಯವಿದೆ ಎಂಬುದನ್ನು 'ತಾತ್ವಿಕವಾಗಿ ಒಪ್ಪುವುದಾಗಿ' ಕೇಂದ್ರವು ಹೇಳಿತ್ತು. ಪ್ರಕರಣಗಳ ತ್ವರಿತ ವಿಲೇವಾರಿಗೆ ತಂತ್ರಜ್ಞಾನವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕು, ಮೂಲಸೌಕರ್ಯವನ್ನು ಹೆಚ್ಚಿಸಬೇಕು ಎಂದು ಸಮಿತಿಯು ಶಿಫಾರಸಿನಲ್ಲಿ ಹೇಳಿತ್ತು.

ಚೆಕ್ ಬೌನ್ಸ್ ಪ್ರಕರಣಗಳು ತ್ವರಿತವಾಗಿ ಇತ್ಯರ್ಥ ಆಗುವಂತಾಗಬೇಕು ಎಂಬ ಬೇಡಿಕೆಯನ್ನು ಉದ್ಯಮ ವಲಯದ ಸಂಘಟನೆಗಳು ಕೂಡ ಇರಿಸಿವೆ.

ಚೆಕ್ ಬೌನ್ಸ್ ಆದಲ್ಲಿ, ಅದಕ್ಕೆ ಕಾರಣನಾದ ವ್ಯಕ್ತಿಗೆ ಬ್ಯಾಂಕಿನಿಂದ ಹಣ ಹಿಂಪಡೆಯಲು ಕೆಲವು ದಿನಗಳವರೆಗೆ ನಿರ್ಬಂಧ ಹೇರಬೇಕು. ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ 90 ದಿನಗಳಲ್ಲಿ ಇತ್ಯರ್ಥಪಡಿಸಲು ಅಗತ್ಯ ಕಾನೂನು ರೂಪಿಸಬೇಕು ಎಂದು ಉದ್ಯಮ ವಲಯದ ಸಂಘಟನೆ ಪಿಎಚ್‌ಡಿಸಿಸಿಐ ಈಚೆಗೆ ಮನವಿ ಮಾಡಿತ್ತು.

# ಸರ್ಕಾರಿ ತೈಲ ಕಂಪನಿಗಳಿಗೆ ₹ 21,270 ಕೋಟಿ ನಷ್ಟ ಸಾಧ್ಯತೆ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸತತ ಎರಡನೇ ತ್ರೈಮಾಸಿಕದಲ್ಲಿಯೂ ನಷ್ಟ ಅನುಭವಿಸುವ ಸಾಧ್ಯತೆ ಇದೆ ಎಂದು ಐಸಿಐಸಿಐ ಸೆಕ್ಯುರಿಟೀಸ್ ಹೇಳಿದೆ.

ಇಂಡಿಯನ್ ಆಯಿಲ್ (ಐಒಸಿ), ಭಾರತ್ ಪೆಟ್ರೋಲಿಯಂ (ಬಿಪಿಸಿಎಲ್) ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಕಂಪನಿಗಳು ಉತ್ಪಾದನಾ ವೆಚ್ಚಕ್ಕಿಂತಲೂ ಕಡಿಮೆ ಬೆಲೆಗೆ ಪೆಟ್ರೋಲ್, ಡೀಸೆಲ್ ಮಾರಾಟ ಮಾಡುತ್ತಿವೆ. ಹೀಗಾಗಿ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಈ ಕಂಪನಿಗಳ ಒಟ್ಟಾರೆ ನಷ್ಟವು ₹ 21,270 ಕೋಟಿ ಆಗುವ ಸಾಧ್ಯತೆ ಇದೆ ಎಂದು ಅದು ತಿಳಿಸಿದೆ.

ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್–ಜೂನ್) ಈ ಕಂಪನಿಗಳ ಒಟ್ಟಾರೆ ನಷ್ಟವು ₹ 18,480 ಕೋಟಿ ಆಗಿತ್ತು. ಈ ಕಂಪನಿಗಳು ನವೆಂಬರ್ ತಿಂಗಳಿಗೂ ಮುನ್ನ ತಮ್ಮ ಎರಡನೇ ತ್ರೈಮಾಸಿಕದ ಫಲಿತಾಂಶವನ್ನು ಪ್ರಕಟಿಸಲಿವೆ.

ಕಚ್ಚಾ ತೈಲ ದರ ಏರಿಕೆ ಮತ್ತು ರೂಪಾಯಿ ಕುಸಿತದ ಕಾರಣ ತಯಾರಿಕಾ ವೆಚ್ಚ ಹೆಚ್ಚುತ್ತಲೇ ಇದೆ. ಹೀಗಿದ್ದರೂ ಆರು ತಿಂಗಳಿಗೂ ಅಧಿಕ ಸಮಯದದಿಂದ ಸರ್ಕಾರಿ ಸ್ವಾಮ್ಯದ ಕಂಪನಿಗಳು ಪೆಟ್ರೋಲ್, ಡೀಸೆಲ್ ದರ ಬದಲಾವಣೆ ಮಾಡಿಲ್ಲ.

ಐಸಿಐಸಿಐ ಸೆಕ್ಯುರಿಟೀಸ್ ಪ್ರಕಾರ, ದೇಶದ ಅತಿದೊಡ್ಡ ತೈಲ ಮಾರಾಟ ಕಂಪನಿ ಐಒಸಿ ₹ 6,300 ಕೋಟಿ ನಿವ್ವಳ ನಷ್ಟ ಕಾಣಲಿದೆ. ಬಿಪಿಸಿಎಲ್ ₹ 6,900 ಕೋಟಿ ಮತ್ತು ಎಚ್‌ಪಿಸಿಎಲ್ ₹ 8,100 ಕೋಟಿ ನಷ್ಟ ಅನುಭವಿಸಲಿವೆ.

## ನೇರ ತೆರಿಗೆ ಸಂಗ್ರಹ ಹೆಚ್ಚಳ




ನವದೆಹಲಿ (ಪಿಟಿಐ): ನೇರ ತೆರಿಗೆಯ ಸರಾಸರಿ ಸಂಗ್ರಹವು ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಈ ಹಣಕಾಸು ವರ್ಷದ ಅಕ್ಟೋಬರ್ 8ರವರೆಗೆ ಶೇಕಡ 23.8ರಷ್ಟು ಹೆಚ್ಚಾಗಿದ್ದು, ₹ 8.98 ಲಕ್ಷ ಕೋಟಿಗೆ ತಲುಪಿದೆ ಎಂದು ತೆರಿಗೆ ಇಲಾಖೆ ತಿಳಿಸಿದೆ.

ವೈಯಕ್ತಿಕ ಆದಾಯ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ ಆಗಿರುವುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ. ₹ 1.53 ಲಕ್ಷ ಕೋಟಿ ಮರುಪಾವತಿ ಮಾಡಿದ ಬಳಿಕ ನಿವ್ವಳ ತೆರಿಗೆ ಸಂಗ್ರಹವು ₹ 7.45 ಲಕ್ಷ ಕೋಟಿಗೆ ತಲುಪಿದೆ.

ಇದು ಬಜೆಟ್ ಅಂದಾಜಿಗಿಂತ ಶೇ 52.46ರಷ್ಟು ಹೆಚ್ಚು ಎಂದು ಮಾಹಿತಿ ನೀಡಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಮೂಲಕ ₹ 14.20 ಲಕ್ಷ ಕೋಟಿ ವರಮಾನ ಸಂಗ್ರಹ ಆಗುವ ಅಂದಾಜನ್ನು ಸರ್ಕಾರ ಮಾಡಿದೆ. ಇದು 2021–22ನೇ ಹಣಕಾಸು ವರ್ಷದಲ್ಲಿ ಸಂಗ್ರಹ ಆಗಿದ್ದ ₹14.10 ಲಕ್ಷ ಕೋಟಿಗೂ ಹೆಚ್ಚಿನದ್ದಾಗಿದೆ.

## ಎಫ್‌ಪಿಐ ಒಳಹರಿವು ₹2,400 ಕೋಟಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಅಕ್ಟೋಬರ್ ತಿಂಗಳ ಮೊದಲ ವಾರದಲ್ಲಿ ₹2,440 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್‌ನಿಂದ ಬಡ್ಡಿದರ ಹೆಚ್ಚಳ ಮತ್ತು ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆಯಿಂದಾಗಿ ಸೆಪ್ಟೆಂಬರ್‌ನಲ್ಲಿ ₹7,600 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದರು.

ಜಾಗತಿಕ ಮತ್ತು ದೇಶಿ ವಿದ್ಯಮಾನಗಳನ್ನು ಗಮನಿಸಿದರೆ ಮುಂಬರುವ ತಿಂಗಳುಗಳಲ್ಲಿ ಎಫ್‌ಪಿಐ ಒಳಹರಿವು ಅಸ್ಥಿರವಾಗಿ ಇರುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

## ಗೋದ್ರೇಜ್, ಲೈಫ್‌ಬಾಯ್, ಲಕ್ಸ್ ಸೋಪಿನ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಹಿಂದುಸ್ತಾನ್ ಯುನಿಲಿವರ್ ಲಿಮಿಟೆಡ್ (ಎಚ್‌ಯುಎಲ್) ಮತ್ತು ಗೋದ್ರೇಜ್ ಕನ್ಸ್ಯೂಮರ್ ಪ್ರಾಡಕ್ಟ್ಸ್ ಲಿಮಿಟೆಡ್ ಕಂಪನಿಗಳು ಕೆಲವು ಬ್ರ್ಯಾಂಡ್‌ನ ಸೋಪುಗಳ ಬೆಲೆಯನ್ನು ಶೇಕಡ 15ರವರೆಗೂ ಇಳಿಕೆ ಮಾಡಿವೆ. ತಾಳೆ ಎಣ್ಣೆ ಮತ್ತು ಇತರೆ ಕಚ್ಚಾ ಸಾಮಗ್ರಿಗಳ ಬೆಲೆಯು ಇಳಿಕೆ ಆಗಿರುವುದರಿಂದ ಈ ನಿರ್ಧಾರಕ್ಕೆ ಬಂದಿವೆ.

ಗೋದ್ರೇಜ್ ನಂ. 1 ಸೋಪಿನ ಬೆಲೆ ಶೇ 13ರಿಂದ ಶೇ 15ರವರೆಗೆ ಇಳಿಕೆ ಆಗಿದೆ. ಗೋದ್ರೇಜ್ ನಂ. 1 ಸೋಪಿನ 100 ಗ್ರಾಂನ 5 ಸೋಪು ಒಳಗೊಂಡ ಪ್ಯಾಕ್‌ನ ಬೆಲೆ ₹ 140ರಿಂದ ₹ 120ಕ್ಕೆ ಇಳಿಕೆ ಮಾಡಲಾಗಿದೆ ಎಂದು ಗೋದ್ರೇಜ್ ಕಂಪನಿಯ ಸಿಎಫ್‌ಒ ಸಮೀಕರ್ ಶಾ ತಿಳಿಸಿದ್ದಾರೆ.

ಎಚ್‌ಯುಎಲ್ ಕಂಪನಿಯು ಲೈಫ್‌ಬಾಯ್ ಮತ್ತು ಲಕ್ಸ್ ಬ್ರ್ಯಾಂಡ್‌ನ ಸೋಪುಗಳ ಬೆಲೆಯನ್ನು ಪಶ್ಚಿಮದ ಪ್ರದೇಶಗಳಲ್ಲಿ ಶೇ 5 ರಿಂದ ಶೇ 11ರವರೆಗೆ ಇಳಿಕೆ ಮಾಡಿದೆ.

ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಒಟ್ಟಾರೆ ಬೇಡಿಕೆಯು ಇಳಿಮುಖವಾಗಿದೆ. ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಮಾರಾಟ ಹೆಚ್ಚಾಗಲು ಬೆಲೆ ಇಳಿಕೆಯು ನೆರವಾಗಲಿದೆ ಎಂದು ಮಾರುಕಟ್ಟೆ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

## ಕಾರು ಬೆಲೆ ಏರಿಕೆ ಸಂಭವ

ನವದೆಹಲಿ (ಪಿಟಿಐ): ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ಕಠಿಣ ಮಾನದಂಡಗಳು 2023ರ ಏಪ್ರಿಲ್‌ನಿಂದ ಜಾರಿಗೆ ಬರಲಿದ್ದು, ಆಟೊಮೊಬೈಲ್ ಕಂಪನಿಗಳು ವಾಹನಗಳನ್ನು ಮೇಲ್ದರ್ಜೆಗೇರಿಸಲು ಹೂಡಿಕೆ ಮಾಡಲಿವೆ. ಇದರಿಂದಾಗಿ ವಾಹನಗಳ ಬೆಲೆಯು ಹೆಚ್ಚಾಗುವ ಸಾಧ್ಯತೆ ಇದೆ.

ಎರಡನೇ ಹಂತದ ಬಿಎಸ್–6 ಮಾನದಂಡಗಳಿಗೆ ಅನುಗುಣವಾಗಿ ವಾಹನಗಳು ಇರುವಂತೆ ಮಾಡಲು ಉದ್ಯಮ ಗಮನಹರಿಸಿದೆ. ಇದು ಸಾಧ್ಯವಾಗಬೇಕು ಎಂದಾದರೆ ವಾಹನಗಳಲ್ಲಿ ಸುಧಾರಿತ ಉಪಕರಣಗಳನ್ನು ಬಳಸಬೇಕು. ತಯಾರಿಕಾ ವೆಚ್ಚದಲ್ಲಿ ಆಗುವ ಹೆಚ್ಚಳವನ್ನು ಮುಂದಿನ ವರ್ಷದ ಆರಂಭದಿಂದ ಗ್ರಾಹಕರಿಗೆ ವರ್ಗಾಯಿಸುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ.

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**



| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹440 |
| 12 ಮೊಟ್ಟೆಗೆ | ₹60 |
| ಮೈಸೂರು | |
| 100 ಮೊಟ್ಟೆಗೆ | ₹445 |

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

# ರಷ್ಯಾದ ಕ್ಷಿಪಣಿ ದಾಳಿ; 17 ಮಂದಿ ಸಾವು

### ಕೆರ್ಚ್ ಸೇತುವೆ ಸ್ಫೋಟಕ್ಕೆ ಪ್ರತೀಕಾರ ಕ್ರಮ • ವಸತಿ ಸಂಕೀರ್ಣಗಳಿಗೆ ಹಾನಿ

ಝಪೊರಿಝಿಯಾ (ಎಪಿ): ಉಕ್ರೇನ್‌ನ ಝಪೊರಿಝಿಯಾದಲ್ಲಿ ಅಪಾರ್ಟ್‌ಮೆಂಟ್ ಕಟ್ಟಡಗಳು ಮತ್ತು ಇತರ ನೆಲೆಗಳ ಮೇಲೆ ರಷ್ಯಾದ ಪಡೆಗಳು ನಡೆಸಿದ ಕ್ಷಿಪಣಿ ದಾಳಿಗೆ 17 ಜನರು ಮೃತಪಟ್ಟಿದ್ದು, ಹಲವರು ಗಾಯಗೊಂಡಿರುವುದಾಗಿ ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ಕ್ರಿಮಿಯಾದ ಪ್ರಮುಖ ಸಂಪರ್ಕದ ಕೆರ್ಚ್ ಸೇತುವೆಯನ್ನು ಉಕ್ರೇನ್ ಸೇನೆ ಸ್ಫೋಟಿಸಿರುವುದಕ್ಕೆ ಪ್ರತೀಕಾರವಾಗಿ ಈ ದಾಳಿ ನಡೆದಿದೆ ಎಂದು ಹೇಳಲಾಗಿದೆ. ಉಕ್ರೇನ್ ನಿಯಂತ್ರಣದಲ್ಲಿರುವ ಪ್ರದೇಶದ ಮೇಲೆ ದಾಳಿ ನಡೆಸಿದ್ದಾಗಿ ರಷ್ಯಾ ಹೇಳಿದೆ. ಬಹುಮಹಡಿ ಅಪಾರ್ಟ್‌ಮೆಂಟ್ ಕಟ್ಟಡ ಭಾಗಶಃ ಕುಸಿದಿದೆ. ಅಕ್ಕಪಕ್ಕದ ಕಟ್ಟಡಗಳಿಗೂ ಭಾರಿ ಹಾನಿಯಾಗಿದೆ. ಸಾವು ಸಂಭವಿಸಿರುವುದನ್ನು ಉಕ್ರೇನ್ ಸೇನೆಯೂ ಖಚಿತಪಡಿಸಿದೆ.

ವಸತಿ ಪ್ರದೇಶಗಳ ಮೇಲೆ ರಾತ್ರಿಯಿಡಿ ರಷ್ಯಾ ಸೇನೆ ನಡೆಸಿದ ಕ್ಷಿಪಣಿ ದಾಳಿಗೆ 20 ಮನೆಗಳು, 50 ಅಪಾರ್ಟ್‌ಮೆಂಟ್‌ಗಳು ಜಖಂಗೊಂಡಿವೆ. ಗಾಯಗೊಂಡಿರುವ 40 ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಿಟಿ ಕೌನ್ಸಿಲ್ ಕಾರ್ಯದರ್ಶಿ ಅನಾಟೋಲಿ ಕರ್ಟೆವ್ ತಿಳಿಸಿದ್ದಾರೆ.



ರಷ್ಯಾದ ಕ್ಷಿಪಣಿ ದಾಳಿಯಿಂದಾಗಿ ಉಕ್ರೇನ್‌ನ ಝಪೊರಿಝಿಯಾದಲ್ಲಿ ವಸತಿ ಸಂಕೀರ್ಣಗಳು ಹಾನಿಗೊಂಡಿರುವುದು –ಎಎಫ್‌ಪಿ ಚಿತ್ರ

ಗುರುವಾರ ನಗರದ ಅಪಾರ್ಟ್‌ಮೆಂಟ್ ಕಟ್ಟಡಗಳ ಮೇಲೆ ನಡೆದ ಕ್ಷಿಪಣಿ ದಾಳಿಯಲ್ಲಿ 19 ಜನರು ಸಾವನ್ನಪ್ಪಿದ್ದರು.

ಕ್ರಿಮಿಯಾ ಮತ್ತು ರಷ್ಯಾ ನಡುವಿನ ಇಂಧನ ಮೂಲಸೌಕರ್ಯಕ್ಕಾಗಿ ಕೆರ್ಚ್ ಸೇತುವೆಗೆ ಬಿಗಿ ಭದ್ರತೆ ಒದಗಿಸುವ, ಫೆಡರಲ್ ಭದ್ರತಾ ಸೇವೆ ಎಫ್‌ಎಸ್‌ಬಿಯ ಉಸ್ತುವಾರಿ ವಹಿಸುವ ಆದೇಶಕ್ಕೆ ಶನಿವಾರ ತಡರಾತ್ರಿ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸಹಿ ಹಾಕಿದರು. ಅಲ್ಲದೆ, ವಾಯುಪಡೆಯ ಮುಖ್ಯಸ್ಥ ಸೆರ್ಗೆಯ್ ಸುರೊವಿಕಿನ್ ಅವರನ್ನು ಉಕ್ರೇನ್‌ನಲ್ಲಿ ಹೋರಾಡುತ್ತಿರುವ ರಷ್ಯಾದ ಎಲ್ಲ ಸೈನಿಕರಿಗೆ ಮುಖ್ಯಸ್ಥರಾಗಿ ನೇಮಿಸಲಾಗಿದೆ.

ಝೆಲೆನ್‌ಸ್ಕಿ ಖಂಡನೆ: ಕೆರ್ಚ್ ಸೇತುವೆ ಮೇಲಿನ ದಾಳಿಯ ಹೊಣೆಯನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ರಷ್ಯಾದ ಕ್ಷಿಪಣಿ ದಾಳಿಯನ್ನು ತೀಕ್ಷ್ಣವಾಗಿ ಖಂಡಿಸಿದರು.

'ವಸತಿ ಕಟ್ಟಡಗಳನ್ನು ಗುರಿಯಾಗಿಸಿ ನಡೆದಿರುವ ಇದು ಅರ್ಥಹೀನ ದಾಳಿ. ಇದಕ್ಕೆ ತಕ್ಕಬೆಲೆ ತೆರಲೇಬೇಕು' ಎಂದು ಝೆಲೆನ್‌ಸ್ಕಿ, ಪುಟಿನ್ ವಿರುದ್ಧ ಗುಡುಗಿದ್ದಾರೆ.

ಉಕ್ರೇನ್‌ನ ದಕ್ಷಿಣದಲ್ಲಿನ ಸೇನಾ ಕಾರ್ಯಾಚರಣೆಗೆ ಅಗತ್ಯ ಶಸ್ತ್ರಾಸ್ತ್ರ ಮತ್ತು ಇಂಧನಗಳನ್ನು ಪೂರೈಸಲು ಪ್ರಮುಖ ಮಾರ್ಗವಾಗಿ ಕೆರ್ಚ್ ಸೇತುವೆಯನ್ನು ರಷ್ಯಾ ಬಳಸುತ್ತಿತ್ತು.

# 3ಎ ಮೀಸಲಾತಿ ಶೇ 10ಕ್ಕೆ ಹೆಚ್ಚಿಸಿ: ಒಕ್ಕಲಿಗರ ಸಂಘ

ಒಂದನೇ ಪುಟದಿಂದ



ಸಿ.ಎನ್. ಬಾಲಕೃಷ್ಣ

ಆಯಾ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ ಮೀಸಲಾತಿಯನ್ನು ಶೇ 15ರಿಂದ ಶೇ 17ಕ್ಕೆ ಮತ್ತು ಎಸ್.ಟಿ ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸುವ ಸರ್ಕಾರದ ನಿರ್ಧಾರವನ್ನು ಒಕ್ಕಲಿಗರ ಸಂಘ ಸ್ವಾಗತಿಸುತ್ತದೆ. ಇತರ ಸಮುದಾಯಗಳಿಗೆ ಮೀಸಲಾತಿ ಹೆಚ್ಚಿಸುವುದನ್ನು ಸಂಘವು ವಿರೋಧಿಸುವುದಿಲ್ಲ. ಆದರೆ, ಅದೇ ಮಾದರಿಯಲ್ಲಿ ಪ್ರವರ್ಗ 3ಎ ಮೀಸಲಾತಿ ಹೆಚ್ಚಿಸದಿದ್ದರೆ ಒಕ್ಕಲಿಗರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಹೇಳಿದ್ದಾರೆ.

'ಒಕ್ಕಲಿಗ ಸಮುದಾಯ ಕೃಷಿಯನ್ನೇ ನಂಬಿ ಬದುಕುತ್ತಿದೆ. ಬೇಸಾಯದ ವೆಚ್ಚ ದಿನದಿಂದ ದಿನಕ್ಕೆ ದುಬಾರಿಯಾಗುತ್ತಿದೆ. ಅತಿವೃಷ್ಟಿ, ಪ್ರವಾಹ, ಬರ, ಕೀಟ ಮತ್ತು ರೋಗಬಾಧೆಯಿಂದ ರೈತರು ಪದೇ ಪದೇ ಸಂಕಷ್ಟ ಅನುಭವಿಸುತ್ತಿದ್ದಾರೆ. ಸಮುದಾಯದ ಶೇ 70ರಷ್ಟು ಮಂದಿ ಈಗಲೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಬಡವರು ನಮ್ಮ ಸಮುದಾಯಗಳಲ್ಲೂ ಇದ್ದಾರೆ. ಈ ಎಲ್ಲವನ್ನೂ ಪರಿಗಣಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೀಸಲಾತಿ ಹೆಚ್ಚಿಸುವ ನಿರ್ಧಾರ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಪ್ರವರ್ಗ 3ಎ ಸಮುದಾಯಗಳಿಗೆ ಉದ್ಯೋಗ ಹಾಗೂ ಶಿಕ್ಷಣದಲ್ಲಿ ಮೀಸಲಾತಿ ಪ್ರಮಾಣ ಹೆಚ್ಚಿಸಿ ಕೂಡಲೇ ಆದೇಶ ಹೊರಡಿಸುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ಮೀಸಲಾತಿ ಹೆಚ್ಚಳಕ್ಕಾಗಿ ಬೀದಿಗಿಳಿದು ಉಗ್ರ ಹೋರಾಟ ನಡೆಸುವುದು ಅನಿವಾರ್ಯವಾಗಲಿದೆ ಎಂದು ಎಚ್ಚರಿಸಿದ್ದಾರೆ.

## ಸ್ವಾಯತ್ತ ಕಾಲೇಜುಗಳಿಗೆ ಹೊಸ ಮಾರ್ಗಸೂಚಿ: ಯುಜಿಸಿ

ಪ್ರಜಾವಾಣಿ ವಾರ್ತೆ

ಪನವದೆಹಲಿ: ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಸ್ವಾಯತ್ತ ಕಾಲೇಜುಗಳಿಗಾಗಿ ಹೊಸ ಮಾರ್ಗಸೂಚಿ ರಚಿಸಿದ್ದು, ಇದನ್ನು ಮಂಗಳವಾರ ಬಿಡುಗಡೆ ಮಾಡಲಿದೆ.

'ಸ್ವಾಯತ್ತ ಕಾಲೇಜುಗಳು ಪ್ರತ್ಯೇಕ ನೋಂದಣಿ ನಿಯಮಗಳನ್ನು ಹೊಂದಲು, ಕೋರ್ಸ್ ಹಾಗೂ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲು, ತಮ್ಮದೇ ಮೌಲ್ಯಮಾಪನ ವಿಧಾನಗಳನ್ನು ಅಳವಡಿಸಿಕೊಳ್ಳಲು, ಸಂಬಂಧಿತ ಕ್ಷೇತ್ರಗಳಲ್ಲಿ ಸಂಶೋಧನೆ ಉತ್ತೇಜಿಸಲು ನೂತನ ಮಾರ್ಗಸೂಚಿ ಅವಕಾಶ ಕಲ್ಪಿಸುತ್ತದೆ' ಎಂದು ಹೇಳಲಾಗಿದೆ.

'ಯುಜಿಸಿ ರಚಿಸಿದ್ದ ತಜ್ಞರ ಸಮಿತಿಯು ಈ ಮಾರ್ಗಸೂಚಿ ಸಿದ್ಧಪಡಿಸಿದೆ. ಸೆಪ್ಟೆಂಬರ್ 22ರಂದು ನಡೆದಿದ್ದ ಯುಜಿಸಿ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ನೀಡಲಾಗಿದೆ. ಮಂಗಳವಾರ ಇದನ್ನು ಬಹಿರಂಗಪಡಿಸಲಾಗುತ್ತದೆ' ಎಂದು ತಿಳಿಸಲಾಗಿದೆ.

'ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಈ ಮಾರ್ಗಸೂಚಿಗಳನ್ನು ರಚಿಸಲಾಗಿದೆ. ಇನ್ನು ಮುಂದೆ ತಮಗೆ ಬೇಕಾದ ಕೋರ್ಸ್‌ಗಳನ್ನು ಅಳವಡಿಸಿಕೊಳ್ಳಲು ಸ್ವಾಯತ್ತ ಕಾಲೇಜುಗಳಿಗೆ ಪೂರ್ಣ ಸ್ವಾತಂತ್ರ್ಯ ದೊರೆಯಲಿದೆ' ಎಂದು ಯುಜಿಸಿ ಮುಖ್ಯಸ್ಥ ಎಂ.ಜಗದೀಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

## ವಿದ್ಯಾರ್ಥಿಗಳ ಸಮಸ್ಯೆಗೆ ಪರಿಹಾರ: ಜೈಶಂಕರ್ ಮನವಿ

ವೆಲ್ಲಿಂಗ್ಟನ್ (ಪಿಟಿಐ): ಕೋವಿಡ್‌ನಿಂದಾಗಿ ಸಮಸ್ಯೆ ಎದುರಿಸುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸಂಕಷ್ಟಗಳನ್ನು ಮಾನವೀಯ ದೃಷ್ಟಿಯಿಂದ ಬಗೆಹರಿಸಬೇಕು ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾನುವಾರ ನ್ಯೂಜಿಲೆಂಡ್ ಸರ್ಕಾರಕ್ಕೆ ಕೋರಿದರು.

ನ್ಯೂಜಿಲೆಂಡ್‌ಗೆ ಇದೇ ಮೊದಲ ಬಾರಿಗೆ ಭೇಟಿ ನೀಡಿರುವ ಅವರು, ಇಲ್ಲಿ ಭಾರತೀಯ ಹೈಕಮಿಷನ್‌ನ ಕಚೇರಿ ಉದ್ಘಾಟಿಸಿದರು. ಭಾರತೀಯ ಸಮುದಾಯ ಉದ್ದೇಶಿಸಿ ಮಾತನಾಡುತ್ತಾ, ಸಮಸ್ಯೆ ಕುರಿತು ನ್ಯೂಜಿಲೆಂಡ್ ವಿದೇಶಾಂಗ ಸಚಿವರ ಗಮನಸೆಳೆದಿದ್ದೇನೆ. ನ್ಯೂಜಿಲೆಂಡ್ ಪ್ರಧಾನಿ ಮತ್ತು ವಿದೇಶಾಂಗ ಸಚಿವರು ಇದನ್ನು ಮಾನವೀಯ, ಅನುಕಂಪದ ದೃಷ್ಟಿಯಿಂದ ಇದನ್ನು ಗಮನಿಸುತ್ತಾರೆ ಎಂದು ಆಶಿಸುತ್ತೇನೆ' ಎಂದರು.

ಭಾರತ ಮೂಲದ 2.5 ಲಕ್ಷ ಜನರು ಇಲ್ಲಿ ನೆಲೆಸಿದ್ದಾರೆ.

**ಸಂಕ್ಷಿಪ್ತ ಸುದ್ದಿ**

## ಇರಾನ್: ಗುಂಡಿಗೆ ಇಬ್ಬರು ಬಲಿ

ಸುಲಿಮಾನಿಯಾ (ಎ.ಪಿ): ಧಾರ್ಮಿಕ ವಸ್ತ್ರಸಂಹಿತೆ ವಿರೋಧಿಸಿ ಇರಾನ್ ಸರ್ಕಾರದ ವಿರುದ್ಧ ನಡೆಯುತ್ತಿರುವ ಪ್ರತಿಭಟನೆ 4ನೇ ವಾರದಲ್ಲಿ ಮುಂದುವರಿದಿದೆ. ಪ್ರತಿಭಟನಕಾರರ ಮೇಲೆ ಭದ್ರತಾ ಸಿಬ್ಬಂದಿ ಗುಂಡುಹಾರಿಸಿದ್ದರಿಂದಾಗಿ ಭಾನುವಾರ ಇಬ್ಬರು ಸತ್ತಿದ್ದಾರೆ.

ಆದರೆ, ಪ್ರತಿಭಟನಕಾರರ ಮೇಲೆ ಗುಂಡು ಪ್ರಯೋಗಿಸಿದ್ದನ್ನು ಪೊಲೀಸರು ನಿರಾಕರಿಸಿದ್ದಾರೆ.

ಅಧ್ಯಕ್ಷ ಇಬ್ರಾಹಿಂ ರೈಸಿ ಅವರು ಮಹಿಳೆಯರ ಅಲ್ ಜಾಹ್ರಾ ಯೂನಿವರ್ಸಿಟಿಯ ವಿದ್ಯಾರ್ಥಿಗಳ ಜೊತೆಗೆ ಟೆಹರಾನ್‌ನಲ್ಲಿ ಚರ್ಚಿಸಿದರು. ಈ ಸಂದರ್ಭದಲ್ಲಿ ಪ್ರತಿಭಟನೆಯ ಹಿಂದೆಯ ವಿದೇಶಿ ಶಕ್ತಿಗಳ ಹಸ್ತಕ್ಷೇಪವಿದೆ ಎಂದು ಆರೋಪಿಸಿದರು.

ಸರ್ಕಾರದ ಅಧಿಕೃತ ಟಿ.ವಿ. ಮಾಧ್ಯಮವನ್ನು ಭಾನುವಾರ ಹ್ಯಾಕ್ ಮಾಡಲಾಗಿದ್ದು, ಪ್ರತಿಭಟನೆಯ ಸುದ್ದಿ 15 ಸೆಕೆಂಡ್ ಪ್ರಸಾರ ಆಗುವಂತೆ ನೋಡಿಕೊಳ್ಳಲಾಗಿದೆ. ಜ್ವಾಲೆಗಳ ನಡುವೆ ಧಾರ್ಮಿಕ ಮುಖಂಡ ಆಯತ್‌ಉಲ್ಲಾ ಅಲಿ ಖೊಮೆನಿ ಇರುವಂತಹ ಚಿತ್ರವೂ ಪ್ರಸಾರವಾಗಿದೆ. 'ಏಳಿ ಎದ್ದೇಳಿ. ನಮ್ಮೊಂದಿಗೆ ಕೈಜೋಡಿಸಿ' ಎಂಬ ಸಂದೇಶವು ಪ್ರಸಾರ ಆಗಿವೆ. ಅಮೈನಿ ಹೆಸರಿನ ಮಹಿಳೆಯ ಶಂಕಾಸ್ಪದ ಸಾವಿನ ಬಳಿಕ ವಸ್ತ್ರಸಂಹಿತೆಯನ್ನು ವಿರೋಧಿಸಿ ಸೆ.17ರಿಂದ ಪ್ರತಿಭಟನೆ ನಡೆಯುತ್ತಿದೆ.

## ಉತ್ತರ ಕೊರಿಯಾದಿಂದ ಕ್ಷಿಪಣಿ ಪ್ರಯೋಗ

ಸೋಲ್ (ಎ.ಪಿ): ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಜಂಟಿ ಸಮರಾಭ್ಯಾಸದ ಹಿಂದೆಯೇ ಉತ್ತರ ಕೊರಿಯಾ ಭಾನುವಾರ ಸಮುದ್ರ ಭಾಗವನ್ನು ಗುರಿಯಾಗಿಸಿ ಎರಡು ಖಂಡಾಂತರ ಕ್ಷಿಪಣಿಗಳ ಪರೀಕ್ಷಾರ್ಥ ಪ್ರಯೋಗವನ್ನು ನಡೆಸಿದೆ.

ಈ ಕುರಿತು ದಕ್ಷಿಣ ಕೊರಿಯಾದ ಸಿಬ್ಬಂದಿಯ ಜಂಟಿ ಮುಖ್ಯಸ್ಥರು ಹೇಳಿಕೆ ನೀಡಿದ್ದು, ಪೂರ್ವ ಕರಾವಳಿಯಲ್ಲಿನ ಮುಂಚೋನ್ ನಗರ ಭಾಗದಿಂದ ಎರಡು ಕ್ಷಿಪಣಿಗಳ ಪ್ರಯೋಗ ನಡೆದಿರುವುದನ್ನು ಸೇನೆ ಗಮನಿಸಿದೆ ಎಂದು ಹೇಳಿದರು.

## ಅಮುಲ್ ವಿಲೀನ ಪ್ರಕ್ರಿಯೆ ಶುರು

ಗುವಾಹಟಿ (ಪಿಟಿಐ): ಅಮುಲ್ ಸಹಕಾರ ಸಂಘವನ್ನು ಇತರ ಐದು ಸಹಕಾರ ಸಂಘಗಳ ಜೊತೆ ವಿಲೀನ ಮಾಡಿ, ಬಹು ರಾಜ್ಯ ಸಹಕಾರ ಸಂಸ್ಥೆಯನ್ನು (ಎಂಎಸ್‌ಸಿಎಸ್) ರಚಿಸಲಾಗುತ್ತದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ. ವಿಲೀನ ಪ್ರಕ್ರಿಯೆ ಶುರುವಾಗಿದೆ ಎಂದು ಹೇಳಿದ್ದಾರೆ.

ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟವು 'ಅಮುಲ್' ಬ್ರ್ಯಾಂಡ್ ಅಡಿಯಲ್ಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ. ಎಂಎಸ್‌ಸಿಎಸ್‌ಗಳು ಉತ್ಪನ್ನಗಳ ರಫ್ತಿಗೆ ನೆರವಾಗಿ, ಲಾಭವು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಹೋಗುವಂತೆ ಮಾಡುತ್ತವೆ ಎಂದು ಶಾ ಅವರು ತಿಳಿಸಿದ್ದಾರೆ.

## ಹಿಮಕುಸಿತ: ಮತ್ತೆ 10 ಮಂದಿ ಶವ ಉತ್ತರಕಾಶಿಗೆ

ಉತ್ತರಕಾಶಿ, ಡೆಹ್ರಾಡೂನ್ (ಪಿಟಿಐ): ಇಲ್ಲಿನ ದ್ರೌಪದಿ ಕಾ ದಂಡ–2 ಶಿಖರದ ಬಳಿ ಉಂಟಾಗಿದ್ದ ಹಠಾತ್ ಹಿಮಪಾತದಿಂದಾಗಿ ಅಸುನೀಗಿದ್ದ ತರಬೇತಿನಿರತ ಪರ್ವತಾರೋಹಿಗಳ ಪೈಕಿ 10 ಮಂದಿಯ ಶವವನ್ನು ಭಾನುವಾರ ಉತ್ತರಕಾಶಿಗೆ ತರಲಾಗಿದೆ.

'ಸತತ 6 ದಿನಗಳಿಂದ ರಕ್ಷಣಾ ಕಾರ್ಯ ನಡೆಸಲಾಗಿದ್ದು, ಒಟ್ಟು 27 ಶವಗಳನ್ನು ಹೊರತೆಗೆಯಲಾಗಿದೆ. ಈ ಪೈಕಿ 21 ಮೃತದೇಹಗಳ ಗುರುತು ಪತ್ತೆಯಾಗಿದ್ದು, ಅವುಗಳನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಇನ್ನೂ ಇಬ್ಬರು ನಾಪತ್ತೆಯಾಗಿದ್ದಾರೆ' ಎಂದು ನೆಹರೂ ಪರ್ವತಾರೋಹಣ ಸಂಸ್ಥೆ (ಎನ್‌ಐಎಂ) ತಿಳಿಸಿದೆ.

**ರಾಜ್ಯದ ಇಬ್ಬರ ಶವ ಪತ್ತೆ:** ಹಿಮಪಾತದಲ್ಲಿ ಕರ್ನಾಟಕದ ಇಬ್ಬರು ಮೃತಪಟ್ಟಿದ್ದು, ಅವರ ಗುರುತು ಪತ್ತೆಯಾಗಿದೆ. 'ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಡೆಹ್ರಾಡೂನ್‌ಗೆ ಕೊಂಡೊಯ್ಯಲಾಗಿದೆ. ಸೋಮವಾರ ಅವುಗಳನ್ನು ಬೆಂಗಳೂರಿಗೆ ತರಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

## ಅಜ್ಮೇರ್: ದಲಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ

ಜೈಪುರ (ಪಿಟಿಐ): ಅಜ್ಮೇರ್ ಜಿಲ್ಲೆಯಲ್ಲಿ 25 ವರ್ಷದ ದಲಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ ಸಂಜಯ್ ಶರ್ಮಾ ಸಂತ್ರಸ್ತೆ ಕುಟುಂಬದ ಪುರೋಹಿತನಾಗಿದ್ದು, ಅವರ ಪರವಾಗಿ ಪೂಜೆ ಸಲ್ಲಿಸುತ್ತಿದ್ದ. ಸಂತ್ರಸ್ತೆ ಮನೆಯಲ್ಲಿ ಒಬ್ಬರೇ ಇದ್ದಾಗ ಆರೋಪಿಯು ಅತ್ಯಾಚಾರವೆಸಗಿದ್ದ. ಅದನ್ನು ವಿಡಿಯೊ ಸಹ ಮಾಡಿದ್ದ. ಕೆಲವು ದಿನಗಳ ಬಳಿಕ ಸಂತ್ರಸ್ತೆಯಿಂದ ಹಣ ವಸೂಲು ಮಾಡಿದ್ದಲ್ಲದೇ, ಹಲವರೊಡನೆ ಸೇರಿ ಮತ್ತೆ ಅತ್ಯಾಚಾರವೆಸಗಿದ್ದ' ಎಂದು ಅಜ್ಮೇರ್‌ನ ಉಪ ಪೊಲೀಸ್ ವರಿಷ್ಠಾಧಿಕಾರಿ ಛವಿ ಶರ್ಮಾ ಹೇಳಿದರು.

'ಗುಂಪಿನಿಂದ ಅತ್ಯಾಚಾರ ಎಸಗುವ ವೇಳೆ ಮತ್ತು ಬರಿಸುವ ಔಷಧಗಳನ್ನು ನೀಡಿದ್ದರಿಂದ ಈ ಅತ್ಯಾಚಾರದಲ್ಲಿ ಎಷ್ಟು ಮಂದಿ ಭಾಗಿಯಾಗಿದ್ದರು ಎಂಬುದರ ಬಗ್ಗೆ ಮಾಹಿತಿ ನೀಡಲು ಸಂತ್ರಸ್ತೆಗೆ ಸಾಧ್ಯವಾಗುತ್ತಿಲ್ಲ. ಆರೋಪಿಯು ತನ್ನ ಗಂಡ ಹಾಗೂ ಮಕ್ಕಳನ್ನು ಕೊಲ್ಲುವುದಾಗಿ ಮತ್ತು ತನ್ನ ವಿಡಿಯೊಗಳನ್ನು ಸಾರ್ವಜನಿಕಗೊಳಿಸುವುದಾಗಿ ಬೆದರಿಕೆ ಹಾಕುತ್ತಿದ್ದ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದೂ ಹೇಳಿದರು.

'ಸಂತ್ರಸ್ತೆ ಮನೆಗೆ ಬಾರದಿದ್ದರಿಂದ ಆಕೆಯ ಪತಿ ದೂರು ನೀಡಿದ್ದರು. ಬಳಿಕ ಆರೋಪಿಗಳು ಆಕೆಯನ್ನು ಸೆ.27ರಂದು ಪೊಲೀಸ್ ಸ್ಟೇಷನ್ ಬಳಿ ಕರೆತಂದು ಬಿಟ್ಟಿದ್ದರು. ಘಟನೆ ಕುರಿತಂತೆ ಸಂತ್ರಸ್ತೆ ಅ. 7ರಂದು ದೂರು ನೀಡಿದ್ದು, ಇದರ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ. ಆರೋಪಿಗಳ ಪತ್ತೆಗೆ ಶೋಧ ನಡೆಸಲಾಗುತ್ತಿದೆ' ಎಂದೂ ತಿಳಿಸಿದರು.

**ದಲಿತ ಬಾಲಕಿ ಮೇಲೆ ಅತ್ಯಾಚಾರ:** ಅಮೇಠಿ, ಉತ್ತರಪ್ರದೇಶ (ಪಿಟಿಐ): ಇಲ್ಲಿನ ಜಾಮೊ ವ್ಯಾಪ್ತಿಯ ಗ್ರಾಮವೊಂದರಲ್ಲಿ 15 ವರ್ಷದ ದಲಿತ ಬಾಲಕಿ ಮೇಲೆ ವ್ಯಕ್ತಿಯೊಬ್ಬ ಅತ್ಯಾಚಾರವೆಸಗಿದ್ದಾನೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

'ಆರೋಪಿಯನ್ನು ಮೋನು ಎಂದು ಗುರುತಿಸಲಾಗಿದ್ದು, ಈತನನ್ನು ಬಂಧಿಸಲಾಗಿದೆ' ಎಂದೂ ಅವರು ಹೇಳಿದರು.

## 12 ಸಾವಿರ ವರ್ಷಗಳ ಇತಿಹಾಸದ ವರದಿ ಬಿಡುಗಡೆ

ನವದೆಹಲಿ (ಪಿಟಿಐ): 88 ಮಂದಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವಿದ್ವಾಂಸರನ್ನು ಒಳಗೊಂಡ ತಂಡವು ಭಾರತದ 12 ಸಾವಿರ ವರ್ಷಗಳ ನಾಗರಿಕತೆ ಹಾಗೂ ಇತಿಹಾಸವನ್ನು ದಾಖಲು ಮಾಡಿದೆ.

ಇಲ್ಲಿನ ಭಾರತೀಯ ಅಂತರರಾಷ್ಟ್ರೀಯ ಕೇಂದ್ರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ '12,000 ಇಯರ್ಸ್ ಆಫ್ ಇಂಡಿಯಾ–ರಿಪೋರ್ಟ್ ಆನ್ ದಿ ಸಿವಿಲೈಸೇಷನ್ ಆ್ಯಂಡ್ ಹಿಸ್ಟರೀಸ್ ಆಫ್ ಇಂಡಿಯಾ ಸಿನ್ಸ್ ಹೋಲೊಸಿನ್' ವರದಿಯನ್ನು ಬಿಡುಗಡೆ ಮಾಡಲಾಯಿತು.

ಆನುವಂಶಿಕ, ಪುರಾತತ್ವ, ಮಾನವ ವಿಜ್ಞಾನ, ಭಾಷಾಶಾಸ್ತ್ರ, ತತ್ವಶಾಸ್ತ್ರ ಸೇರಿದಂತೆ ಒಟ್ಟು 100 ವಿಭಾಗಗಳನ್ನು ಈ ವರದಿ ಒಳಗೊಂಡಿದೆ.

'ಜನಸಂಖ್ಯಾ ಬೆಳವಣಿಗೆ, ಸಾಮಾಜಿಕ ಹಾಗೂ ರಾಜಕೀಯ ಸಂಘಟನೆಗಳ ಉಗಮ, ಸಾಮಾಜಿಕ ಚಳವಳಿ ಇತ್ಯಾದಿಗಳ ಕುರಿತು ಈ ವರದಿ ಸ್ಪಷ್ಟ ಚಿತ್ರಣ ನೀಡಲಿದೆ' ಎಂದು ಸಾಹಿತ್ಯ ವಿಮರ್ಶಕ ಗಣೇಶ್ ದೇವಿ ತಿಳಿಸಿದ್ದಾರೆ.

ಭಾರತಕ್ಕೆ ಸರಣಿ ಜಯದ ಆಸೆ ಜೀವಂತ; ಸಿರಾಜ್‌ಗೆ 3 ವಿಕೆಟ್, ಹೆನ್ರಿಕ್ಸ್– ಮರ್ಕರಂ ಆಟ ವ್ಯರ್ಥ

# ಮಿಂಚಿದ ಶ್ರೇಯಸ್–ಇಶಾನ್

**ರಾಂಚಿ (ಪಿಟಿಐ):** ಭಾನುವಾರ ರಾತ್ರಿ ಶ್ರೇಯಸ್ ಅಯ್ಯರ್ ಅಜೇಯ ಶತಕ ದಾಖಲಿಸಿದರು. ಸಿಡಿಲಬ್ಬರದ ಬ್ಯಾಟಿಂಗ್ ಮಾಡಿದ ಇಶಾನ್ ಕಿಶನ್ ಅಲ್ಪ ಅಂತರದಿಂದ ತಮ್ಮ ಚೊಚ್ಚಲ ಶತಕ ಕೈತಪ್ಪಿಸಿಕೊಂಡರು.

ಆದರೆ ಇವರಿಬ್ಬರ ಜೊತೆಯಾಟದಿಂದಾಗಿ ಭಾರತ ತಂಡಕ್ಕೆ ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ 7 ವಿಕೆಟ್‌ಗಳ ಜಯ ಒಲಿಯಿತು. ಇದರಿಂದಾಗಿ ಆತಿಥೇಯರಿಗೆ ಸರಣಿ ಜಯದ ಆಸೆ ಜೀವಂತವಾಗುಳಿಯಿತು.

ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಪ್ರವಾಸಿ ಬಳಗದ ಹಂಗಾಮಿ ನಾಯಕ ಕೇಶವ್ ಮಹಾರಾಜ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ರೀಜಾ ಹೆನ್ರಿಕ್ಸ್ (74; 76ಎ) ಹಾಗೂ ಏಡನ್ ಮರ್ಕರಂ (79;89ಎ) ಅವರ ಅರ್ಧಶತಕಗಳ ಬಲದಿಂದ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 278 ರನ್ ಗಳಿಸಿತು. ಮೊಹಮ್ಮದ್ ಸಿರಾಜ್ (38ಕ್ಕೆ3) ಪರಿಣಾಮಕಾರಿ ದಾಳಿ ಮಾಡಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡಕ್ಕೆ ಉತ್ತಮ ಆರಂಭ ಲಭಿಸಲಿಲ್ಲ. ಮೊತ್ತವು 50 ರನ್‌ಗಳನ್ನು ದಾಟುವಷ್ಟರಲ್ಲಿಯೇ ಆರಂಭಿಕರಾದ ಶಿಖರ್ ಧವನ್ ಹಾಗೂ ಶುಭಮನ್ ಗಿಲ್ ಪೆವಿಲಿಯನ್ ಸೇರಿದರು. ಈ ಹಂತದಲ್ಲಿ ಜೊತೆಗೂಡಿದ ಎಡಗೈ ಬ್ಯಾಟರ್ ಇಶಾನ್ ಕಿಶನ್ (93; 84ಎ) ಶ್ರೇಯಸ್ (ಅಜೇಯ 113;111ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 161 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡವು 45.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 282 ರನ್ ಗಳಿಸಿ ಗೆದ್ದಿತು.

ಮುಂಬೈಕರ್ ಶ್ರೇಯಸ್ ಏಕದಿನ ಕ್ರಿಕೆಟ್‌ನಲ್ಲಿ ಎರಡನೇ ಶತಕ ದಾಖಲಿಸಿದರು. ತಾಳ್ಮೆಯ ಆಟ ಹಾಗೂ ಕಲಾತ್ಮಕ ಹೊಡೆತಗಳ ಮೂಲಕ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಅವರ ಇನಿಂಗ್ಸ್‌ನಲ್ಲಿ ಒಂದೂ ಸಿಕ್ಸರ್ ಇರಲಿಲ್ಲ. ಆದರೆ ಚೆಂಡನ್ನು 15 ಸಲ ಬೌಂಡರಿಗೆರೆ ದಾಟಿಸಿದರು. 48 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ತಾವೆದುರಿಸಿದ 103ನೇ ಎಸೆತದಲ್ಲಿ ಶತಕದ ಗಡಿ ತಲುಪಿದರು. ಶ್ರೇಯಸ್, ಇನ್ನೊಂದು ಬದಿಯಲ್ಲಿ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮಾಡುತ್ತಿದ್ದ ಇಶಾನ್ ಕಿಶನ್ ಅವರಿಗೇ ಹೆಚ್ಚು ಅವಕಾಶ ನೀಡಿದರು.

ಜಾರ್ಖಂಡ್ ಹುಡುಗ ಇಶಾನ್ ಆಟವು ಟಿ20 ಕ್ರಿಕೆಟ್ ಮಾದರಿಯದ್ದಾಗಿತ್ತು. ಏಳನೇ ಹಾಗೂ 33ನೇ ಓವರ್‌ನಲ್ಲಿ ಲಭಿಸಿದ ಜೀವದಾನಗಳನ್ನು ಅವರು ಸಮರ್ಥವಾಗಿ ಬಳಸಿಕೊಂಡರು. ಏಳು ಸಿಕ್ಸರ್ ಬಾರಿಸಿದರು. 33ನೇ ಓವರ್‌ನಲ್ಲಿ ರಬಾಡ ಹಾಕಿದ ಎಸೆತವನ್ನು ಪುಲ್ ಮಾಡಲು ಯತ್ನಿಸಿದರು. ಆದರೆ ಚೆಂಡು ಅವರ ಮೊಣಕೈಗೆ ಬಡಿದು ನೋವನುಭವಿಸಿದರು.

ಅದರ ನಂತರದ ಓವರ್‌ನಲ್ಲಿಯೂ ಒಂದು ಸಿಕ್ಸರ್ ಹೊಡೆದರು. ಆದರೆ ಅವರು ಶತಕ ಪೂರೈಸಲು ಫಾರ್ಚೂನ್ ಬಿಡಲಿಲ್ಲ. ಮಿಡ್‌ವಿಕೆಟ್‌ನಲ್ಲಿ ಹೆನ್ರಿಕ್ಸ್ ಪಡೆದ ಕ್ಯಾಚ್‌ಗೆ ಇಶಾನ್ ಪೆವಿಲಿಯನ್‌ಗೆ ಮರಳಿದರು. ಈ ಸಂದರ್ಭದಲ್ಲಿ 71 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ಶ್ರೇಯಸ್ ಜೊತೆಗೂಡಿದ ಸಂಜು ಸ್ಯಾಮ್ಸನ್ ತಂಡವನ್ನು ಗೆಲುವಿನ ದಡ ಸೇರಿಸಿದರು.



ರಾಂಚಿಯಲ್ಲಿ ಭಾನುವಾರ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಶತಕ ಗಳಿಸಿದ ಭಾರತ ತಂಡದ ಶ್ರೇಯಸ್ ಅಯ್ಯರ್ ಸಂಭ್ರಮ –ಪಿಟಿಐ ಚಿತ್ರ

### ಸ್ಕೋರ್ ಕಾರ್ಡ್

**ದಕ್ಷಿಣ ಆಫ್ರಿಕಾ 7ಕ್ಕೆ 278 (50 ಓವರ್)**
ಕ್ವಿಂಟನ್ ಬಿ ಸಿರಾಜ್ 5 (8ಎ; 4X1), ಮಲಾನ್ ಎಲ್‌ಬಿಡಬ್ಲ್ಯು ಬಿ ಶಹಬಾಜ್ 25 (31ಎ, 4X4), ಹೆನ್ರಿಕ್ಸ್ ಸಿ ಶಹಬಾಜ್ ಬಿ ಸಿರಾಜ್ 74 (76ಎ, 4X9, 6X1), ಮರ್ಕರಂ ಸಿ ಧವನ್ ಬಿ ವಾಷಿಂಗ್ಟನ್ 79 (89ಎ, 4X7, 6X1), ಕ್ಲಾಸನ್ ಸಿ ಸಿರಾಜ್ ಬಿ ಕುಲದೀಪ್ 30 (26ಎ, 4X2, 6X2), ಮಿಲ್ಲರ್ ಔಟಾಗದೆ 35 (34ಎ, 4X4), ಪಾರ್ನೆಲ್ ಸಿ ಶ್ರೇಯಸ್ ಬಿ ಠಾಕೂರ್ 16 (22ಎ), ಮಹಾರಾಜ ಸಿ ಸಿರಾಜ್ 5 (13ಎ), ಫಾರ್ಚೂನ್ ಔಟಾಗದೆ 0 (1ಎ)
**ಇತರೆ:** 9 (ಬೈ 4, ಲೆಗ್‌ಬೈ 2, ವೈಡ್ 3)
**ವಿಕೆಟ್ ಪತನ:** 1–7 (ಕ್ವಿಂಟನ್ ಡಿಕಾಕ್;2.1), 2–40 (ಜೇನ್ಮನ್ ಮಲಾನ್; 9.5), 3–169 (ರಿಜಾ ಹೆನ್ರಿಕ್ಸ್; 31.2), 4–215 (ಹೆನ್ರಿಚ್ ಕ್ಲಾಸನ್; 37.6), 5–215 (ಏಡನ್ ಮರ್ಕರಂ; 38.2), 6–256 (ವೇಯ್ನ್ ಪಾರ್ನೆಲ್; 46.2), 7–277 (ಕೇಶವ್ ಮಹಾರಾಜ;49.5)
**ಬೌಲಿಂಗ್:** ಮೊಹಮ್ಮದ್ ಸಿರಾಜ್ 10–1–38–3, ವಾಷಿಂಗ್ಟನ್ ಸುಂದರ್ 9–0–60–1, ಶಹಬಾಜ್ ಅಹಮದ್ 10–0–54–1, ಆವೇಶ್ ಖಾನ್ 7–0–35–0, ಕುಲದೀಪ್ ಯಾದವ್ 9–0–49–1, ಶಾರ್ದೂಲ್ ಠಾಕೂರ್ 5–0–36–1

**ಭಾರತ 3ಕ್ಕೆ 282 (45.5 ಓವರ್)**
ಶಿಖರ್ ಬಿ ಪಾರ್ನೆಲ್ 13 (20ಎ; 6X1), ಶುಭಮನ್ ಸಿ ಮತ್ತು ಬಿ ರಬಾಡ 28 (26ಎ, 4X5), ಇಶಾನ್ ಸಿ ಹೆನ್ರಿಕ್ಸ್ ಬಿ ಫಾರ್ಚೂನ್ 93 (84ಎ, 4X4, 6X7), ಶ್ರೇಯಸ್ ಅಜೇಯ 113 (111ಎ, 4X15), ಸಂಜು ಅಜೇಯ 30 (36ಎ, 4X1, 6X1)
**ಇತರೆ:** 5 (ವೈಡ್ 3, ನೋಬಾಲ್ 2)
**ವಿಕೆಟ್ ಪತನ:** 1–28 (ಶಿಖರ್ ಧವನ್;5.6), 2–48 (ಶುಭಮನ್ ಗಿಲ್;8.5), 3–209 (ಇಶಾನ್ ಕಿಶನ್; 34.3)
**ಬೌಲಿಂಗ್:** ಬಿಜಾರ್ನ್ ಫಾರ್ಚೂನ್ 9–1–52–1, ವೇಯ್ನ್ ಪಾರ್ನೆಲ್ 8–0–44–1, ಕಗಿಸೊ ರಬಾಡ 10–1–59–1, ಎನ್ರಿಚ್ ನಾಕಿಯಾ 8.5–0–60–0, ಕೇಶವ್ ಮಹಾರಾಜ 7–0–45–0, ಏಡನ್ ಮರ್ಕರಂ 3–0–22–0

**ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಗಳ ಗೆಲುವು**


ಇಶಾನ್ ಕಿಶನ್ –ಎಎಫ್‌ಪಿ ಚಿತ್ರ


ಬುಲ್ಸ್ ಆಟಗಾರರು ಪುಣೇರಿ ಪಲ್ಟನ್ ತಂಡದ ಮೋಹಿತ್ ಅವರನ್ನು ಹಿಡಿತಕ್ಕೆ ಪಡೆದ ಕ್ಷಣ ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಪ್ರೊ ಕಬಡ್ಡಿ: ವಿಕಾಸ್ ಖಂಡೋಲ, ಭರತ್ ಉತ್ತಮ ಆಟ

# ಪಲ್ಟನ್ ಮಣಿಸಿದ ಬುಲ್ಸ್

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಬುಲ್ಸ್‌ಗೆ 41–39 ರಲ್ಲಿ ಗೆಲುವು
- ಬೆಂಗಾಲ್ ವಾರಿಯರ್ಸ್, ಪಿಂಕ್ ಪ್ಯಾಂಥರ್ಸ್‌ಗೆ ಜಯ

**ಬೆಂಗಳೂರು:** ಪಂದ್ಯ ಕೊನೆಗೊಳ್ಳಲು ಒಂದೂವರೆ ನಿಮಿಷ ಇದ್ದಾಗ ಚುರುಕಿನ ಆಟವಾಡಿದ ಬೆಂಗಳೂರು ಬುಲ್ಸ್ ತಂಡದವರು, ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ರೋಚಕ ಗೆಲುವು ಪಡೆದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಬುಲ್ಸ್ 41–39 ರಲ್ಲಿ ಪುಣೇರಿ ಪಲ್ಟನ್ ಎದುರು ಗೆದ್ದಿತು.

ಪ್ರಥಮಾರ್ಧ ಕೊನೆಗೊಂಡಾಗ 14 ಪಾಯಿಂಟ್ಸ್‌ಗಳಿಂದ ಮುನ್ನಡೆಯಲ್ಲಿದ್ದ ಬುಲ್ಸ್ ಸುಲಭ ಗೆಲುವಿನ ನಿರೀಕ್ಷೆಯಲ್ಲಿತ್ತು. ಎರಡನೇ ಅವಧಿಯಲ್ಲಿ ಅಸ್ಲಾಂ ಇನಾಂದಾರ್ (12) ಮತ್ತು ಮೋಹಿತ್ ಗೋಯತ್ (11) ಅವರ ಮಿಂಚಿನ ಆಟದ ನೆರವಿನಿಂದ ಪುಟಿದೆದ್ದು ನಿಂತ ಪಲ್ಟನ್ 35–35 ರಲ್ಲಿ ಸಮಬಲ ಸಾಧಿಸಿತು.

ಆದರೆ ಕೊನೆಯಲ್ಲಿ ಎದುರಾದ ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿದ ಬುಲ್ಸ್, ವಿಕಾಸ್ ಖಂಡೋಲ (11) ಮತ್ತು ಭರತ್ (12) ಅವರ ನೆರವಿನಿಂದ ಎರಡು ಪಾಯಿಂಟ್‌ಗಳಿಂದ ಗೆದ್ದು ಬೀಗಿತು.

**ವಾರಿಯರ್ಸ್‌ಗೆ ಗೆಲುವು:** ನಾಯಕನಿಗೆ ತಕ್ಕ ಆಟವಾಡಿದ ಮಣಿಂದರ್ ಸಿಂಗ್ ಹಾಗೂ ಆಲ್‌ರೌಂಡರ್ ದೀಪಕ್ ಹೂಡಾ ಅವರ ಅಮೋಘ ಆಟದ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡ 45–25ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು. ಮಿಂಚಿನ ದಾಳಿ ನಡೆಸಿದ ಮಣಿಂದರ್ ಸಿಂಗ್ (11) ಹಾಗೂ ಚುರುಕಿನ ಆಟವಾಡಿದ ದೀಪಕ್ (11) ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ಬೆಂಗಾಲ್ ತಂಡವು ಪಂದ್ಯದ ಆರಂಭದಿಂದಲೇ ಮುನ್ನಡೆ ಗಳಿಸಿಕೊಂಡಿತು. ಪ್ರಥಮಾರ್ಧದಲ್ಲಿ 25–10ರಿಂದ ದೊಡ್ಡ ಅಂತರದ ಮುನ್ನಡೆ ಸಾಧಿಸಿತು. ವಿರಾಮದ ನಂತರ ತೆಲುಗು ತಂಡವು ಮುನ್ನಡೆ ಸಾಧಿಸಲು ಮಾಡಿದ ಪ್ರಯತ್ನಗಳಿಗೆ ಬೆಂಗಾಲ್ ಡಿಫೆಂಡರ್ಸ್ ತಡೆಯೊಡ್ಡಿದರು. ತಂಡವು ಆರು ಆಲೌಟ್ ಪಾಯಿಂಟ್ಸ್ ಗಳಿಸಿತು. ಟೈಟನ್ಸ್ ತಂಡದ ಮೋನು ಗೊಯತ್ (7) ಹಾಗೂ ವಿನಯ್ (8) ರೇಡಿಂಗ್‌ನಲ್ಲಿ ಗಮನ ಸೆಳೆದರು.

**ಪಿಂಕ್‌ಪ್ಯಾಂಥರ್ಸ್‌ಗೆ ಜಯ:** ದಿನದ ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 35–30ರಿಂದ ಪಟ್ನಾ ಪೈರೆಟ್ಸ್ ವಿರುದ್ಧ ಜಯಿಸಿತು.

ಅರ್ಜುನ್ ದೇಶವಾಲ್ ಅವರ ಅಮೋಘ ರೇಡಿಂಗ್‌ನಿಂದ ಜೈಪುರ ತಂಡದ ಜಯ ಸುಲಭವಾಯಿತು. ಅವರು ಒಟ್ಟು 17 ಅಂಕಗಳನ್ನು ಗಳಿಸಿದರು. ವಿ. ಅಜಿತ್ ಕೂಡ ಐದು ಅಂಕ ಗಳಿಸಿದರು.

**ಇಂದಿನ ಪಂದ್ಯಗಳು:** ಯು ಮುಂಬಾ–ಯು.ಪಿ ಯೋಧಾ (ರಾತ್ರಿ 7.30)

ದಬಂಗ್ ಡೆಲ್ಲಿ–ಗುಜರಾತ್ ಜೈಂಟ್ಸ್ (ರಾತ್ರಿ 8.30)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್



ಅಲೆಕ್ಸ್ ಹೇಲ್ಸ್ –ಎಎಫ್‌ಪಿ ಚಿತ್ರ

## ಬಟ್ಲರ್, ಹೇಲ್ಸ್ ಬಿರುಸಿನ ಆಟ: ಇಂಗ್ಲೆಂಡ್‌ಗೆ ಜಯ

**ಪರ್ತ್ (ಎಎಫ್‌ಪಿ):** ಆರಂಭಿಕ ಬ್ಯಾಟರ್‌ಗಳಾದ ಜೋಸ್ ಬಟ್ಲರ್ ಮತ್ತು ಅಲೆಕ್ಸ್ ಹೇಲ್ಸ್ ಅವರ ಅರ್ಧಶತಕದ ನೆರವಿನಿಂದ ಇಂಗ್ಲೆಂಡ್ ತಂಡ ಮೂರು ಪಂದ್ಯಗಳ ಟಿ20 ಸರಣಿಯ ಮೊದಲ ಹಣಾಹಣಿಯಲ್ಲಿ ಆಸ್ಟ್ರೇಲಿಯಾ ಎದುರು 8 ರನ್‌ಗಳಿಂದ ಗೆದ್ದಿತು.

ಪರ್ತ್‌ನಲ್ಲಿ ಭಾನುವಾರ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 208 ರನ್ ಪೇರಿಸಿತು. ಬಟ್ಲರ್ (68 ರನ್, 32 ಎ., 4X8, 6X6) ಮತ್ತು ಹೇಲ್ಸ್ (84 ರನ್, 51 ಎ., 4X12, 6X3) ಬಿರುಸಿನ ಆಟವಾಡಿ ಮೊದಲ ವಿಕೆಟ್‌ಗೆ 132 ರನ್ ಸೇರಿಸಿದರು. ಇದರಿಂದ ತಂಡ ಬೃಹತ್ ಮೊತ್ತ ಪೇರಿಸಿತು.

ಆತಿಥೇಯ ತಂಡ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗೆ 200 ರನ್ ಗಳಿಸಿತು. ಡೇವಿಡ್ ವಾರ್ನರ್ (73 ರನ್, 44 ಎ., 4X8, 6X2) ಮತ್ತು ಮಾರ್ಕಸ್ ಸ್ಟೋಯಿನಿಸ್ (35 ರನ್, 15 ಎ) ಅವರು ಭರ್ಜರಿ ಆಟವಾಡಿ ತಂಡವನ್ನು ಗೆಲುವಿನ ಸನಿಹ ತಂದು ನಿಲ್ಲಿಸಿದ್ದರು.

ಆದರೆ ಮಾರ್ಕ್ ವುಡ್ (34ಕ್ಕೆ 3) ಹಾಗೂ ಸ್ಯಾಮ್ ಕರನ್ (35ಕ್ಕೆ 2) ಕೊನೆಯ ಓವರ್‌ಗಳಲ್ಲಿ ಬಿಗುವಾದ ಬೌಲಿಂಗ್ ನಡೆಸಿ ಆಸ್ಟ್ರೇಲಿಯಾ ಗೆಲುವಿಗೆ ಅಡ್ಡಿಯಾದರು.

**ಸಂಕ್ಷಿಪ್ತ ಸ್ಕೋರ್:** ಇಂಗ್ಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 208 (ಜೋಸ್ ಬಟ್ಲರ್ 68, ಅಲೆಕ್ಸ್ ಹೇಲ್ಸ್ 84, ಕ್ರಿಸ್ ವೋಕ್ಸ್ 13, ನೇಥನ್ ಎಲಿಸ್ 20ಕ್ಕೆ 3, ಮಾರ್ಕಸ್ ಸ್ಟೊಯಿನಿಸ್ 36ಕ್ಕೆ 1) ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 200 (ಡೇವಿಡ್ ವಾರ್ನರ್ 73, ಮಿಚೆಲ್ ಮಾರ್ಷ್ 36, ಮಾರ್ಕಸ್ ಸ್ಟೋಯಿನಿಸ್ 35, ಮ್ಯಾಥ್ಯೂ ವೇಡ್ 21, ಮಾರ್ಕ್ ವುಡ್ 34ಕ್ಕೆ 3, ರೀಸ್ ಟೋಪ್ಲಿ 36ಕ್ಕೆ 2, ಸ್ಯಾಮ್ ಕರನ್ 35ಕ್ಕೆ 2) ಫಲಿತಾಂಶ: ಇಂಗ್ಲೆಡ್‌ಗೆ 8 ರನ್ ಗೆಲುವು

ರಾಷ್ಟ್ರೀಯ ಕ್ರೀಡಾಕೂಟ: ಕರ್ನಾಟಕ ಪುರುಷರ ತಂಡಕ್ಕೆ ಬೆಳ್ಳಿ

## ಗಾಲ್ಫ್: ಅವನಿ ಪ್ರಶಾಂತ್‌ಗೆ ಎರಡು ಚಿನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕದ ಗಾಲ್ಫರ್ ಅವನಿ ಪ್ರಶಾಂತ್ ಅವರು ಗುಜರಾತ್‌ನಲ್ಲಿ ನಡೆಯುತ್ತಿರುವ 36ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಎರಡು ಚಿನ್ನ ಗೆದ್ದುಕೊಂಡರು.

ಅಹಮದಾಬಾದ್‌ನ ಕೆನ್ಸ್‌ವಿಲ್ ಗಾಲ್ಫ್ ಮತ್ತು ಕೌಂಟಿ ಕ್ಲಬ್‌ನಲ್ಲಿ ನಡೆದ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಗಾಲ್ಫರ್ ಅವನಿ ಚಾಂಪಿಯನ್ ಆದರು.

ಮೂರನೇ ಸುತ್ತಿನ ಬಳಿಕ ಪಂಜಾಬ್‌ನ ಅಮನ್‌ದೀಪ್ ಕೌರ್ ಅವರಿಗಿಂತ ನಾಲ್ಕು ಶಾಟ್‌ಗಳಿಂದ ಹಿಂದಿದ್ದ ಅವನಿ, ಭಾನುವಾರ ನಡೆದ ಕೊನೆಯ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡಿದರು. ನಾಲ್ಕು ಸುತ್ತುಗಳಲ್ಲಿ ಒಟ್ಟು 288 ಸ್ಕೋರ್‌ಗಳೊಂದಿಗೆ (71, 74, 71, 72) ಅಗ್ರಸ್ಥಾನ ಪಡೆದರು.



ಕರ್ನಾಟಕ ತಂಡದ ಗಾಲ್ಫರ್‌ಗಳಾದ ಆರ್ಯನ್, ಅವನಿ ಪ್ರಶಾಂತ್, ದುರ್ಗಾ ಮತ್ತು ತ್ರಿಶೂಲ್ ಚಿಣ್ಣಪ್ಪ ಪದಕ ತೋರಿಸಿ ಸಂಭ್ರಮಿಸಿದರು

36th NATIONAL GAMES GUJARAT 2022 Celebrating Unity Through Sports

ಕರ್ನಾಟಕ ತಂಡದ ದುರ್ಗಾ ನಿತ್ತೂರ್ ಅವರು ಆರನೇ ಸ್ಥಾನ ಪಡೆದರು. ಅವನಿ ಮತ್ತು ದುರ್ಗಾ ಅವರ ಒಟ್ಟಾರೆ ಪ್ರದರ್ಶನವು ತಂಡ ವಿಭಾಗದಲ್ಲಿ ಕರ್ನಾಟಕಕ್ಕೆ ಚಿನ್ನ ತಂದುಕೊಟ್ಟಿತು.

ಪುರುಷರ ವಿಭಾಗದಲ್ಲಿ ಆರ್ಯನ್ ರೂಪಾ ಆನಂದ್ ಮತ್ತು ತ್ರಿಶೂಲ್ ಚಿಣ್ಣಪ್ಪ ಅವರನ್ನೊಳಗೊಂಡ ತಂಡ ಬೆಳ್ಳಿ ಜಯಿಸಿತು. ಚಂಡೀಗಡ ತಂಡ ಚಿನ್ನ ಗೆದ್ದಿತು. ಇದೇ ತಂಡದ ಕರಣ್‌ದೀಪ್ ಕೊಚ್ಚಾರ್ ಪುರುಷರ ವೈಯಕ್ತಿಕ ವಿಭಾಗದ ಚಿನ್ನ ಜಯಿಸಿದರು.

ವೈಯಕ್ತಿಕ ವಿಭಾಗದಲ್ಲಿ ಆರ್ಯನ್ ಆರನೇ ಸ್ಥಾನ ಪಡೆದರೆ, ತ್ರಿಶೂಲ್ ಅವರು ಜಂಟಿ 13ನೇ ಸ್ಥಾನ ಗಳಿಸಿದರು.

**ಕ್ವಾರ್ಟರ್ ಫೈನಲ್‌ಗೆ ಲವ್ಲಿನಾ (ಪಿಟಿಐ ವರದಿ):** ಒಲಿಂಪಿಕ್ ಕಂಚಿನ ಪದಕ ವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕ ವಿಜೇತರಾದ ಮೊಹಮ್ಮದ್ ಹುಸಾಮುದ್ದೀನ್ ಹಾಗೂ ಜಾಸ್ಮಿನ್ ಲಂಬೋರಿಯ ಅವರು ರಾಷ್ಟ್ರೀಯ ಕೂಟದಲ್ಲಿ ಪದಕ ಖಚಿತಪಡಿಸಿಕೊಂಡರು. ಈ ಬಾಕ್ಸರ್‌ಗಳು ತಮ್ಮ ತಮ್ಮ ವಿಭಾಗಗಳಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

## ಕಿಕ್‌ಸ್ಟಾರ್ಟ್ ಚಾಂಪಿಯನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಕೆಎಸ್‌ಎಫ್‌ಎ ಆಶ್ರಯದ ಕರ್ನಾಟಕ ಮಹಿಳಾ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಕಿಕ್‌ಸ್ಟಾರ್ಟ್ ತಂಡ 3–2 ಗೋಲುಗಳಿಂದ ಮಿಸಾಕಾ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ಎರಡು ಗೋಲುಗಳನ್ನು ಗಳಿಸಿದ ಕಾವ್ಯಾ ಪಕ್ಕಿರಿಸ್ವಾಮಿ (33 ಮತ್ತು 88ನೇ ನಿ.) ಅವರು ಕಿಕ್‌ಸ್ಟಾರ್ಟ್ ತಂಡದ ಗೆಲುವಿನ ರೂವಾರಿ ಎನಿಸಿಕೊಂಡರು. ಶಿವಾನಿ ಶರ್ಮಾ (61ನೇ ನಿ.) ಒಂದು ಗೋಲು ತಂದಿತ್ತರು.

ಮಿಸಾಕಾ ತಂಡದ ಪರ ಮಿಥಾಲಿ ರಮಣಿ (13ನೇ ನಿ.) ಮತ್ತು ತನ್ವಿ ಹನ್ಸ್ (45 + 3) ಅವರು ಚೆಂಡನ್ನು ಗುರಿ ಸೇರಿಸಿದರು.

ಒಟ್ಟು 22 ಗೋಲುಗಳನ್ನು ಗಳಿಸಿದ ಕಾವ್ಯಾ ಅವರು ಟೂರ್ನಿಯ ಶ್ರೇಷ್ಠ ಆಟಗಾರ್ತಿ ಪ್ರಶಸ್ತಿ ಗೆದ್ದುಕೊಂಡರು. ಅದ್ರಿಜಾ ಸರಖೆಲ್ (ಗೋಲ್‌ಕೀಪರ್), ತಾರಾ ಆನಂದ್ (ಡಿಫೆಂಡರ್), ಲಾಲ್‌ನುಮ್ಸಿಯಾಮಿ (ಮಿಡ್‌ಫೀಲ್ಡರ್) ಮತ್ತು ನಿಸಿಲಿಯಾ ಮಜಾವ್ (ಸ್ಟ್ರೈಕರ್) ಅವರು ವಿವಿಧ ವಿಭಾಗಗಳಲ್ಲಿ ವೈಯಕ್ತಿಕ ಪ್ರಶಸ್ತಿ ಪಡೆದರು.

### ಹೈದರಾಬಾದ್–ಮುಂಬೈ ಪಂದ್ಯ ಡ್ರಾ

**ಪುಣೆ:** ಹೈದರಾಬಾದ್ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳ ನಡುವಣ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯ 3–3 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಇಲ್ಲಿನ ಶಿವ ಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಜಿದ್ದಾಜಿದ್ದಿನ ಪೈಪೋಟಿ ನಡೆಯಿತು.

ಹೈದರಾಬಾದ್ ತಂಡಕ್ಕೆ ಜಾವೊ ವಿಟೊರ್ (45 ಮತ್ತು 76ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಇನ್ನೊಂದು ಗೋಲನ್ನು ಹಲಿಚರಣ್ (51) ತಂದಿತ್ತರು.

ಮುಂಬೈ ಪರ ಗ್ರೆಗ್ ಸ್ಟಿವರ್ಟ್ (68) ಮತ್ತು ನೊಗುಯೆರ (85) ಗೋಲು ಗಳಿಸಿದರೆ, ಇನ್ನೊಂದು ಗೋಲು ಹೈದರಾಬಾದ್ ತಂಡದ ಡಿಫೆಂಡರ್ ಚಿಂಗ್ಲೆಸನ ಸಿಂಗ್ ಅವರಿಂದ 'ಉಡುಗೊರೆ' ರೂಪದಲ್ಲಿ ಬಂತು.

ಮಹಿಳೆಯರ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿ

## ಹರ್ಮನ್ ಬಳಗಕ್ಕೆ ಥಾಯ್ಲೆಂಡ್ ಸವಾಲು

**ಸಿಲೆಟ್ (ಪಿಟಿಐ):** ಮಹಿಳೆಯರ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಈಗಾಗಲೇ ಸೆಮಿಫೈನಲ್ ಪ್ರವೇಶ ಗಿಟ್ಟಿಸಿಕೊಂಡಿರುವ ಭಾರತ ತಂಡವು ಸೋಮವಾರ ಲೀಗ್ ಹಂತದ ಕೊನೆಯ ಪಂದ್ಯ ಆಡಲಿದೆ.

ಹರ್ಮನ್‌ಪ್ರೀತ್ ಕೌರ್ ಬಳಗವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಇದರಿಂದಾಗಿ ಈ ಪಂದ್ಯದಲ್ಲಿ ಕೆಲವು ಪ್ರಯೋಗಗಳನ್ನು ಮಾಡುವ ಸಾಧ್ಯತೆ ಇದೆ. ಬೆಂಚ್‌ನಲ್ಲಿರುವ ಆಟಗಾರ್ತಿಯರಿಗೆ ಕಣಕ್ಕಿಳಿಯುವ ಅವಕಾಶ ಸಿಗಬಹುದು. ಆರಂಭಿಕ ಜೋಡಿ ಶಫಾಲಿ ವರ್ಮಾ ಹಾಗೂ ಸ್ಮೃತಿ ಮಂದಾನ ಅವರು ಶನಿವಾರ ಬಾಂಗ್ಲಾ ವಿರುದ್ಧದಲ್ಲಿ ಅಮೋಘ ಆಟವಾಡಿತ್ತು. ಅವರಿಬ್ಬರೂ ಲಯಕ್ಕೆ ಮರಳಿರುವುದರಿಂದ ತಂಡದ ಮನೋಬಲ ಮತ್ತಷ್ಟು ವೃದ್ಧಿಸಿದೆ.

ಈ ಟೂರ್ನಿಯಲ್ಲಿ ಭಾರತ ತಂಡವು ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಮಾತ್ರ ಸೋತಿದೆ. ಆದರೆ ಥಾಯ್ಲೆಂಡ್ ತಂಡವು ಪಾಕ್ ಬಳಗವನ್ನು ಹಣಿದಿತ್ತು. ಬಲಿಷ್ಠ ಭಾರತಕ್ಕೂ ಕಠಿಣ ಸವಾಲೊಡ್ಡುವ ಹುಮ್ಮಸ್ಸಿನಲ್ಲಿ ನೇರುಮೋಯ್ ಚೈವೈ ನಾಯಕತ್ವದ ಥಾಯ್ಲೆಂಡ್ ಇದೆ. ಪಾಕ್ ಎದರು ಅರ್ಧಶತಕ ಹೊಡೆದು ಮಿಂಚಿದ್ದ ನಥಾಕನ್ ಚಾಂತಮ್ ಮತ್ತು ಬೌಲಿಂಗ್‌ನಲ್ಲಿ ಟಿಪೊಚ್ ಅವರು ತಂಡದ ಶಕ್ತಿಯಾಗಿದ್ದಾರೆ.

**ಆರಂಭ:** ಮಧ್ಯಾಹ್ನ 1ರಿಂದ



ಭಾರತ ಮಹಿಳಾ ತಂಡದ ಆಟಗಾರ್ತಿಯರು

**ಸಂಕ್ಷಿಪ್ತ ಸುದ್ದಿ**

### ಜಪಾನ್ ಓಪನ್: ಫ್ರಿಟ್ಜ್ ಚಾಂಪಿಯನ್


ಟೇಲರ್ ಫ್ರಿಟ್ಜ್

**ಟೋಕಿಯೊ (ಎಎಫ್‌ಪಿ):** ಅಮೆರಿಕದ ಟೇಲರ್ ಫ್ರಿಟ್ಜ್ ಅವರು ಇಲ್ಲಿ ನಡೆದ ಜಪಾನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್‌ನಲ್ಲಿ ಅವರು ತಮ್ಮ ಗೆಳೆಯ ಹಾಗೂ ಅಮೆರಿಕದವರೇ ಆದ ಫ್ರಾನ್ಸೆಸ್ ಟೈಫೊ ಅವರನ್ನು 7-6 (7/3), 7-6 (7/2) ರಲ್ಲಿ ಮಣಿಸಿದರು.

ಈ ಗೆಲುವಿನ ಮೂಲಕ ಫ್ರಿಟ್ಜ್ ಅವರು ಇದೇ ಮೊದಲ ಬಾರಿ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರ 10 ರಲ್ಲಿ ಕಾಣಿಸಿಕೊಂಡಿದ್ದು, ಎಂಟನೇ ಸ್ಥಾನ ಪಡೆದಿದ್ದಾರೆ.

ಅಮೆರಿಕದ ಆಟಗಾರನೊಬ್ಬ ಜಪಾನ್ ಓಪನ್‌ನಲ್ಲಿ ಪ್ರಶಸ್ತಿ ಜಯಿಸಿದ್ದು 26 ವರ್ಷಗಳ ಬಳಿಕ ಇದೇ ಮೊದಲು. 1996 ರಲ್ಲಿ ಪೀಟ್ ಸಾಂಪ್ರಾಸ್ ಇಲ್ಲಿ ಕೊನೆಯದಾಗಿ ಚಾಂಪಿಯನ್ ಆಗಿದ್ದರು.

### ಪಿಪಿಸಿ, ಮೌಂಟ್ಸ್ ಕ್ಲಬ್‌ಗೆ ಪ್ರಶಸ್ತಿ

**ಬೆಂಗಳೂರು:** ಪಿಪಿಸಿ ಮತ್ತು ಮೌಂಟ್ಸ್ ಕ್ಲಬ್ ತಂಡಗಳು ಭಾನುವಾರ ಇಲ್ಲಿ ಕೊನೆಗೊಂಡ 18 ವರ್ಷದೊಳಗಿನವರ ರಾಜ್ಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕ ಹಾಗೂ ಬಾಲಕಿಯರ ವಿಭಾಗಗಳಲ್ಲಿ ಚಾಂಪಿಯನ್ ಆದವು.

ಪಿಪಿಸಿ ಕೊನೆಯ ಲೀಗ್ ಪಂದ್ಯದಲ್ಲಿ 81–66 ರಲ್ಲಿ ಬೀಗಲ್ಸ್ ತಂಡವನ್ನು ಮಣಿಸಿದರೆ, ಮೌಂಟ್ಸ್ 61–54 ರಲ್ಲಿ ಬಿಸಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು.

### ನಡಾಲ್ ದಂಪತಿಗೆ ಗಂಡುಮಗು

**ಮ್ಯಾಡ್ರಿಡ್ (ಎಪಿ):** ಟೆನಿಸ್ ತಾರೆ ರಫೆಲ್ ನಡಾಲ್ ಅವರ ಪತ್ನಿ ಮೇರಿ ಪೆರೆಲೊ ಭಾನುವಾರ ಗಂಡುಮಗುವಿಗೆ ಜನ್ಮ ನೀಡಿದ್ದಾರೆ. ಪರೆಲೊ ಅವರನ್ನು ಶನಿವಾರ ಇಲ್ಲಿ ಆಸ್ಪತ್ರೆಯೊಂದಕ್ಕೆ ದಾಖಲಿಸಲಾಗಿತ್ತು ಎಂದೂ ಸ್ಪೇನ್ ಮಾಧ್ಯಮಗಳು ವರದಿ ಮಾಡಿವೆ.

ಫಾರ್ಮುಲಾ ಒನ್: ಜಪಾನ್ ಗ್ರ್ಯಾನ್ ಪಿ ರೇಸ್‌ನಲ್ಲಿ ಗೆಲುವು

# ವರ್ಸ್ಟಾಪನ್‌ಗೆ ಸತತ 2ನೇ ವಿಶ್ವ ಕಿರೀಟ

**ಸುಜುಕಾ, ಜಪಾನ್ (ಎಪಿ/ ಎಎಫ್‌ಪಿ):** ರೆಡ್ ಬುಲ್ ತಂಡದ ಮ್ಯಾಕ್ಸ್ ವರ್ಸ್ಟಾಪನ್ ಅವರು ಭಾನುವಾರ ನಡೆದ ಜಪಾನ್ ಗ್ರ್ಯಾನ್ ಪಿ ರೇಸ್‌ನಲ್ಲಿ ಗೆಲುವು ಪಡೆದರಲ್ಲದೆ, ಸತತ ಎರಡನೇ ಬಾರಿ ಫಾರ್ಮುಲಾ ಒನ್ ವಿಶ್ವಚಾಂಪಿಯನ್‌ಷಿಪ್ ಗೆದ್ದುಕೊಂಡರು.

ಜಪಾನ್ ಗ್ರ್ಯಾನ್ ಪ್ರಿನಲ್ಲಿ ಗೆಲ್ಲುವ ಮೂಲಕ ವರ್ಸ್ಟಾಪನ್ ಚಾಲಕರ ಪಟ್ಟಿಯಲ್ಲಿ ತಮ್ಮ ಪಾಯಿಂಟ್‌ಗಳನ್ನು 366ಕ್ಕೆ ಹೆಚ್ಚಿಸಿಕೊಂಡರು. ಎರಡನೇ ಸ್ಥಾನದಲ್ಲಿರುವ ಸ್ಪರ್ಧಿಗಿಂತ 113 ಪಾಯಿಂಟ್ ಮುನ್ನಡೆ ಸಾಧಿಸಿದರಲ್ಲದೆ, ಋತುವಿನಲ್ಲಿ ಇನ್ನೂ ನಾಲ್ಕು ರೇಸ್‌ಗಳು ಬಾಕಿಯುಳಿದಿರುವಂತೆಯೇ ಚಾಂಪಿಯನ್ ಆದರು.

ನಾಲ್ಕು ರೇಸ್‌ಗಳು ಬಾಕಿಯಿದ್ದಾಗಲೇ ಚಾಂಪಿಯನ್‌ಪಟ್ಟ ಗೆದ್ದುಕೊಂಡ ಮೂರನೇ ಚಾಲಕ ಎಂಬ ಗೌರವ ಅವರಿಗೆ ಒಲಿದಿದೆ. ಮೈಕಲ್ ಶುಮಾಕರ್ ಮತ್ತು ಸೆಬಾಸ್ಟಿಯನ್ ವೆಟೆಲ್ ಮಾತ್ರ ಈ ಸಾಧನೆ ಮಾಡಿದ್ದರು.

ಫೆರಾರಿ ತಂಡದ ಚಾರ್ಲ್ಸ್ ಲೆಕ್ಲೆರ್ಕ್ ಮತ್ತು ರೆಡ್‌ಬುಲ್ ತಂಡದವರೇ ಆದ ಸೆರ್ಜಿಯೊ ಪೆರೆಜ್‌ಗೆ ಮಾತ್ರ ಪಾಯಿಂಟ್ ಪಟ್ಟಿಯಲ್ಲಿ ವರ್ಸ್ಟಾಪನ್ ಅವರನ್ನು ಹಿಂದಿಕ್ಕುವ ಅವಕಾಶ ಇತ್ತು. ಆದರೆ ಜಪಾನ್ ಗ್ರ್ಯಾನ್ ಪ್ರಿ ಗೆಲ್ಲಲು ವಿಫಲವಾದ್ದರಿಂದ ಇಬ್ಬರೂ ಆ ಅವಕಾಶ ಕಳೆದುಕೊಂಡರು.

ಪೆರೆಜ್ 253 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, 252 ಪಾಯಿಂಟ್ ಹೊಂದಿರುವ ಲೆಕ್ಲೆರ್ಕ್ ಬಳಿಕದ ಸ್ಥಾನದಲ್ಲಿದ್ದಾರೆ. ಇವರಲ್ಲಿ ಒಬ್ಬರು ಇನ್ನುಳಿದ ನಾಲ್ಕು ರೇಸ್‌ಗಳನ್ನು ಗೆದ್ದರೂ ವರ್ಸ್ಟಾಪನ್ ಅವರನ್ನು ಹಿಂದಿಕ್ಕಲು ಆಗದು.

ನೆದರ್ಲೆಂಡ್ಸ್‌ನ ವರ್ಸ್ಟಾಪನ್ ಈ ಋತುವಿನಲ್ಲಿ ಇದುವರೆಗೆ ನಡೆದಿರುವ 18 ರೇಸ್‌ಗಳಲ್ಲಿ 12ನ್ನು ಗೆದ್ದುಕೊಂಡಿದ್ದಾರೆ.

**ಮಳೆಯಲ್ಲೇ ನಡೆದ ರೇಸ್:** ಜಪಾನ್ ಗ್ರ್ಯಾನ್ ಪ್ರಿ ರೇಸ್ ಮಳೆಯಲ್ಲೇ ನಡೆಯಿತು. 53 ಲ್ಯಾಪ್‌ಗಳ ರೇಸ್‌ಅನ್ನು ಪ್ರತಿಕೂಲ ಹವಾಮಾನದ ಕಾರಣ 28 ಲ್ಯಾಪ್‌ಗಳಿಗೆ ಮೊಟಕುಗೊಳಿಸಲಾಯಿತು.

ಮಳೆಯಿಂದಾಗಿ ಎಲ್ಲ ಚಾಲಕರೂ ಕಾರಿನ ಮೇಲೆ ನಿಯಂತ್ರಣ ಸಾಧಿಸಲು ಹರಸಾಹಸಪಟ್ಟರು. ಫೆರಾರಿ ತಂಡದ ಕಾರ್ಲೋಸ್ ಸೇಂಜ್ ಅವರ ಕಾರು ನಿಯಂತ್ರಣ ಕಳೆದುಕೊಂಡು ಟ್ರ್ಯಾಕ್‌ನಿಂದ ಹೊರಗೆ ಹೋಯಿತು. ಎರಡು ಲ್ಯಾಪ್‌ಗಳ ಬಳಿಕ ರೇಸ್‌ಅನ್ನು ನಿಲ್ಲಿಸಲಾಯಿತು. ಒಂದೂವರೆ ಗಂಟೆಯ ಬಳಿಕ ಮತ್ತೆ ಆರಂಭಿಸಲಾಯಿತು.

'ಪೋಲ್ ಪೊಸಿಷನ್'ನಿಂದ ಸ್ಪರ್ಧೆ ಆರಂಭಿಸಿದ್ದ ವರ್ಸ್ಟಾಪನ್‌ಗೆ ಆರಂಭದಲ್ಲಿ ಲೆಕ್ಲೆರ್ಕ್ ತುರುಸಿನ ಪೈಪೋಟಿ ನೀಡಿದರು. ಅದ್ಭುತ ಚಾಲನಾ ಕೌಶಲ ಮೆರೆದ ರೆಡ್‌ಬುಲ್ ಚಾಲಕ ಮೊದಲ ಸ್ಥಾನ ಪಡೆದರು.

ಲೆಕ್ಲೆರ್ಕ್ ಎರಡನೆಯವರಾಗಿ ಸ್ಪರ್ಧೆ ಕೊನೆಗೊಳಿಸಿದ್ದರು. ಆದರೆ ಅವರಿಗೆ ಐದು ಸೆಕೆಂಡುಗಳ ಪೆನಾಲ್ಟಿ ವಿಧಿಸಿದ್ದರಿಂದ ಮೂರನೇ ಸ್ಥಾನ ಪಡೆದರು. ಸೆರ್ಜಿಯೊ ಪೆರೆಜ್‌ಗೆ ಎರಡನೇ ಸ್ಥಾನ ಲಭಿಸಿತು.



ಜಪಾನ್ ಗ್ರ್ಯಾನ್ ಪ್ರಿ ಗೆದ್ದ ಮ್ಯಾಕ್ಸ್ ವರ್ಸ್ಟಾಪನ್ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

## ಕ್ರಿಕೆಟ್: ಕಿವೀಸ್‌ಗೆ ಗೆಲುವು

**ಕ್ರೈಸ್ಟ್‌ಚರ್ಚ್:** ಡೆವೊನ್ ಕಾನ್ವೆ (70; 51ಎ, 4X7, 6X1) ಮಿಂಚಿನ ಅರ್ಧಶತಕದ ಬಲದಿಂದ ನ್ಯೂಜಿಲೆಂಡ್ ತಂಡವು ಭಾನುವಾರ ಇಲ್ಲಿ ನಡೆದ ತ್ರಿಕೋನ ಸರಣಿಯಲ್ಲಿ ಬಾಂಗ್ಲಾದೇಶ ಎದುರು 8 ವಿಕೆಟ್‌ಗಳ ಜಯ ಸಾಧಿಸಿತು.

ಹೆಗ್ಲಿ ಓವಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಪಿನ್ನರ್ ಈಶ್ ಸೋಧಿ ಹಾಗೂ ಬ್ರೆಸ್ ವೆಲ್ ತಲಾ ಎರಡು ವಿಕೆಟ್ ಗಳಿಸಿ ಬಾಂಗ್ಲಾದ ಅಗ್ರಕ್ರಮಾಂಕದ ಬ್ಯಾಟಿಂಗ್ ಪಡೆಯನ್ನು ನಿಯಂತ್ರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 137 ರನ್ ಗಳಿಸಿತು. ಅದಕ್ಕುತ್ತರವಾಗಿ ಆತಿಥೇಯ ತಂಡವು 17.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 142 ರನ್ ಗಳಿಸಿತು.

**ಸಂಕ್ಷಿಪ್ತ ಸ್ಕೋರು:** ಬಾಂಗ್ಲಾದೇಶ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 137 (ನಜ್ಮುಲ್ ಹುಸೇನ್ ಶಾಂತೊ 33, ಅಫಿಫ್ ಹುಸೇನ್ 24, ನರುಲ್ ಹಸನ್ ಔಟಾಗದೆ 25, ಟ್ರೆಂಟ್ ಬೌಲ್ಟ್ 25ಕ್ಕೆ2, ಟಿಮ್ ಸೌಥಿ 34ಕ್ಕೆ2, ಬ್ರೆಸ್‌ವೆಲ್ 14ಕ್ಕೆ2, ಈಶ್ ಸೋಧಿ 31ಕ್ಕೆ2) ನ್ಯೂಜಿಲೆಂಡ್: 17.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 142 (ಫಿನ್ ಅಲೆನ್ 16, ಡೆವೊನ್ ಕಾನ್ವೆ ಔಟಾಗದೆ 70, ಕೇನ್ ವಿಲಿಯಮ್ಸನ್ 30, ಗ್ಲೆನ್ ಫಿಲಿಪ್ಸ್ ಔಟಾಗದೆ 23) ಫಲಿತಾಂಶ: ನ್ಯೂಜಿಲೆಂಡ್‌ಗೆ 8 ವಿಕೆಟ್‌ಗಳ ಜಯ.



ನ್ಯೂಜಿಲೆಂಡ್ ತಂಡದ ಸ್ಪಿನ್ನರ್ ಈಶ್ ಸೋಧಿ, ವಿಕೆಟ್‌ಕೀಪರ್ ಡೆವೊನ್ ಕಾನ್ವೆ ಹಾಗೂ ನಾಯಕ ಕೇನ್ ವಿಲಿಯಮ್ಸನ್ ಸಂಭ್ರಮ –ಎಎಫ್‌ಪಿ ಚಿತ್ರ

## ಜೊಕೊಗೆ 90ನೇ ಕಿರೀಟ


ಟ್ರೋಫಿಯೊಂದಿಗೆ ಜೊಕೊವಿಚ್ – ಎಎಫ್‌ಪಿ ಚಿತ್ರ

**ಅಸ್ತಾನ, ಕಜಕಸ್ತಾನ (ಎಎಫ್‌ಪಿ):** ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಅಸ್ತಾನದಲ್ಲಿ ನಡೆದ ಎಟಿಪಿ ಟೂರ್ನಿಯಲ್ಲಿ ಚಾಂಪಿಯನ್ ಆಗಿ, ವೃತ್ತಿ ಜೀವನದ 90ನೇ ಪ್ರಶಸ್ತಿ ಗೆದ್ದ ಸಾಧನೆ ಮಾಡಿದರು.

ಭಾನುವಾರ ನಡೆದ ಫೈನಲ್‌ನಲ್ಲಿ 35 ವರ್ಷದ ಜೊಕೊವಿಚ್ 6–3, 6–4 ರಲ್ಲಿ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಾಸ್ ವಿರುದ್ಧ ಜಯಿಸಿದರು. ಇಲ್ಲಿ ಗೆದ್ದ ಕಾರಣ ಅವರು ಈ ವರ್ಷದ ಕೊನೆಯಲ್ಲಿ ನಡೆಯಲಿರುವ ಎಟಿಪಿ ಫೈನಲ್ಸ್‌ನಲ್ಲಿ ಆಡುವ ಅರ್ಹತೆ ಪಡೆದರು.

ಜೊಕೊವಿಚ್‌ಗೆ ದೊರೆತ ಸತತ 9ನೇ ಗೆಲುವು ಇದು. ಕಳೆದ ವಾರ ಟೆಲ್ ಅವೀವ್‌ನಲ್ಲಿ ನಡೆದಿದ್ದ ಎಟಿಪಿ ಟೂರ್ನಿಯಲ್ಲಿ ಅವರು ಚಾಂಪಿಯನ್ ಆಗಿದ್ದರು.

ಜುಲೈನಲ್ಲಿ ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಜಯಿಸಿದ್ದ ಜೊಕೊವಿಚ್, ಕೋವಿಡ್ ಲಸಿಕೆ ಪಡೆಯದ ಕಾರಣ ಅಮೆರಿಕ ಓಪನ್‌ನಲ್ಲಿ ಆಡುವ ಅವಕಾಶ ಕಳೆದುಕೊಂಡಿದ್ದರು. ಲಂಡನ್‌ನಲ್ಲಿ ನಡೆದ ರೋಜರ್ ಫೆಡರರ್ ಅವರ ವಿದಾಯ ಟೂರ್ನಿ ಲೇವರ್ ಕಪ್‌ನಲ್ಲಿ ಆಡಿದ್ದರು.